ಸಂಕಲನ

ಸಂಪುಟ ೮
ಮೇ + ಜೂನ್
೨೦೦೮
೩೯

ಸಂಪಾದಕರು
ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

FORM-IV

(Sec. Rule-8)

Statement about ownership and other particulars about SANKALANA Bimonthly

1.	Name of publication	: SANKALANA
2.	Place of publication	: Dharwad
3.	Periodicity of publication	: Bimonthly
4.	Language	: Kannada
5.	Name of the editor & Address	: Dr. Siddhaling Pattanshetti Hoomane, Shridevinagar Vidyagiri, Dharwad-580 004
	Nationality	: Indian
6.	Name of the publisher & Address	: Dr. Hema Pattanshetti Hoomane, Shridevinagar Vidyagiri, Dharwad-580 004
7.	Name of the printer & Address	: Saraswati Offset Printers Shivaji Road, Dharwad-580 001
	Nationality	: Indian
8.	Registration No.	: RNI No. KARKAN 14160/10/1/ 2002-TC
9.	Proprietor	: Sankalana Prakashana Hoomane, Shridevinagar Vidyagiri, Dharwad-580 004

I, Dr. Hema Pattanshetti, hereby declare that the particulars given above are true to the best of my knowledge and belief.

Sd/- **(Hema Pattanshetti)**
Publisher

Date : 01-05-2008

ಅನನ್ಯ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೪

• ಇತ್ತೀಚಿನ ನಾಲ್ಕು ಹೊಸ ಪುಸ್ತಕಗಳು •

೧. ಚಿತ್ರಲೇಖಾ – ಅನು-ಕತೆಗಳು – ಸಿದ್ಧಲಿಂಗ ಪಟ್ಟಣಶೆಟ್ಟಿ	ರೂ. ೭೦/-
೨. ವಿವೇಚನ – ವಿಮರ್ಶೆ – ಸಿದ್ಧಲಿಂಗ ಪಟ್ಟಣಶೆಟ್ಟಿ	ರೂ. ೭೦/-
೩. ಉಸಿರ ಬದುವಿನ ಗುಂಟ – ಕವಿತೆ – ಹೇಮಾ ಪಟ್ಟಣಶೆಟ್ಟಿ	ರೂ. ೬೦/-
೪. ಸೀಗಲ್ – ಅನು-ನಾಟಕ – ಹೇಮಾ ಪಟ್ಟಣಶೆಟ್ಟಿ	ರೂ. ೭೦/-

ಸಂಕಲನ

ಮೇ + ಜೂನ್ ೨೦೦೮

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ – ೫೮೦ ೦೦೪

R N I No. KARKAN 14160 /10 / 1 / 2002 - TC

SANKALANA :

A Kannada Literary Magazine

Volume 7, Issue 3 : May + June 2008

Edited by

Dr. Siddhaling Pattanshetti

Hoomane, Shridevinagar, Vidyagiri, Dharwad - 580 004

E mail :sankalana.sp@gmail.com

siddhaling.pattanshetti@rediffmail.com

Printed by Saraswati Offset Printers, Shivaji Road, Dharwad- 580 001

●

ಸಂಕಲನ – ೩೯

ಸಂಪುಟ ೭, ಸಂಚಿಕೆ ೩ : ಮೇ + ಜೂನ್ ೨೦೦೮

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪

✆ :೦೮೩೬–೨೪೬ ೨೭೧೮

ಸಿ.ಪ. : ೯೪೪೮೬ ೩೦೬೩೭

ಹೇಮಾ: ೯೪೪೮೮ ೬೧೬೦೪

ಲೇಖನ ಕಳಿಸಲು **E mail : siddhaling.pattanshetti@rediffmail.com**

sankalana.sp@gmail.com

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಇತ್ಯಾದಿ ಎಲ್ಲ ಆಯಾ ಲೇಖಕರವು.

ವಾರ್ಷಿಕ ಚಂದಾ ರೂ. ೨೦೦/– (ಚೆಕ್ ೨೨೦/–)

೨೦೦೮, ೨೦೦೯, ೨೦೧೦ ಈ ಮೂರು ವರ್ಷಗಳ ಚಂದಾ ರೂ. ೫೦೦/– (ಚೆಕ್ ೫೫೦/–)

ಡಿಟಿಪಿ + ಮುದ್ರಣ :

ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಶಿವಾಜಿ ಬೀದಿ, ಧಾರವಾಡ – ೫೮೦ ೦೦೧

✆ : ೦೮೩೬–೨೪೪೪ ೧೦೬೫

ಪರಿವಿಡಿ : ಸಂಕಲನ - ೩೯

೧. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ –೩೬ – ಗಿರಿಜಾ ಶಾಸ್ತ್ರಿ ೫–೧೦

೨. ಸಾವು – ಎಂ. ಎಸ್. ರುದ್ರೇಶ್ವರಸ್ವಾಮಿ ೧೦

೩. ನನ್ನ ಶಾಲಾ ಗುರುಗಳು : ಗೌರವ–೨೦ –ಕು. ಗೋ. ೧೧–೧೫

೪. ನನ್ನ ಶಾಲಾ ಗುರುಗಳು : ಗೌರವ–೨೧ –ಕೆ. ವಿ. ಉಭಯಭಾರತಿ ೧೬–೨೦

೫. ನಗುವ ಕವಿತೆ –ರಾಮಗಿರಿ ರವೀಂದ್ರ ೨೦

೬. ಕಾರಂತರ ಜೀವಂತ ಪಾತ್ರಗಳು – ೬ + ೭ –ಸಿ. ಸೋಮಶೇಖರಯ್ಯ ೨೧–೩೨

೭. ಹನಿ ಹನಿ ಹನಿ –ಸಿ. ಪಿ. ಕೆ. ೩೨+೫೭

೮. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪು –ಮ. ನ. ಜವರಯ್ಯ ೩೩–೪೭

೯. ಸೌಂದರ್ಯ –ರಾಧಿಕಾ ಕಾಖಂಡಿಕಿ ೪೭–೪೮

೧೦. ನೆನಪ ನೆರಳಲಿ –ರಾಯಚೂರು ಲಕ್ಷ್ಮೀದೇವಿ ಶಾಸ್ತ್ರಿ ೪೮

೧೧. ರುಬಾಯಿ ಸಾಹಿತ್ಯ –ಜಂಬಣ್ಣ ಅಮರಚಿಂತ ೪೯–೫೨

೧೨. ಭಿನ್ನಹಕೆ... : 'ಅರಮನೆ'ಯ ನಿವೇದನೆ –ಕುಂ. ವೀರಭದ್ರಪ್ಪ ೫೩–೫೭

೧೩. ಇತ್ತೀಚಿನ ಕನ್ನಡ ಸಾಹಿತ್ಯದ ಸ್ಥಿತಿ–ಗತಿ –ಸಿ. ಎನ್. ರಾಮಚಂದ್ರನ್ ೫೮–೬೯

೧೪. ಎರಡು ಕವಿತೆಗಳು – ನ. ಭ. ನೆಂಪು ೭೦

೧೫. ಮೀರಾ ಪ್ರೇಮ ಧಾರಾ : ೨ –ಬಸವರಾಜ ವಕ್ಕುಂದ ೭೧–೭೩

೧೬. ಪುಸ್ತಕ ಪರಿಶೀಲನೆ ೭೩–೭೫

೧. ದೇಸಿ ನಗು : ಎಂ. ಎಸ್. ಮೂರ್ತಿ;

೨. ಕಲಾಕ್ಷೇತ್ರದ ಮೆಟ್ಟಿಲ ಮಹಿಮೆ : ಸೂತ್ರಧಾರ ರಾಮಯ್ಯ,

–ನಾ. ದಾಮೋದರ ಶೆಟ್ಟಿ

೩. ಪ್ರತಿಸ್ಪಂದನ : ಜಗದೀಶ ಮಂಗಳೂರಮಠ –ಮಹಾಂತಪ್ಪ ನಂದೂರ

೧೭. ಸಂಕಲನ : ಅನಿಸಿಕೆ ೭೬–೭೭

೧೮. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೭೮–೮೦

ಸಂಪಾದಕರ ಮಾತು

ಅಪರೂಪವೆನಿಸಿದ, ಸಕಾಲಿಕವಾದ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕವನ್ನು ಪ್ರೀತಿಸುವ ಎಲ್ಲರೂ ಗಮನಿಸಬೇಕಾದ ಡಾ. ಸಿ. ಎನ್. ರಾಮಚಂದ್ರನ್ ಅವರ ಒಂದು ಲೇಖನವನ್ನು ಅವರ ಅನುಮತಿ ಪಡೆದು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ನಮ್ಮ ಓದುಗರಿಗೆ ಇದು ಖಂಡಿತವಾಗಿಯೂ ಪ್ರಯೋಜನಕಾರಿ ಲೇಖನ ಎಂದು ಭಾವಿಸಿದ್ದೇವೆ.

ನಮ್ಮ ನಿಯಮಿತ ಅಂಕಣಗಳಾಗಿದ್ದ
'ನನ್ನ ಅವ್ವ ನನ್ನ ಅಪ್ಪ',
'ನನ್ನ ಶಾಲಾಗುರುಗಳು',
'ಕಾರಂತರ ಜೀವಂತ ಪಾತ್ರಗಳು'
ಮತ್ತು
'ಮೀರಾ ಪ್ರೇಮ ಧಾರಾ'
ಮಾಲಿಕೆಗಳ ಹೆಚ್ಚಿನ ಲೇಖನಗಳನ್ನು ಆದಷ್ಟು ಬೇಗ ಪ್ರಕಟಿಸುವ ಪ್ರಯತ್ನ ಮಾಡುವುದು ಅನಿವಾರ್ಯವೆನಿಸಿದೆ.

ಕೆಲವು ಸಂಸ್ಥೆಗಳ
ಗ್ರಂಥಾಲಯಗಳೂ ಸೇರಿ,
ಈ ವರೆಗೆ
ಈ ವರ್ಷದ ಚಂದಾ ಕಳಿಸಿದವರು
೧೭೩
ಜನರು!!
ಅವರಿಗೆ ಕೃತಜ್ಞರಾಗಿದ್ದೇವೆ.

೧ ಮೇ ೨೦೦೮
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ನನ್ನ ನೆನಪಿನಂಗಳದಲ್ಲಿ ಅಪ್ಪ

ಗಿರಿಜಾ ಶಾಸ್ತ್ರಿ

ನನಗೂ ನನ್ನ ತಂದೆಯವರಿಗೂ ಇದ್ದ ಅಂತರ ಒಂದು ತಲೆಮಾರಿನದಲ್ಲ. ಬದಲಾಗಿ ಎರಡು ತಲೆಮಾರುಗಳದ್ದು. ಅವರ ೫೮ನೆಯ ವಯಸ್ಸಿನಲ್ಲಿ ನಾವು ಐದು ಮಕ್ಕಳಲ್ಲಿ ನಾಲ್ಕನೆಯವಳಾಗಿ ೧೯೫೮ನೆಯ ಇಸವಿಯಂದು ನಾನು ಜನಿಸಿದೆ. ಇಪ್ಪತ್ತನೆಯ ಶತಮಾನದ ೫೮ನೆಯ ಇಸವಿ ನಮ್ಮ ತಂದೆಯವರು ಕಳೆದ ೫೮ ವಸಂತಗಳನ್ನೂ ನೆನಪಿಸುತ್ತಿದ್ದುದರಿಂದ ಅವರು ಹುಟ್ಟಿದ, ಇಪ್ಪತ್ತನೆಯ ಶತಮಾನದ ಮೊದಲ ಹಬ್ಬವಾದ ಯುಗಾದಿ ಹಬ್ಬವನ್ನೂ, ಆ ಇಸವಿಯನ್ನು (೦೨-೧೯೦೦) ಮರೆಯುವುದು ಸಾಧ್ಯವೇ ಇರಲಿಲ್ಲ. ನನಗೂ ನನ್ನ ತಂದೆಯವರಿಗೂ ಇದ್ದ ವಯಸ್ಸಿನ ಈ ಅಂತರದಿಂದಾಗಿ ನನ್ನ ತಂದೆಯವರ ಮಧ್ಯವಯಸ್ಸೂ ಕೂಡ ನನ್ನ ನೆನಪಿನಂಗಳದಾಚೆಗೆ! ಬಹುಬೇಗನೇ ತಲೆಬೆಳ್ಳಗಾದ ಅಷ್ಟೇ ವೇಗದಲ್ಲಿ ಬಾಯಿಕೂಡ ಬೊಚ್ಚಾದ ಅಪ್ಪನ ಜೊತೆ ಎಲ್ಲಿಯಾದರೂ ಹೊರಗೆ ಹೋಗುವುದೆಂದರೆ ನನಗಾಗಲೀ ನನ್ನ ತಮ್ಮನಿಗಾಗಲೀ ಬಾಲ್ಯದಲ್ಲಿ ಮುಜುಗರವಾಗುತ್ತಿತ್ತು. ಯಾರಾದರೂ ಅಪರಿಚಿತರು ದಾರಿಯಲ್ಲಿ ಸಿಕ್ಕು, "ನಿಮ್ಮ ಮೊಮ್ಮಕ್ಕಳೇ, ಶ್ರೀಕಂಠಶಾಸ್ತ್ರಿಗಳೇ?" ಎಂದು ಕೇಳಿಬಿಡುವ ಅವ್ಯಕ್ತ ಅಂಜಿಕೆ. ಅದರಲ್ಲೂ ನಮ್ಮ ಓರಗೆಯವರೋ, ಗೆಳತಿ/ಗೆಳೆಯರೋ ಕಂಡುಬಿಟ್ಟರೆ? ಇಂತಹ ಹಲವಾರು ನಿದರ್ಶನಗಳು ನಮ್ಮ ಬಾಲ್ಯದ ಆಡುಂಬೊಲದಲ್ಲಿ ಗುಮ್ಮನಾಗಿ ಅವಿತು ಹೆದರಿಸುತ್ತಿದ್ದವು.

ನನ್ನ ಈ ೪೮ರ ನಲುಗಿನ ವಯಸ್ಸಿನಲ್ಲಿ ಅವರೇನಾದರೂ ಬದುಕಿರುತ್ತಿದ್ದರೆ ಅವರಿಗೀಗ ೧೦೬ ವರುಷವಾಗಿರುತ್ತಿತ್ತು! ಸ್ವಾತಂತ್ರ್ಯ ಚಳವಳಿಯ ಭರತದ ದಿನಗಳನ್ನು ಕಂಡವರು ಅಪ್ಪ. ಹಾಗೆಯೇ ಪ್ಲೇಗು ಕಾಲರಾಗಳ ಮಾರಿಗೌತಣಗಳನ್ನೂ. ಹಾಗೆಂದು ಅವರು ಚಳವಳಿಗೆ ಧುಮ್ಮಿಕ್ಕಿದವರಲ್ಲ. ಮೈಸೂರಿನ ಹೆಚ್ಚಿನ ಪ್ರಜೆಗಳ ಹಾಗೆ ಅವರಿಗೂ ಕೂಡ "ಆಳೌ ಬ್ರಿಟಾನಿಯಾ" (ಬಿ. ಎಂ. ಶ್ರೀ)ದಂತೆ ಬ್ರಿಟಿಷ್ ವ್ಯವಸ್ಥೆ ಒಂದು ಆದರ್ಶವಾಗಿದ್ದಿರ ಬಹುದು. ನಮ್ಮ ಸ್ವಾತಂತ್ರ್ಯೋತ್ತರ ಕನಸುಗಳು ಭಗ್ನಗೊಂಡಾಗ, ಅದರಲ್ಲೂ ಮುಂದೆ ಎಪ್ಪತ್ತೈದರ ತುರ್ತು ಪರಿಸ್ಥಿತಿಯ ಕಾಲದಲ್ಲಿ, ಇಂದಿರಾ ಗಾಂಧಿಗೆ ಹಿಡಿ ಶಾಪ ಹಾಕುತ್ತಾ ಬ್ರಿಟಿಷ್ ಸರ್ಕಾರವನ್ನು ಹೊಗಳುತ್ತಿದ್ದುದುಂಟು. ಏನೇ ಆಗಲೀ ನಮ್ಮ ತಂದೆಗೆ ಸಾಮಾಜಿಕ ಕಳಕಳಿ ಇದ್ದರೂ ರಾಜಕೀಯಕ್ಕಾಗಲೀ, ಸಾಮಾಜಿಕ ಚಳವಳಿಗಾಗಲೀ ತಮ್ಮನ್ನು ಒಡ್ಡಿಕೊಂಡವರಲ್ಲ. ಅವರು ಅರಸಿಕೊಂಡು ಹೊರಟದ್ದು ನಮ್ಮ ಬೌದ್ಧಿಕ ಗ್ರಹಿಕೆಗಳಿಗೆ ನಿಲುಕದ ಅನುಭವಲೋಕವನ್ನು, ಅಧ್ಯಾತ್ಮದ ಸಾಂಗತ್ಯವನ್ನು.

ತಂದೆಯವರು ನನ್ನ ಸ್ಮೃತಿಗೆ ಲಗ್ಗೆ ಹಾಕಿದಾಗಲೆಲ್ಲಾ ಕಣ್ಣಮುಂದೆ ಬರುವುದು, ಅವರೇ ಒಗೆದುಕೊಂಡು ಧರಿಸುತ್ತಿದ್ದ ಬೆಳ್ಳಗಿನ ಧೋತರ, ಅಷ್ಟೇ ಬಿಳಿಯದಾದ ಜುಬ್ಬ, ಹೆಗಲ ಮೇಲೊಂದು ಶಾಲು ಹಾಗೂ ಕರಿಯ ಕನ್ನಡಕ. ಆರು ಅಡಿಯ, ಬಡಕಲಾದ ಆ ಕೆಂಪುಶರೀರ ತನ್ನ ಆದ್ಯಂತ ಸೂಸುತ್ತಿದ್ದುದು ಬರಿಯ ತೇಜಸ್ಸನ್ನೇ, ಥೇಟ್ ರಾಜಾಜಿ ಯವರಂತೆ! ತಮ್ಮ ಬೆಳಗಿನ ನಿತ್ಯ ವಿಧಿಗಳನ್ನೆಲ್ಲಾ ಪೂರೈಸಿದ ನಂತರ ತಲೆಯ ತುಂಬಾ ಶಾಲನ್ನು ಹೊದ್ದುಕೊಂಡು, ವಾಕಿಂಗ್ ಸ್ಟಿಕ್‌ಅನ್ನು ಕೈಯಲ್ಲಿ ಹಿಡಿದು, ವ್ರತದಂತೆ ಪ್ರತಿನಿತ್ಯ ಲೈಬ್ರರಿಯ ಕಡೆಗೆ ನಿಧಾನ ನಡೆದು.ಹೋಗುತ್ತಿದ್ದರು. ಅವರು ತೀರಿಕೊಂಡ ಹೊಸದರಲ್ಲಿ ನಮ್ಮ ಬೀದಿಯವರೆಲ್ಲಾ ಜ್ಞಾಪಿಸಿಕೊಳ್ಳುತ್ತಿದ್ದುದು ಅವರ ಈ 'ಯೋಗಿಯ' ಗಮನವನ್ನೇ.

ನಮ್ಮ ತಂದೆಯವರ ಕನಸುಗಳೆಲ್ಲಾ ನಾವುಗಳು ಹುಟ್ಟುವುದಕ್ಕೆ ಹಲವಾರು ದಶಕಗಳ ಮುನ್ನವೇ ಅವರ "ಸ್ವಪ್ನದ ಪುಸ್ತಕ"ದಲ್ಲಿ ಅಭೂತಪೂರ್ವವಾಗಿ ಸಾಕಾರಗೊಂಡಿವೆ. ಅವರ ಟಿಲಿಪತಿಯ ಅನುಭವಗಳು, ದರ್ಶನ ಶಾಸ್ತ್ರಗಳು, ಸಂಸ್ಕೃತ ಇಂಗ್ಲಿಷ್ ಕನ್ನಡ ಕಾವ್ಯ, ನಾಟಕಗಳು, ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಹಲವಾರು ಮಾರ್ಗಗಳ ಗ್ರಂಥಗಳು, ಪಾಶ್ಚಾತ್ಯ ಅಧ್ಯಯನ ಕ್ರಮಗಳು, ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಬರೆಯಲಾದ ಸಾವಿರಾರು ಜಾತಕಗಳು, ಅವರು ಅರವತ್ತು ವರುಷಗಳ ಕಾಲ ಸತತವಾಗಿ ನಡೆಸಿದ ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಸಂಶೋಧನೆ ಟಿಪ್ಪಣಿಗಳು! ಈ ಎಲ್ಲವುಗಳಿಗೂ ಈಗ ಅಣ್ಣನ ಮನೆಯ ಅಟ್ಟದ ಮೇಲೆ ಒರಲೆ ಹಿಡಿಯುತ್ತಿವೆ.

ಈಗ್ಗೆ ಸ್ವಲ್ಪ ವರುಷಗಳ ಹಿಂದೆ ಮುಂಬಯಿಗೆ ಬಂದಿದ್ದ ಜಿ. ಟಿ. ನಾರಾಯಣರಾಯರು "ಜ್ಯೋತಿಷ್ಯ ಒಂದು ಬೌದ್ಧಿಕ ವ್ಯಭಿಚಾರ" ಎಂದು ಘೋಷಿಸಿದಾಗ, ನನ್ನ ಬದುಕಿನುದ್ದಕ್ಕೂ ಹೆಚ್ಚು ಕಮ್ಮಿ ಇದೇ ಅಭಿಪ್ರಾಯವನ್ನು ಇಟ್ಟುಕೊಂಡು ಬಂದಿದ್ದ ನನಗೆ, ನನ್ನ ಪುಪ್ಪುಸದೊಳಕ್ಕೆ ಚುಚ್ಚಿದಂತಾದುದು ಯಾಕೆಂದು ತಿಳಿಯದೆ ನರಳಿದ ರಾತ್ರಿಗಳೂ ಇವೆ. "ಪ್ರಕೃತಿ ನಮ್ಮ ನಮ್ಮ ಯೋಗ್ಯತೆಗೆ ತಕ್ಕಂತೆ ತನ್ನ ರಹಸ್ಯಗಳನ್ನು ಬಿಚ್ಚಿಕೊಡುತ್ತದೆ" ಎಂದೂ ಹೇಳಿದ ನಾರಾಯಣರಾಯರ ಅಭಿಪ್ರಾಯದಲ್ಲೇ ಜ್ಯೋತಿಷ್ಯ ಶಾಸ್ತ್ರದ ಪ್ರಶ್ನೆಗಳೂ ಅಡಗಿವೆಯಲ್ಲವೇ? ಎಂದು ಅನೇಕ ಸಲ ಅನ್ನಿಸಿದರೂ ಅವರಿಗೆ ಅದನ್ನು ಹೇಳಲಾಗಲಿಲ್ಲ.

ಅನಂತಮೂರ್ತಿಯವರ 'ಸಂಸ್ಕಾರ' ಓದುವಾಗಲೆಲ್ಲಾ ಪ್ರಾಣೇಶಾಚಾರ್ಯರು ಬರುತ್ತಿದ್ದುದು ನನ್ನ ಅಪ್ಪನದೇ ತೊಗಲು ಹೊದ್ದುಕೊಂಡು. ಅವರು ಕುಳಿತುಕೊಳ್ಳುತ್ತಿದ್ದುದು ನಮ್ಮ ಸಾಲಿಗ್ರಾಮದ (ಮೈಸೂರು ಜಿಲ್ಲೆ. ಕೆ. ಆರ್. ನಗರ. ತಾಲ್ಲೂಕು) ಮನೆಯ ದೊಡ್ಡ ಜಗುಲಿಯ ಮೇಲೆ. ನನ್ನ ತಂದೆಯ ಹಾಗೆ ಪ್ರಾಣೇಶಾಚಾರ್ಯರು ಮಿಲ್ಟನ್, ಶೆಲ್ಲಿ, ಕೀಟ್ಸ್ ಇಲ್ಲವೇ, ಲಾರೆನ್ಸ್‌ನ "ವಿಮೆನ್ ಇನ್ ಲವ್ ನ್ನೋ ಹೆಮಿಂಗ್ವೇನ್ "ಫೇರ್ ವೆಲ್ ಟು ದಿ ಆರ್ಮ್ಸ್"ನ್ನೋ ಓದಿ ಹೇಳದಿದ್ದರೂ, ಖಂಡಿತವಾಗಿ ನನ್ನ ಅಪ್ಪನ ಬಾಯಿಂದ ಬರುವ ಹಾಗೆಯೇ ಕಾಳಿದಾಸ, ಭವಭೂತಿ, ವ್ಯಾಸ, ವಾಲ್ಮೀಕಿಯರು ಪುಂಖಾನುಪುಂಖ ವಾಗಿ ಹೊರಬೀಳುತ್ತಿದ್ದರು. 'ಸಂಸ್ಕಾರ'ದ ಅವರ ಮನೆಯ ಹಾಗೆಯೇ ನಮ್ಮ ಮನೆಯೂ, ಯಾವಾಗಲೂ ಆಪದ್ಧರ್ಮವನ್ನು ಕೇಳಿಕೊಂಡು ಬರುವ ಅಮಾಯಕರುಗಳಿಂದ ತುಂಬಿರುತ್ತಿತ್ತು. ಇಲ್ಲವೇ ಅಧಿಕಾರದ ತಮ್ಮ ತಮ್ಮ ಉನ್ನತಿಯನ್ನು ಕೇಳಿ ತಿಳಿದುಕೊಳ್ಳ ಲೋಸುಗ ಅನೇಕ ದೊಡ್ಡ ದೊಡ್ಡ ಮನುಷ್ಯರು, ಹೈಕೋರ್ಟ ಜಡ್ಜಿಗಳು ಮನೆಗೆ ಬರುತ್ತಿದ್ದರು. ಮನೆಯ ಜಗುಲಿ ದಾಟಿದರೆ ಒಳಗೆ ದೊಡ್ಡ ಹಜಾರ, ಮಬ್ಬಾದ ಬೆಳಕಿನ ನಡುವೆ ಕಂಭಗಳು, ಚಿತ್ತಾರದ ರಂಗೋಲಿಗಳ ಗೋಡೆಗಳು, ಆ ಗೋಡೆಗಳ ಮೇಲೆ ಸಾಲಾಗಿ ರಾರಾಜಿಸುತ್ತಿದ್ದ ಧಾರ್ಮಿಕ ಗುರುಗಳ ಚಿತ್ರಗಳು. ಅದರೊಳಗೆ ನಡುಮನೆ, ಒಳಗೊಳಗೆ ಹೊಗೆಯಿಂದ ಕಪ್ಪಾದ ಅಡುಗೆ ಕೋಣೆ, ಮಲಗುವ ಕೋಣೆಗೆ ಪ್ರಾಶಸ್ತ್ಯವೇ ಇಲ್ಲವೆಂಬಂತೆ, ಕಿರಿದಾದ ಕಿಂಡಿ ಕಿಟಕಿಗಳುಳ್ಳ ಕೋಣೆಗಳು. ಅದರಾಚೆಗೆ ದೊಡ್ಡದಾದ ಹಿತ್ತಲು, ತರತರದ ವನರಾಶಿ, ಗೊಬ್ಬರದ ಗುಂಡಿ, ಕಕ್ಕಸ್ಸು. ಅಪ್ಪ ಬಹುಶಃ ಅಡುಗೆ ಮನೆಯೆಡೆಗೆ ಸುಳಿದದ್ದರ ನೆನಪೇ ಇಲ್ಲ. ಜಗಲಿ ಮೇಲೆ ಪ್ರಾಣೇಶಾಚಾರ್ಯರ ಹಾಗೆ ಕುಳಿತು ಬಂದವರೊಂದಿಗೆ ಧರ್ಮಜಿಜ್ಞಾಸೆಯಲ್ಲಿ ತೊಡಗುತ್ತಿದ್ದರು, ಇಲ್ಲವೇ ರೈತಾಪಿ ಜನರೊಡನೆ ಮಾತುಕತೆ ನಡೆಯುತ್ತಿದ್ದವು. ಇಲ್ಲವಾದರೆ ಒಳಗೆ ಹಜಾರದ ಮಧ್ಯೆ ದೊಡ್ಡ ಮೇಜಿನ ಬಳಿ ಕುಳಿತ ಅವರ ಕೈಯಲ್ಲಿ ಯಾವುದಾದರೂ ಒಂದು ಗ್ರಂಥ, ಅಥವಾ ಬರವಣಿಗೆ ಇಲ್ಲವಾದರೆ

ಧ್ಯಾನ. ನಾವು ಹಳ್ಳಿ ಬಿಟ್ಟು ಮೈಸೂರು ಬೆಂಗಳೂರು ಸೇರಿದ ಮೇಲೂ ಅಪ್ಪನ ದಿನಚರಿ ಬದಲಾಗದೇ ಸಾಗುತ್ತಿತ್ತು. ವರುಷಕ್ಕೊಮ್ಮೆ ಕೆಲವು ತಿಂಗಳು ಕಾಲ ಅಪ್ಪ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವುದಿತ್ತು. ಅಲ್ಲಿ ಬಹಳಷ್ಟು ಜನ ತಂದೆಯವರ ಜ್ಯೋತಿಷ್ಯದಲ್ಲಿ ಆಸಕ್ತರಾಗಿದ್ದರು. ಈ ಎಲ್ಲವುಗಳ ನಡುವೆ ನಮಗೆ ಆಗಾಗ ಮುಕುಂದಮಾಲಾದ ಸ್ತೋತ್ರಗಳನ್ನೋ, ಗೀತೆಯ ಇಲ್ಲವೇ ಇನ್ನಾವುದೋ ಶ್ಲೋಕಗಳನ್ನೋ ಬಾಯಿಪಾಠ ಮಾಡಿಸುತ್ತಿದ್ದರು. ಮನಸ್ಸಾಯಿತೆಂದರೆ ಮಧ್ಯಾಹ್ನ ಉಂಡು ಶತಪಥ ತಿರುಗುತ್ತಾ ಷೇಕ್ಸ್‌ಪಿಯರ್‌ನ ಸಾಲುಗಳನ್ನೋ, ಕಾಳಿದಾಸನ ಸಾಲುಗಳನ್ನೋ ಕೈಗಳನೆತ್ತಿ ಅಭಿನಯ ಪೂರ್ವಕವಾಗಿ ಉದ್ಧರಿಸುತ್ತಿದ್ದರು. ಅಪ್ಪ ಭಾವುಕರಾಗುತ್ತಿದ್ದದೂ ಉಂಟು. ಕುಮಾರವ್ಯಾಸನ "ಹೊಲಬುದಪ್ಪಿದ ಹಸುಳೆ ಬೇಡನ ಬಲೆಗೆ ಬಿದ್ದಂತಾದೆನೈ" ಎನ್ನುವ ದ್ರೌಪದಿ ವಸ್ತ್ರಾಪಹರಣದ ಸನ್ನಿವೇಶವನ್ನು ಹೇಳುವಾಗ ಅವರ ಕಣ್ಣಿನಲ್ಲಿ ನೀರು ಜಿನಗುತ್ತಿದ್ದುದನ್ನು ನಾನು ಎಷ್ಟೋ ಬಾರಿ ಕಂಡಿರುವೆ. ಅವರಿಗೆ ಸಂಗೀತ ಕೇಳುವುದರಲ್ಲಿಯೂ ಅಷ್ಟೇ ಆಸಕ್ತಿ ಇತ್ತು. ಭೈರವಿ, ಕಲ್ಯಾಣಿ ರಾಗಗಳು ಅಪ್ಪನನ್ನು 'ಭಗವತಿ ಉಪಾಸನೆಯ ಅದಮ್ಯ ದಿನಗಳ' ಅವರ ಪೂರ್ವಾಶ್ರಮಕ್ಕೆ ಕರೆದೊಯ್ಯುತ್ತಿದ್ದವು.

ನಾನು ಕನ್ನಡ ಎಂ.ಎ. ಕಲಿಯುವಾಗ ತರುತ್ತಿದ್ದ ಗ್ರಂಥಾಲಯದ ಪುಸ್ತಕಗಳ ಉಪಯೋಗವನ್ನು ಹೆಚ್ಚು ಪಡೆಯುತ್ತಿದ್ದವರೆಂದರೆ ಅವರೇ. ಈ ಎಲ್ಲಾ ಬೌದ್ಧಿಕ ಸಂಗತಿಗಳ ನಡುವೆ, ನನ್ನ ಅಪ್ಪನಿಗಿಂತ ಅರ್ಧದಷ್ಟು ಕಿರಿಯ ವಯಸ್ಸಿನ, ಹಳ್ಳಿಯ ಮುಗ್ಧ, ಆದರೆ ಒಂದು ಶ್ರೀಮಂತ ಜಮೀನ್ದಾರರ ಕುಟುಂಬದಿಂದ ಬಂದ ಅಮ್ಮ ಎಲ್ಲಿದ್ದಳು? ಅಪ್ಪನ ಮುಂಗೋಪದ ಬೆಂಕಿಯಲ್ಲಿ ಕರಗದೇ ಹೇಗೆ ಉಳಿದುಕೊಂಡಳು? ಅಗ್ನಿಯಂತೆ ಝಳಪಿಸುತ್ತಿದ್ದ ಅಪ್ಪನ ಪಾಂಡಿತ್ಯದ ಮುಂದೆ ಅಮ್ಮನ ಕಸೂತಿ, ಕಲೆಗಳಲ್ಲಿನ ತೀವ್ರ ಆಸಕ್ತಿಗಳ ಬಗ್ಗೆ ಅಪ್ಪನಿಗಿದ್ದಂತಹ ಧೋರಣೆ ಯಾವುದು, ಅಮ್ಮ ಹೇಗೆ ಎಲ್ಲವನ್ನೂ ಒಪ್ಪಿಕೊಂಡುಬಿಟ್ಟಿದ್ದಾಳೆ...? ಈ ಎಲ್ಲವನ್ನೂ ಯೋಚಿಸಲು ತೊಡಗಿದ್ದೇ ನಾನು ಕಾಲೇಜು ಮೆಟ್ಟಿಲು ಹತ್ತಿದ ಮೇಲೆ. ಆಗ ಮೂಡತೊಡಗಿದ ರೆಕ್ಕೆ ಪುಕ್ಕಗಳೇ ನನ್ನ ಅಪ್ಪನ ಎದುರಾಗಿ ಬೀಸಲು ತೊಡಗಿದ್ದವು. ಐದು ಮಕ್ಕಳ ನಡುವೆ ನನ್ನ ಸ್ವಭಾವದೊಳಗೆ ಮಾತ್ರ ಅಡಗಿದ್ದ ಪ್ರತಿಭಟನೆಯ ಸ್ವರೂಪಕ್ಕೆ ಸಿಕ್ಕ ಬಿರುದುಗಳು 'ಗಂಡುಬೀರಿ', 'ಬಜಾರಿ' ಇತ್ಯಾದಿ. ಎಂಭತ್ತು ವರುಷಗಳ ಕಾಲ ಅಪ್ರತಿಹತರಾಗಿ ಪಂಡಿತರುಗಳ ನಡುವೆ ವಾದ ಸಂವಾದಗಳಲ್ಲಿ ಗೆದ್ದು ಬಂದ ಅಪ್ಪನ ಎದುರಿಗೆ 'ಎಳೆ ನಿಂಬೆಕಾಯಿ' ಪೋರಿಯೊಬ್ಬಳು ನಿಂತು ವಾದಿಸುವಾಗ ಕತ್ತರಿಸಿ ಎರಡು ತುಂಡುಮಾಡುವಷ್ಟು ಸಿಟ್ಟು. "ಎಲ್ಲಿ ಹುಟ್ಟಿದ್ದೇ ಒಳ್ಳೆ ಹಸುವಿನ ಹೊಟ್ಟೆಯಲ್ಲಿ ಹುಲಿ ಹುಟ್ಟಿದ ಹಾಗೆ!" ಸೋಟೆ ತಿವಿಯುವ ಅಪ್ಪನ ಸಂಪ್ರದಾಯವಾದಿ ನಿಲುವನ್ನು, ನನಗೋ ರೇಗಿಸಿದಷ್ಟೂ ಖುಶಿ. ಹೀಗಿದ್ದೂ ಒಮ್ಮೊಮ್ಮೆ "ಇಡೀ ಜಗತ್ತನ್ನು ಬೇಕಾದರೆ ಒಬ್ಬಳೇ ಸುತ್ತಿಕೊಂಡು ಬರುತ್ತಾಳೆ", "ಇವಳಿಗೆ ಗಜಕೇಸರಿ ಯೋಗವಿದೆ" ಎಂಬ ಶಹಬಾಸ್‌ಗಿರಿಗೆ ಪಾತ್ರವಾದದ್ದೂ ಇದೆ. ನಮ್ಮ ಕಾಲದಲ್ಲಿ ಈಗಿನ ಹಾಗೆ ಮಾತುಮಾತಿಗೆ ಮುತ್ತು ಕೊಟ್ಟು, ತಬ್ಬಿಕೊಂಡು ಮಕ್ಕಳ ಮೇಲೆ ಪ್ರೀತಿ ವ್ಯಕ್ತಪಡಿಸುತ್ತಿರಲಿಲ್ಲ. ಪ್ರೀತಿಗಿಂತ ಹೆದರಿಕೆಯೇ ಮೇಲುಗೈ ಪಡೆಯುತ್ತಿದ್ದಂತಹ ಕಾಲದಲ್ಲಿ ತಲೆಸವರಿ ಬೆನ್ನು ತಟ್ಟಿದರೂ ಸಾಕು ಸ್ವರ್ಗ ಮೂರೇ ಗೇಣು! ಹಾಗೆಂದು ಮಕ್ಕಳ ಓದು ಬರಹ ಬಟ್ಟೆ ಔಷಧ ಮುಂತಾದ ಜವಾಬ್ದಾರಿಗಳಿಂದ ಎಂದೂ ಹಿಂದೆ ಸರಿಯುತ್ತಿರಲಿಲ್ಲ.

ಎಂಭತ್ತೊಂದು ವರುಷಗಳಲ್ಲಿ ಏನೇನೋ ಆಗಿ ರೂಪಗೊಂಡ ಅಪ್ಪನ ಬಾಲ್ಯ

ಸಿಹಿಯಾದುದೇನಾಗಿರಲಿಲ್ಲ. ಅವರು ತಮ್ಮ ಹದಿನೆಂಟರ ಪ್ರಾಯದಲ್ಲಿಯೇ ಒಂದು ದಿನ ಹೇಳದೇ ಕೇಳದೇ ಮನೆ ಬಿಟ್ಟವರು. ಮೈಸೂರಿನ ವೆಂಕಟಕೃಷ್ಣಯ್ಯನವರು (ತಾತಯ್ಯ) ತುಂಬ ಪ್ರೀತಿಯಿಂದ 'ಫಿಲಾಸಫರ್' ಎಂದು ಕರೆಯುತ್ತಿದ್ದ ಅವರ ಪ್ರತಿಭಾವಂತನಾದ ಶಿಷ್ಯ, ಇಂಟರ್ಮೀಡಿಯೇಟ್ ಮುಗಿಸಿ ಆನಂತರದ ದಿನಗಳಲ್ಲಿ ಒಮ್ಮೆ ಮನೆಯಿಂದ ಕಾಣೆಯಾದ. ಅಪ್ಪ ಹೀಗೆ ಮನೆಬಿಟ್ಟು, ಬಡತನ, ರೋಗಗಳಿಗೆ ಹೇಸಿ ಅದರಿಂದ ಪಾರಾಗಲು ಓಡಿ ಹೋದದ್ದು ಅಧ್ಯಾತ್ಮದ ಹಾದಿಯನ್ನು ಹುಡುಕುತ್ತಾ ಹಿಮಾಲಯದ ತಪ್ಪಲಿಗೆ. ಯಾರೂ ತುಳಿಯದ ಹಾದಿಯಲ್ಲಿ ಹೀಗೆ ಏನನ್ನೋ ಅರಸುತ್ತಾ ಏಕಾಂಗಿಯಾಗಿ ಅವರು ನಡೆದದ್ದು ಬರಿಗಾಲಿನಲ್ಲಿ. ಅವರು ಜ್ಯೋತಿಷ್ಯ ಶಾಸ್ತ್ರವನ್ನು ಕಲಿತದ್ದು ಅಲ್ಲಿಯೇ ಎಂಬುದನ್ನು ಆಗಾಗ ಹೇಳುತ್ತಿದ್ದರೇ ವಿನಃ ಅದನ್ನು ಕಲಿಸಿದ ತಮ್ಮ ಗುರುಗಳ ಬಗೆಗೆ ಮಾತ್ರ ಅವರು ಕೊನೆಯ ವರೆಗೂ ಗುಟ್ಟನ್ನು ಬಿಟ್ಟುಕೊಡಲೇ ಇಲ್ಲ. ಜ್ಯೋತಿಷ್ಯವನ್ನು ಹೊತ್ತುಕೊಂಡು ಅವರು ಭಾರತದ ಉದ್ದಗಲಕ್ಕೆ ಅಲೆದರು. ಗುಜರಾತಿನ ಯಾವುದೋ ಹೋಳ್ಕರ್ ಮಹಾರಾಜ ಸುಮಾರು ಮೂರನೆಯ ದಶಕದ ಕೊನೆಗೆ, ತಂದೆಯವರಿಗೆ ಆಶ್ರಯವನ್ನು ಇತ್ತಿದ್ದ ವಿಚಾರವನ್ನು ನಾವು ಅನೇಕ ಸಲ ಅವರ ಬಾಯಿಂದಲೇ ಕೇಳಿದ್ದೆವು. ರಾಜನ ಸರ್ವಾಧಿಕಾರದಿಂದ ತಪ್ಪಿಸಿಕೊಳ್ಳಲು ಅವರು, ಹಾಗೂ ರಾಜನಿಗೆ ತಂದೆಯವರನ್ನು ಪರಿಚಯಿಸಿದ, ರಾಜನಲ್ಲಿ ದಿವಾನರಾಗಿದ್ದ ಅವರ ಸೋದರಮಾವ ಇಬ್ಬರೂ ಕಳ್ಳತನದಿಂದ ರಾಜ್ಯದ ಗಡಿ ದಾಟಿ ಬಂದ ವಿಷಯವನ್ನು ಬಹಳ ರೋಚಕವಾಗಿ ಹೇಳುತ್ತಿದ್ದರು. ರಾಜನ ಆಶ್ರಯ ತಪ್ಪಿ ಹೋದುದಕ್ಕಿಂತ ಹೆಚ್ಚಾಗಿ ಅಪ್ಪ ದುಃಖಿಸಿದ್ದು, ಅಲ್ಲಿ ದೊರೆ ಇವರಿಗೆಂದೇ ಬಿಟ್ಟುಕೊಟ್ಟಿದ್ದ ದೇಗುಲದಂತಹ ಗ್ರಂಥಾಲಯ ಹಾಗೂ ಅಲ್ಲಿನ ಅಮೂಲ್ಯ ಪುಸ್ತಕಗಳ ಅಧ್ಯಯನ ಮಾಡುವ ಭಾಗ್ಯ ತಪ್ಪಿಹೋದುದಕ್ಕೆ.

ಅಲ್ಲಿಂದ ಅನಿವಾರ್ಯವಾಗಿ ಮತ್ತೆ ಮನೆಗೆ ಮರಳಿದ ಅಪ್ಪನಿಗೆ ಅವರ ಅಲೆಮಾರಿತನ, ಮತ್ತು ಹಿಮಾಲಯದ ಅನುಭವ ತಂದುಕೊಟ್ಟ ಶಕ್ತಿ ಅನನ್ಯವಾದುದು. ಅವರ ೪೦ನೇ ವರುಷಕ್ಕೆ ೧೬ ವರುಷದ ಅಮ್ಮನೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿರಿಸಿದ ಅವರ ಇಡಿಯ ಬದುಕನ್ನು ರೂಪಿಸಿದುದೇ ಅಂತಹ ಅನುಭವಗಳು ಎಂದರೆ ಅತಿಶಯೋಕ್ತಿಯೇನಲ್ಲ. ನಮ್ಮ ಬಾಲ್ಯದ ಕಿನ್ನರ ಲೋಕಕ್ಕೆ ಅವರ ಹಿಮಾಲಯದ ಅನುಭವದ ಅದ್ಭುತ ಕಥೆಗಳು ಗರಿಬಿಚ್ಚಿ ಹಾರಾಡುತ್ತಿದ್ದವು. ಚಳಿಗಾಲದ ದಿನಗಳಲ್ಲಿ ಹಿತ್ತಲ ಮಧ್ಯೆ ಒಟ್ಟಿದ ಬೆಂಕಿಯ ಬೆಳಕಲ್ಲಿ ನಮ್ಮನೆಲ್ಲಾ ಕೂರಿಸಿಕೊಂಡು ಆಗಾಗ ಕಡ್ಡಿ, ಪುರಲೆಗಳನ್ನು ಬೆಂಕಿಗೆ ಎಸೆಯುತ್ತಾ, ಅವರು ಏನೇನು ಹೇಳುತ್ತಿದ್ದರು ಎಂಬುದರ ಸ್ಪಷ್ಟ ಅರಿವು ಈಗ ತಲೆಗೆ ಹತ್ತದಿದ್ದರೂ, ಅಪ್ಪನೆಂದರೆ ಈ ಎಲ್ಲ ನೆನಪುಗಳು ಮೊತ್ತವಾಗಿ ಮುಗಿಬೀಳುತ್ತವೆ.

ಹದಿನಾರು ವರುಷದ ಅಮ್ಮನನ್ನು ಮದುವೆಯಾದುದರ ಬಗ್ಗೆ ಮಾತ್ರ ಅಪ್ಪನನ್ನು ಕೇಳಲು ಎಂದೂ ಧೈರ್ಯವಾಗಲಿಲ್ಲ. ಅಲ್ಲದೆ ಅವರ ಅಕ್ಕಂದಿರ ಆಗ್ರಹಕ್ಕೆ ಕಟ್ಟುಬಿದ್ದು ಅವರು ವಿವಾಹವಾದ ಸಂಗತಿಯನ್ನು ಅವಕಾಶ ಸಿಕ್ಕಾಗಲೆಲ್ಲ ಹೇಳುತ್ತಿದ್ದರು. ಮದುವೆ ಒಲ್ಲೆ ಎನ್ನುತ್ತಿದ್ದ ಯುವಕರನ್ನು ಕರೆದು, "ಮದುವೆ ಆಗುವುದಾದರೆ ಈಗಲೇ ಮಾಡಿಕೋ, ಇಲ್ಲ ಎನ್ನುವುದಾದರೆ ಎಂದೂ ಮಾಡಿಕೊಳ್ಳಬೇಡ, ನಾನು ಮಾಡಿದ ತಪ್ಪನ್ನು ನೀನು ಮಾಡಬೇಡ" ಎಂದು ಬುದ್ಧಿವಾದ ಹೇಳುತ್ತಿದ್ದುದೂ ಉಂಟು. ಮದುವೆಯಾದ ಮೇಲೂ ಅವರು ಈ ಲೌಕಿಕಕ್ಕೆ ಅಂಟಿಕೊಂಡವರಂತೆ ಕಂಡುಬರಲಿಲ್ಲ. ಅದನ್ನು ಅಮ್ಮ ತನ್ನ ಬಾಯಿಂದ ಹಲವಾರು ಸಲ ಹೆಮ್ಮೆಯಿಂದ ಹೇಳಿದ್ದಿದೆ. ನನಗೋ ಅಮ್ಮ ಕಳೆದು ಹೋದದ್ದರ

ಬಗ್ಗೆ ಅವಳಿಗೇ ಇಲ್ಲದ ಚಿಂತೆ. ಇದರ ಬಗ್ಗೆ ಅಜ್ಜಿಯ (ತಾಯಿಯ ತಾಯಿ) ಮುಂದೆ ನಿಂತು ದಬಾಯಿಸಿ ಕೇಳಿದ್ದಿದೆ. ಅಜ್ಜಿಯಾದರು ತಾನೆ ಏನು ಮಾಡಿಯಾಳು, ತಿರುಗಿ ದಬಾಯಿಸಿ ನನ್ನನ್ನು ಅಟ್ಟುವ ವರ ಹೊರತು? ಅಲ್ಲದೇ ಮನೆಯಲ್ಲಿ ಕೇಶ ಮುಂಡನಕ್ಕೆ ಒಳಗಾದ ನನ್ನ ಅತ್ತೆಯರು ಇದ್ದರು. ನನ್ನ ಫೆಮಿನಿಸಂನ ಉದ್ವೇಗದ ಕಾಲವದು. ಅತ್ತೆಯವರ ವೈಧವ್ಯಕ್ಕೆ ಅಲ್ಲಾ ಅವರ ಹೀನಸ್ಥಿತಿಗೆ ತಂದೆಯವರೇ ಕಾರಣರೆಂದು ನನ್ನೊಳಗಿನ ಮನಸ್ಸು ಜೋರಿನಿಂದ ಹೇಳುತ್ತಿತ್ತು. ಆದರೆ ಈಗ ನನ್ನ ತಂದೆಯವರು ಕೇವಲ ಎಂಟು ವರ್ಷದ ಬಾಲಕರಾಗಿದ್ದರು ಎನ್ನುವ ಲಾಜಿಕ್ ಆಗಲೀ, ಜಾತಿ ವ್ಯವಸ್ಥೆಯೊಳಗೆ ಸಿಕ್ಕಿ ಬಿದ್ದ ಜನರ ಅಸಹಾಯಕ, ವಾಸ್ತವ ಸಂಗತಿಗಳಾಗಲೀ ನನ್ನೊಳಗಿನ ಭೂತಕ್ಕೆ ಹೊಳೆಯುತ್ತಿರಲಿಲ್ಲ.

ಅವರು ತಮ್ಮ ಅಂತಿಮ ದಿನಗಳ ವರೆಗೂ ದುಃಖಿಸಿದ್ದು, ಕೋರ್ಟು. ಕಛೇರಿ ತಿರುತಿರುಗಿ ಸುಖವಾಗಿ ದಿನಗಳನ್ನು ಕಳೆಯಬಹುದಾದಷ್ಟು ನೆಲ, ಹೊಲ ಮನೆ ಗಳಿಸಿಕೊಂಡು. ಒಂದಿಷ್ಟು ನಿರಾಳದ ದಿನಗಳನ್ನು ಕಂಡು ಮತ್ತೆ ಅವುಗಳನ್ನು ಕಳೆದುಕೊಂಡದ್ದಕ್ಕಲ್ಲ. ಬದಲಾಗಿ ಮನೆಯಾಚೆ ಅವರು ಸಂಚಾರದಲ್ಲಿದ್ದಾಗಲೇ ಅವರ ತಾಯಿ ತೀರಿಕೊಂಡದ್ದಕ್ಕೆ. ತಾಯಿ ತಂದೆಯರ ಋಣವನ್ನು ತೀರಿಸದೇ ಹೋದುದಕ್ಕೆ, ಅವರ ಸೇವೆಯನ್ನು ಕಿಂಚಿತ್ತೂ ಮಾಡಲು ಸಾಧ್ಯವಾಗದೇ ಹೋದ ಅವರು ಸಾಯುವ ವರೆಗೆ ಪಾಪಪ್ರಜ್ಞೆಯಿಂದ ನರಳುತ್ತಿದ್ದರು. ಮನೆಯ ಆಧಾರಸ್ತಂಭವಾಗಿದ್ದ ನನ್ನ ಹಿರಿಯಣ್ಣ ಅಪಘಾತದಲ್ಲಿ ಮಡಿದಾಗಲೂ ಅಪ್ಪ ವಿಚಲಿತರಾಗಲಿಲ್ಲ, ಯಾರೊಡನೆಯೂ ದುಃಖ ತೋಡಿಕೊಂಡು ರೋದಿಸಲಿಲ್ಲ. ಬದಲಾಗಿ, ಅವರ ತೊಡೆಯ ಮೇಲೆ ರೋದಿಸುತ್ತಿದ್ದ ಅಣ್ಣನ ಗೆಳೆಯ ನಜೀರ್‌ನನ್ನು ಸಾಂತ್ವನಗೈದಿದ್ದರು. ಅಮ್ಮನಿಗೆ ಧೈರ್ಯ ಹೇಳುತ್ತಾ ತಮ್ಮ ಅಳಿದುಳಿದ ಆಯುಷ್ಯವನ್ನು ಕಳೆದರು.

೭೯-೮೧ ರ ಕಾಲವದು. ನಾವು ಬೆಂಗಳೂರಿನಲ್ಲಿ ಕನ್ನಡ ಎಂ.ಎ. ಓದುತ್ತಿದ್ದ ಕಾಲದಲ್ಲಿ ನಮ್ಮ ಬೋಧಕರೆಲ್ಲಾ ನಮಗೆ ಕಲಿಸಿದ್ದು ಕಂಡ ಕಡೆಗೆ ಕಲ್ಲು ಹೊಡೆಯಬೇಕೆಂಬ ಪ್ರತಿಭಟನೆಯನ್ನೇ. 'ಬಂಡಾಯ' ಆಗಷ್ಟೇ ವೇದಿಕೆಗೆ ಹತ್ತಿದ ಸಮಯ. ಕ್ಯಾಂಪಸ್ಸಿನಿಂದ ಮನೆಗೆ ಬಂದರೆ ಸಾಕು, ನನ್ನ ಇತರ ಸಹಪಾಠಿಗಳಿಗೆ ಏನನ್ನಿಸುತ್ತಿತ್ತೋ ಗೊತ್ತಿಲ್ಲ, ನನಗೆ ಮಾತ್ರ ಮಡಿ ಮೈಲಿಗೆ, ವ್ರತ, ಪೂಜೆ, ತಿಥಿ, ಹೊಗೆ, ಗಬ್ಬು ನಾರುವ ಉಸಿರು ಕಟ್ಟುವ ಕಮಟು ಹೊಲಸು ಥೂ ಎನ್ನುವ ತಿರಸ್ಕಾರ. ಸಾಂಪ್ರದಾಯಕವಾಗಿ ಓದಿಕೊಂಡ ಶಾಸ್ತ್ರಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ "ಪ್ರಾಣೇಶಾಚಾರ್ಯ"ರಂತಹವರು ಯಾರಾದರೂ ಮನೆಗೆ ಬಂದರೂ ಸಾಕು "ಸಂಭಾವನೆಯ ಬ್ರಾಹ್ಮಣ"ನೆಂಬ ಹೇವರಿಕೆ. ಹೀಗೆ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಓಡುತ್ತಿದ್ದ ಕಾಲದಲ್ಲಿ ನಮ್ಮ ಹಿಂದಿದ್ದುದು ಯು. ಆರ್. ಅನಂತಮೂರ್ತಿ, ಟಿ. ಜಿ. ರಾಘವ, ಕೆ. ಸದಾಶಿವ, ರಾಮಚಂದ್ರ ಶರ್ಮ, ಪಿ. ಲಂಕೇಶ್, ಜೊತೆಗೆ ಒಂದಿಷ್ಟು ಕಾಮೂ, ಕಾಫ್ಕಾರ ಅಮಲು. ಮುಟ್ಟಬಾರದೆನ್ನುವ ದಿನಗಳಲ್ಲಂತೂ ಮುಟ್ಟಿಯೇ ತೀರಬೇಕೆಂಬ ರೊಚ್ಚು- ತಿಥಿಯಾಗಲೀ, ತೀರ್ಥ ಯಾತ್ರೆಯಾಗಲಿ, ಪ್ರಸಾದವನ್ನು ಮೈಲಿಗೆಯಲ್ಲಿ ಸ್ವೀಕರಿಸಬೇಕೆಂಬ ಹಟ.

ಈಗ ಅಮ್ಮನ ಹೊತ್ತೂ ಕಂತುತ್ತಿದೆ. ಪಶ್ಚಿಮಕ್ಕೆ ಮುಖ ಮಾಡಿ ಗುಡ್ಡದ ಇಳಿಜಾರಿನಲ್ಲಿ ಸಾಗುತ್ತಿರುವ ಅವಳ ಬೆನ್ನ ಹಿಂದೆಯೇ ನಾನಿದ್ದೇನೆ. ಹುಟ್ಟಿದ 'ಊರು' ದೂರವಾಗುತ್ತಾ ಇನ್ನೇನು ಅರ್ಧ ಶತಕ ಕಳೆದು ಹೋಗುತ್ತಿದೆ. ಯಾವುದೋ ಬೀದಿಯಲ್ಲಿ ಯಮಯಾತನೆ

ಯಿಂದ ಚೀರಿಡುತ್ತಾ ದೌಡಾಯಿಸುವ ಅಂಬ್ಯುಲೆನ್ಸ್ ವಾಹನ ನನ್ನೊಳಗೆ 'ಕಾಡಿನ' ವಾಸನೆಯನ್ನು ಮತ್ತೂ ಹೆಚ್ಚಿಸುತ್ತಿದೆ. ಇಷ್ಟು ವರುಷ, ಗಂಡ ಮನೆ ಮಕ್ಕಳೆಂಬ ತಿದಿಗೆ ಒಡ್ಡಿಕೊಂಡು ಬೂದಿಯೊಳಗೆ ನಂದುತ್ತಿರುವ ಕೆಂಡವನ್ನು 'ಪುಸ್ಸೆಂದು' ಊದುತ್ತಿರುವ ಹೊತ್ತಿನಲ್ಲಿ, ಮೈಯಲ್ಲಿ ಬಂಡಾಯದ ಭರತವೆಲ್ಲಾ ಇಳಿದು ಹೋದ ಮೇಲೆ, ಸಾಹಿತ್ಯವನ್ನಾಗಲೀ, ಸನಾತನವನ್ನಾಗಲೀ, ಟೆಕ್ನಾಲಜಿಯನ್ನಾಗಲೀ ಯಾವುದನ್ನು ಎಷ್ಟು ತೆಗೆದುಕೊಳ್ಳಬೇಕು ಅಥವಾ ಬಿಡಬೇಕು ಎನ್ನುವ ಅರಿವು ಪ್ರಜ್ಞೆಗೆ ಹತ್ತುತ್ತಿರುವ ಕಾಲದಲ್ಲಿ, ನಮ್ಮ ಬೌದ್ಧಿಕ ಗ್ರಹಿಕೆಗಳಷ್ಟೇ ನಿಜವಲ್ಲ, ಅದರಾಚೆಗೂ ಇರುವ ನಿಜವೆಂಬುದು ಕೇವಲ ನಮ್ಮ ಕಾಣ್ಕೆಯ ಬದುಕು ಎಂದು ನನಗೀಗ ಹೊಳೆಯುತ್ತಿರುವ ಸತ್ಯವನ್ನು ಬದುಕಲು ನಮ್ಮ ತಂದೆಯವರು ತಮ್ಮ ಇಡೀ ಆಯುಷ್ಯ ಹೆಣಗಾಡಿದರು. ಇಂತಹ ತಂದೆಯವರನ್ನು, ಅವರ ಅರವತ್ತು ವರ್ಷಗಳ ಜ್ಯೋತಿಷ್ಯದ ಬಗೆಗಿನ ಸಂಶೋಧನೆಯನ್ನು, ಅವರ ಅಗಾಧವಾದ ಸಂಸ್ಕೃತ, ಕನ್ನಡ, ಇಂಗ್ಲಿಷ್ ಸಾಹಿತ್ಯದ ಜ್ಞಾನವನ್ನು, ಜಿಜ್ಞಾಸುತನವನ್ನು ಗ್ರಹಿಸದೇ ಹೋದೆನಲ್ಲಾ, ಅದನ್ನೆಲ್ಲಾ ತುಚ್ಛೀಕರಿಸಿ ನುಡಿದೆನಲ್ಲಾ ಎಂದು ಅನ್ನಿಸತೊಡಗಿರುವ ಈ ಕಾಲಕ್ಕೆ ಅವರಿಗೆ ತಪ್ಪೊಪ್ಪಿಗೆ ಒಪ್ಪಿಸೋಣವೆಂದರೆ ಈಗ ಅವರಿಲ್ಲ.

✦ ಡಾ. ಗಿರಿಜಾ ಶಾಸ್ತ್ರಿ, ಮುಂಬೆಳಗು ಕನ್ನಡ ಬಳಗ (ರಿ), ಡಿ/೬/೨೦೩, ಹಿಮಗಿರಿ ಕೋ.ಆಪ್.ಹೌ.ಸೊಸಾಯಿಟಿ, ಲೋಕಧಾರಾ, ಕಲ್ಯಾಣ (ಪೂ)-೪೨೧ ೩೦೬ ✦

ಸಾವು

ಎಂ. ಎಸ್. ರುದ್ರೇಶ್ವರಸ್ವಾಮಿ

೧

ಹೆಜ್ಜೆ ಸದ್ದು
ಎಲ್ಲೊ ದೂರದಲ್ಲಿ
ಬಂದು ಹೋದಂತೆ
ಹಣ್ಣೆಲೆ ಉದುರಿದಂತೆ ಒಂದೊಂದೆ...
ನನ್ನೊಳಗಿನ ಅತಿಥಿ
ನನ್ನಲ್ಲಿರುವುದು ತಿಳಿಯಲಿಲ್ಲ.

ಅವ್ವ ಸತ್ತಾಗ
ಬೆನ್ನು ಅಲುಗಾಡಿಸಿ ನನ್ನತ್ತ
ನೋಡಿದ ಅವನು;
ಅದೇನೋ ಕಳೆದುಕೊಂಡೆ
ಅನ್ನಿಸಿದರೂ, ಅವನು ನನ್ನೊಳಗೆ
ಇರುವುದು ತಿಳಿಯಲಿಲ್ಲ.

ಸುಮ್ಮನೆ ಸಿಟ್ಟಾಗಿ, ಗೆಳತಿ
ದೂರ ಸರಿದಾಗ; ನನ್ನೊಳಗಿನ
ಚಿಗುರು ಮೀಸೆಯ ಹುಡುಗ
ಎಲ್ಲೋ ಮರೆಯಾಗಿ
ಕಾಣೆಯಾಗಿದ್ದು ತಿಳಿದರೂ, ಅವನು
ನನ್ನೊಳಗಿರುವುದು ತಿಳಿಯಲಿಲ್ಲ

೨

ಬಂದು ಬಿಡಲಿ ಅವನು
ರಾತ್ರಿ ಕತ್ತಲು
ಸುತ್ತೆಲ್ಲಾ ಹರಡಿ
ಬೆಳಕು ಇನ್ನಿಲ್ಲವಾದಂತೆ,
ರಾತ್ರಿ ಮೂಡಿದ ನಕ್ಷತ್ರಗಳು
ಮುಂಜಾನೆ ಮಾಯವಾದಂತೆ.

ಹಾಜರಾಗಲಿ ಅವನು
ಪ್ರೀತಿ ನನ್ನಲ್ಲಿ ಇಲ್ಲದ
ಮರುಕ್ಷಣ.

✦ ಎಂ. ಎಸ್. ರುದ್ರೇಶ್ವರಸ್ವಾಮಿ,
#೫೫೩, 'ಪಲ್ಲವಿ', II ಮೇನ್, ವಸಂತವಲ್ಲಭನಗರ,
ಸುಬ್ರಹ್ಮಣ್ಯಪುರ ಅಂಚೆ, ಬೆಂಗಳೂರು-೬೧ ✦

ನನ್ನ ಶಾಲಾ ಗುರುಗಳು

ಕು. ಗೋ.

'ಹೆರ್ಗ ವಿಠಲ ಶೆಟ್ಟಿ' ಅವರ ಹೆಸರು ಹೊತ್ತ ಒಂದು ಶಾಲೆ ಉದ್ಘಾಟನೆಯಾದ ಸುದ್ದಿಯೊಂದನ್ನು ಪತ್ರಿಕೆಯಲ್ಲಿ ನೋಡಿದೆ. ನೆನಪು ಹಿಂದೆ ಹಿಂದೆ ಬಹಳ ಹಿಂದಕ್ಕೆ ಹೋಯಿತು. ಹೆರ್ಗ ವಿಠಲಶೆಟ್ಟರು ಹೆರ್ಗ ಶಾಲೆಯಲ್ಲಿ ನನಗೆ ಅ ಆ ಇ ಈ ಹೇಳಿಕೊಟ್ಟವರು. ಒಂದರಿಂದ ಐದನೇ ತರಗತಿಯ ವರೆಗೆ ಇದ್ದ ಆ ಶಾಲೆಗೆ ವಿಠಲ ಶೆಟ್ಟರು ಮುಖ್ಯೋಪಾಧ್ಯಾಯರಾಗಿದ್ದರು. ನಮಗೆ ಒಂದನೇ ಕ್ಲಾಸಿಗೆ ಅವರು ಪಾಠ ಮಾಡುತ್ತಿದ್ದರು. ನಾವು ಐದನೇ ಕ್ಲಾಸಿಗೆ ಹೋಗುವಾಗ ಮತ್ತೆ ಅವರೇ ನಮಗೆ ಮಾಸ್ತರರಾಗಿದ್ದರು. ಯಾವ ವಿದ್ಯಾರ್ಥಿಯೂ ಎಂದೆಂದೂ ಮರೆಯಲಾಗದ, ಮರೆಯಲಾರದ ಮಹಾನುಭಾವ. ಎಷ್ಟು ಚೆಂದವಾಗಿ ಪಾಠ ಮಾಡುತ್ತಿದ್ದರೆಂದರೆ ಮನೆಗೆ ಹೋಗಿ ಪುನಃ ಪಾಠ ಕಲಿಯುವ ಪ್ರಮೇಯವೇ ಇರುತ್ತಿರಲಿಲ್ಲ. ಇತರ ಶಾಲಾ ಕಾಲೇಜುಗಳಲ್ಲಿ ನನಗೆ ಸಿಕ್ಕಿದ ಉಪಾಧ್ಯಾಯರು, ಪ್ರಾಧ್ಯಾಪಕರಲ್ಲಿ ಕೆಲವೇ ಕೆಲವರು ನನ್ನ ನೆನಪಿನಲ್ಲಿ ಉಳಿದಿದ್ದಾರೆ, ತಮ್ಮ ಪ್ರಭಾವವನ್ನು ತಕ್ಕ ಮಟ್ಟಿಗೆ ಬೀರಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ನನ್ನ ಮೊದಲ ತರಗತಿಯ ಹಾಗೂ ಕೊನೆಯ ತರಗತಿಯ ಗುರುಗಳಾಗಿದ್ದ ವಿಠಲ ಶೆಟ್ಟರಲ್ಲಿ ಒಂದು ಪೂಜ್ಯ ಭಾವನೆಯನ್ನು ನಾನು ಸದಾ ಇರಿಸಿಕೊಂಡಿದ್ದೇನೆ. ಅವರು ಸತ್ತು ಈಗ ಯಾವ ಸ್ವರ್ಗದಲ್ಲಿದ್ದಾರೋ! ಅವರ ಆ ಭವ್ಯ ವ್ಯಕ್ತಿತ್ವ ಮಾತ್ರ ಸದಾ ಕಣ್ಣೆದುರು ನಿಂತಿರುತ್ತದೆ. ಶುಭ್ರ ಖಾದಿಯ ಬಿಳಿ ಉಡುಗೆ ತೊಡುಗೆ, ಗಂಭೀರ ಮುಖಮುದ್ರೆ, ಗಟ್ಟಿ ಸ್ವರ, ಯಾವ ದುರಭ್ಯಾಸವೂ ಇರದ ಶುದ್ಧ ವ್ಯಕ್ತಿ. ನಾನು ಶಾಲೆ ಬಿಟ್ಟ ಮೇಲೆ ಒಮ್ಮೆ ಮಾತ್ರ ಅವರನ್ನು ನೋಡಿರಬೇಕು. ಕೆಮ್ಮಣ್ಣಿನವರಾದ ಅವರು ಹೆರ್ಗದವರೇ ಆಗಿದ್ದರು. ಅವರ ಮಗ ಈಗ ಒಬ್ಬ ದೊಡ್ಡ ಉದ್ಯಮಿಯಾಗಿ ಕೊಡುಗೈ ದಾನಿಯೂ ಆಗಿದ್ದಾರೆಂದು ಕೇಳಿ ಬಲ್ಲೆ.

ನಮ್ಮ ಅದೇ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು ನನ್ನ ನೆನಪಿನಲ್ಲಿ ಉಳಿದವರು ಹಾವಂಜೆಯ ಸಂಕಯ್ಯ ಶೆಟ್ಟರು, ಹೆರ್ಗದ ಹಿರಿಯಣ್ಣ ಶೆಟ್ಟರು ಹಾಗೂ ಉಪ್ಪೂರಿನ ಇನ್ನೊಬ್ಬ ಮಾಸ್ತರರು. ಅವರ ಹೆಸರು ಯಾಕೋ ಜ್ಞಾಪಕಕ್ಕೆ ಬರುತ್ತಿಲ್ಲ. ಅವರಿಗೆ ಊಟವಾದ ಮೇಲೆ ಒಂದು ಲೋಟ ಹಾಲು ಕುಡಿಯುವ ಅಭ್ಯಾಸವಿತ್ತು. ನಮ್ಮ ಮನೆಯಿಂದ ಒಂದು ಕುಡ್ತೆ ಕಾಯಿಸಿದ ಹಾಲು ತಂದು ಕೊಡುತ್ತಿದ್ದೆ. ತಿಂಗಳಿಗೊಮ್ಮೆ ದುಡ್ಡು ಕೊಡುತ್ತಿದ್ದರು. ಒಂದು ತಿಂಗಳು ಹಾಲಿನ ದುಡ್ಡು ಕೊಡಲು ಅವರು ಮರೆತಿದ್ದರು. ನಾನು ಕೂಡಾ ದಾಕ್ಷಿಣ್ಯದಿಂದ ಕೇಳಲೂ ಇಲ್ಲ. ಈಗ ಅವರಿರಲಿಕ್ಕಿಲ್ಲ.

ಸಂಕಯ್ಯ ಶೆಟ್ಟರು ಶುದ್ಧ ಗಾಂಧೀವಾದಿ. ತಲೆಗೆ ಗಾಂಧೀ ಟೋಪಿ, ಖಾದಿ ಜುಬ್ಬಾ, ಅಡ್ಡ ಪಂಚೆ, ಕಾಲಿಗೆ ಚಪ್ಪಲಿ, ಕಣ್ಣಿಗೆ ಕನ್ನಡಕ ಹಾಕುತ್ತಿದ್ದರು. ಹಾವಂಜೆಯಿಂದ ಹೊಳೆ ದಾಟಿ ಕೊಡೆ ಹಿಡಿದುಕೊಂಡು ಬರುತ್ತಿದ್ದರು. ಪಾಠ ಚೆನ್ನಾಗಿ ಮಾಡುತ್ತಿದ್ದರು. ಅವರ ಮಗ ನನ್ನ ಸಹೋದ್ಯೋಗಿಯಾಗಿದ್ದರು. ಏಳು ಅಡಿ ಎತ್ತರದ ಅವರನ್ನು ಕಂಡಾಗ 'ಗುರುಪುತ್ರೋಭ್ಯೋ ನಮಃ' ಎನ್ನುತ್ತಿದ್ದೆ. ಹಿರಿಯಣ್ಣ ಶೆಟ್ಟರು ನಮ್ಮೂರಿನ ಭವ್ಯ ವ್ಯಕ್ತಿ ಕೃಷಿಕ ಮೋನಪ್ಪ ಶೆಟ್ಟರ ಮಗ. ಮೋನಪ್ಪ ಶೆಟ್ಟಿಯವರು ಥೇಟ್ ಡಿ.ವಿ.ಜಿ.ಯ ಹಾಗೆಯೇ ಕಾಣುತ್ತಿದ್ದರು. ಅದೇ ಉಡುಗೆ ತೊಡುಗೆ. ದಂಟೆ ಊರಿಕೊಂಡು ನಮ್ಮ ಮನೆಗೆ ಬರುತ್ತಿದ್ದರು.

ಅಮ್ಮ ಕೊಡುತ್ತಿದ್ದ ಕರಿದ ಹಪ್ಪಳವನ್ನು ಪುಡಿ ಮಾಡಿ ತಿನ್ನುತ್ತಿದ್ದರು. ಎರಡು ಮೂರು ಬಟ್ಟಲು ಚಾ ಕುಡಿಯುತ್ತಿದ್ದರು. ಚಾವಡಿಯಲ್ಲಿ ಕುಳಿತು ಗಂಟೆಗಟ್ಟಲೆ ಪಟ್ಟಾಂಗ ಹೊಡೆಯುತ್ತಿದ್ದರು. ಅಜ್ಜಿ ಕುಟ್ಟಿ ಕೊಡುತ್ತಿದ್ದ ವೀಳ್ಯದೆಲೆ ಹೊಗೆಸೊಪ್ಪಿನ ಮುದ್ದೆಯನ್ನು ಬಾಯಲ್ಲಿಟ್ಟುಕೊಳ್ಳುತ್ತಿದ್ದರು. ಚೆನ್ನಾಗಿ ಮಾತನಾಡಿ ಹೋಗುತ್ತಿದ್ದರು.

ಒರಿಯಣ್ಣ ಶೆಟ್ಟರು ಭರ್ಜರಿ ಆಳು. ಅವರಿಗೆ ಮಕ್ಕಳಿರಲಿಲ್ಲ. ಬೀಡಿ ಸೇದುತ್ತಿದ್ದರು. ಮಧ್ಯಾಹ್ನ ಕ್ಲಾಸಿನಲ್ಲೇ ಕಾಲು ಮೇಜಿನ ಮೇಲೆ ಇಟ್ಟು ಸಣ್ಣ ನಿದ್ರೆ ಮಾಡುತ್ತಿದ್ದರು. ಮಕ್ಕಳಿಗೆ ಬೆತ್ತದ ರುಚಿ ಕೂಡಾ ತೋರಿಸುತ್ತಿದ್ದರು. ಅವರಲ್ಲಿ ಭಕ್ತಿಗಿಂತ ಹೆಚ್ಚಾಗಿ ಭಯ ಮೂಡುತ್ತಿತ್ತು. ಆದರೆ ಅವರು ಯಾವ ಮಕ್ಕಳಿಗೂ ಕೆಡುಕು ಮಾಡಲಿಲ್ಲ. ಒಳ್ಳೆಯ ಭಜನೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಾಳ ಹಾಕಿ ಕುಣಿಯುತ್ತಿದ್ದರು. ಹಾರ್ಮೋನಿಯಂ ಬಾರಿಸುತ್ತಿದ್ದರು. ನಾಟಕ ನಿರ್ದೇಶನ ಮಾಡುತ್ತಿದ್ದರು. ಈ ಎಲ್ಲ ಮಾಸ್ತರರೂ ಈಗ ಇಲ್ಲ. ಅವರ ನೆನಪು ಮಾತ್ರ ಇದೆ.

ಮಣಿಪಾಲದಲ್ಲಿ ಒಂದು ವರ್ಷ ಆರನೇ ಕ್ಲಾಸಿನ ವಿದ್ಯಾರ್ಥಿಯಾಗಿದ್ದೆ. ಅಲ್ಲಿ ಬಂಗ್ಲೆ ಸುಬ್ಬಣ್ಣಾಚಾರ್ರು ಅಂತ ಒಬ್ಬರು ಮಾಸ್ತರರು ಇದ್ದರು. ಬಹಳ ತಮಾಶೆಯ ವ್ಯಕ್ತಿ. ಸ್ವಲ್ಪ ಮುಂಗೋಪಿಯೂ ಆಗಿದ್ದರು. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಅಡ್ಡ ಪಂಚೆ, ಶರ್ಟ್, ಅದರ ಮೇಲೊಂದು ಕರಿಕೋಟು ಧರಿಸಿ ಶಾಲೆಗೆ ಬರುತ್ತಿದ್ದರು. ಕನ್ನಡಕ ಹಾಕುತ್ತಿದ್ದರು. ಬೆಳ್ಳಗೆ, ತೆಳ್ಳಗಿನ ವ್ಯಕ್ತಿ. ಮಧ್ಯಾಹ್ನ ಸ್ವಲ್ಪ ಮಲಗುವ ಅಭ್ಯಾಸವಿತ್ತು. ಇನ್ನೊಂದು ಶಾಲೆಯ ಮಾಸ್ತರರೊಟ್ಟಿಗೆ ಮಧ್ಯಾಹ್ನದ ಊಟಕ್ಕೆ ಒಂದು ಮನೆಗೆ ಹೋಗುತ್ತಿದ್ದರು. ಆ ಸಮಯ ಅವರನ್ನು ಎಬ್ಬಿಸಿ ಕಳಿಸುವ ಕೆಲಸ ನನ್ನದಾಗಿತ್ತು. ಕೇವಲ ಒಂದೇ ವರ್ಷ ಅವರು ನನ್ನ ಉಪಾಧ್ಯಾಯರಾಗಿದ್ದರು. ಅನಂತರ ಅವರನ್ನು ನಾನು ನೋಡಿಯೇ ಇಲ್ಲ. ಬೆಂಗಳೂರಿನಲ್ಲಿ ಮಕ್ಕಳೊಟ್ಟಿಗೆ ಇದ್ದರೆಂದೂ, ವಯಸ್ಸು ಸುಮಾರು ನೂರರ ಹತ್ತಿರ ಬಂದಾಗ ತೀರಿಕೊಂಡರೆಂದೂ ಕೇಳಿ ಬಲ್ಲೆ. ಆ ಶಾಲೆಯಲ್ಲಿ ಬೇರೆ ಮೂರು ಜನ ಮಾಸ್ತರರು ಇದ್ದರು. ಒಬ್ಬರು ಉದ್ದಕ್ಕೆ ಇದ್ದ ಶ್ಯಾನುಭೋಗ ಎಂಬವರು. ಸೈಕಲ್ ಕಚ್ಚೆ ಹಾಕುತ್ತಿದ್ದರು. ಅಂಗಡಿ ಕೂಡಾ ಇಟ್ಟಿದ್ದರು. ಒಬ್ಬರು ಎಳೆ ಪ್ರಾಯದ ಟೀಚರ್. ಆದರೆ ಅವರ ಜ್ಞಾಪಕ ಈಗ ಬರುತ್ತಿಲ್ಲ.

ಆರನೇ ತರಗತಿ ಆದ ನಂತರ ನಾನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಮಾಧ್ಯಮಿಕ ಶಾಲೆಗೆ ಸೇರಿದೆ. ಜಿಲ್ಲೆ ಬದಲಾವಣೆ ಆದ್ದರಿಂದ, ಆ ಶಾಲೆಯ ನಿಯಮ ಬೇರೆ ಇದ್ದದ್ದರಿಂದ ಅಲ್ಲೂ ಆರನೇ ತರಗತಿಗೇ ಸೇರಬೇಕಾಯಿತು. ನಮ್ಮ ಭಾವನವರ ಹೋಟೆಲೊಂದು ಅಲ್ಲಿ ಇತ್ತು. ಅವರಿಗೆ ಎಲ್ಲರ ಪರಿಚಯವಿದ್ದುದರಿಂದ ನನಗೆ ಅಲ್ಲಿಯ ಶಾಲೆಗೆ ಸೇರಲು ಅನುಕೂಲವಾಯಿತು. ಅಲ್ಲಿಯ ಮುಖ್ಯೋಪಾಧ್ಯಾಯರು ಬಹಳ ಸಾತ್ವಿಕ ಮನುಷ್ಯ. ಕಚ್ಚೆ ಪಂಚೆ, ಅಂಗಿ ಕೋಟು, ತಲೆಗೊಂದು ಮೈಸೂರು ಪೇಟಾ ಇರುತ್ತಿತ್ತು. ಕಾಲಿಗೆ ಕೆಂಪು ಬಣ್ಣದ ಬೂಟ್ಸ್ ಹಾಕುತ್ತಿದ್ದರು. ಅವರ ಹೆಸರು ಯಾಕೋ ಜ್ಞಾಪಕಕ್ಕೆ ಬರುತ್ತಿಲ್ಲ. ಆ ಶಾಲೆಯಲ್ಲಿ ಕನ್ನಡ ಪಂಡಿತರೊಬ್ಬರು ನನ್ನ ಮೇಲೆ ತುಂಬ ಪ್ರಭಾವ ಬೀರಿದ್ದರು. ಮಧ್ಯವಯಸ್ಸು ದಾಟಿದವರು. ನೋಡುವಾಗ ಗೌರವ ಹುಟ್ಟುತ್ತಿತ್ತು. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಆದರೆ ಮಕ್ಕಳೊಟ್ಟಿಗೆ ಅಷ್ಟೊಂದು ಸಲುಗೆಯಿಂದಿರಲಿಲ್ಲ.

ಇನ್ನೊಬ್ಬರು ಸಪೂರದ ಗಣಿತ ಮಾಸ್ತರರಿದ್ದರು. ಹಣೆಯ ಮೇಲೆ ಕುಂಕುಮದ ಬೊಟ್ಟು ಇರುತ್ತಿತ್ತು. ಅಡ್ಡ ಪಂಚೆ, ಬಿಳಿ ಶರ್ಟ್. ಪ್ಯಾಂಟ್ ಹಾಕುವ ಮಾಸ್ತರರು ಯಾರೂ ಇರಲಿಲ್ಲ. ಎರಡು ಮೂರು ಜನ ಮೇಡಮ್‌ಗಳು ಇದ್ದರು. ಗಣಿತದ ಮಾಸ್ತರರು ಪ್ರತಿ ಪರೀಕ್ಷೆಯಲ್ಲೂ ನನಗೆ ನೂರಕ್ಕೆ ನೂರು ಮಾರ್ಕು ಕೊಡುತ್ತಿದ್ದರು. ಅಲ್ಲಿಯ ನನ್ನ ಸಹಪಾಠಿಗಳೆಲ್ಲ ತೀರ ಗ್ರಾಮಾಂತರದಿಂದ ಬರುತ್ತಿದ್ದರು, ಬಟ್ಟೆ ಬರೆ ಕೊಳಕಾಗಿ ಇರುತ್ತಿತ್ತು. ಮುಖ ತೊಳೆಯದೆ, ತಲೆ ಬಾಚದೆ ಬರುತ್ತಿದ್ದವರೂ ಇದ್ದರು. ನಮ್ಮ ಭಾವ ಹುಣಸೂರಿಗೆ ಹೋಟೆಲನ್ನು ಬದಲಾಯಿಸಬೇಕಾದ್ದರಿಂದ ನಾನು ಸ್ವಲ್ಪ ಸಮಯ ಅವರ ಸ್ನೇಹಿತರಾದ ಡಾಕ್ಟರ್ ನಾರಾಯಣ ಉಡುಪರ ಮನೆಯಲ್ಲಿ ಉಳಕೊಳ್ಳಬೇಕಾಯಿತು. ಅವರೂ ನನ್ನನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅವರ ಮಕ್ಕಳು ಒಂದನೇ ಎರಡನೇ ತರಗತಿಯಲ್ಲಿದ್ದರು ಆಗ.

ಹುಣಸೂರಿನಲ್ಲಿ ನಾನು ಕಳೆದ ಐದು ವರ್ಷಗಳು ಅದು ನನ್ನ ಸುವರ್ಣಯುಗ ಎಂದೇ ಹೇಳಬೇಕು. ನನ್ನ ಭಾವನ ಹೋಟೆಲಿನಲ್ಲಿದ್ದೆ. ಶಾಲಾ ವೇಳೆಯಲ್ಲದೆ ಉಳಿದ ಸಮಯದಲ್ಲಿ ನಾನು ಹೋಟೆಲ್ ಕೆಲಸವನ್ನೂ ಮಾಡುತ್ತಿದ್ದೆ. ಒಳ್ಳೆಯ ಉತ್ಸಾಹವಿತ್ತು, ಚುರುಕುತನವಿತ್ತು. ಓದು ಬಿರುಸಾಗಿತ್ತು, ಕೆಲಸದಲ್ಲಿ ಅದಮ್ಯ ಉತ್ಸಾಹವಿತ್ತು. ಮಾಧ್ಯಮಿಕ ಶಾಲೆಯ ಏಳು, ಎಂಟನೆಯ ತರಗತಿಗಳನ್ನು ಅಲ್ಲೇ ಮುಗಿಸಿದ್ದು. ಎಂಟನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಇತ್ತು. ಅಲ್ಲಿ ಶಾಲೆಗೆ ಸೇರಿದ ೧-೨ ತಿಂಗಳಲ್ಲಿ ಮನೆಪಾಠಕ್ಕೆ ಬರಲು ಒಬ್ಬರು ಉಪಾಧ್ಯಾಯರು ಕೇಳಿದರು. ಸಣ್ಣ ಪ್ರಾಯದವರು- ಚೆನ್ನಾಗಿ ಪಾಠ ಕೂಡಾ ಮಾಡುತ್ತಿದ್ದರು. ಈಗ (ಆಗಲೂ) ಮನೆಪಾಠ ಒಂದು ಫ್ಯಾಶನ್ ಆಗಿದೆ, ಆದರೆ ನನಗೆ ಶಾಲೆಯಲ್ಲಿ ಹೇಳಿಕೊಟ್ಟ ಪಾಠವೇ ಸಾಕಾಗಿತ್ತು. ಮನೆ ಪಾಠಕ್ಕೆ ಸೇರಲು ಇಷ್ಟಪಡಲಿಲ್ಲ. ಆ ಸಮಯವನ್ನು ಹೋಟೆಲಿನ ಕೆಲಸಕ್ಕೆ ಉಪಯೋಗಿಸುತ್ತಿದ್ದೆ. ಆ ಮಾಸ್ಟ್ರು ಗಣಿತ, ವಿಜ್ಞಾನದ ಪಾಠ ಮಾಡುತ್ತಿದ್ದರು. ಪ್ಯಾಂಟ್ ಹಾಕುತ್ತಿದ್ದ ಮಾಸ್ಟರರು ಅವರೊಬ್ಬರೇ ಆಗಿದ್ದರು.

ಇಲ್ಲೂ ಒಬ್ಬ ಕನ್ನಡ ಪಂಡಿತರು ಮೈಸೂರು ಪೇಟಾ ಧರಿಸಿ ಬರುತ್ತಿದ್ದರು. ಸ್ವಲ್ಪ ಸಿಡುಕು ಸ್ವಭಾವದವರು. ಕೈಯಲ್ಲಿ ಸದಾ ಬೆತ್ತವಿರುತ್ತಿತ್ತು. ಕೃಷಿಯ ಬಗ್ಗೆ ಪಾಠವಿದ್ದಾಗ ಹೊಲಕ್ಕೆ ಕೂಡಾ ಕರೆದುಕೊಂಡು ಹೋಗುತ್ತಿದ್ದರು. ಶಾಲೆಯ ಹೆಡ್ಮಾಸ್ಟರರು ಒಬ್ಬ ಭರ್ಜರಿ ಮನುಷ್ಯ. ಸ್ವಲ್ಪ ವಯಸ್ಸಾಗಿತ್ತು. ಐವತ್ತರ ಮೇಲಿರಬಹುದು. ತಲೆಗೊಂದು ಕರೀ ಟೋಪಿ ಧರಿಸುತ್ತಿದ್ದರು. ಹಣೆಯ ಮೇಲೊಂದು ಕಪ್ಪು ಉದ್ದ ನಾಮ. ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. ಎಲ್ಲ ಮಕ್ಕಳೂ ಅವರಿಗೆ ವಿಶೇಷ ಗೌರವ ಸಲ್ಲಿಸುತ್ತಿದ್ದರು. ಪರೀಕ್ಷೆಯ ಪೂರ್ವ ತಯಾರಿಗೆ ಮನೆಯಲ್ಲೇ ಸ್ಪೆಷಲ್ ಕ್ಲಾಸ್ ನಡೆಸುತ್ತಿದ್ದರು. ಕೆಲವು ಮಕ್ಕಳಿಂದ ಫೀಸ್ ಕೂಡಾ ತೆಗೆದುಕೊಳ್ಳುತ್ತಿರಲಿಲ್ಲ. ನಾನೊಬ್ಬ ಪ್ರತಿಭಾವಂತ ವಿದ್ಯಾರ್ಥಿ ಎಂದು ತಿಳಿದಿದ್ದರು. ನನಗೆ ಅನುಕೂಲವಾಗಲೆಂದು ಪಬ್ಲಿಕ್ ಪರೀಕ್ಷೆಗೆ ಎಂಟು ದಿನ ಮೊದಲು ನನ್ನನ್ನು ಮನೆಗೆ ಕರೆದು ಪಾಠ ಹೇಳಿದ್ದರು. ಆ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಆ ಶಾಲೆಗೆ ಪ್ರಥಮನಾಗಿ ಪಾಸಾಗಿದ್ದೆ. ಹುಣಸೂರಿನ ಆ ಮಾಧ್ಯಮಿಕ ಶಾಲೆಯ ನನ್ನ ಯಾವ ಉಪಾಧ್ಯಾಯರ ಹೆಸರೂ ನೆನಪಿನಲ್ಲಿಲ್ಲ. ಆದರೆ ಅವರೆಲ್ಲರ ಚಿತ್ರ ಕಣ್ಣಮುಂದಿದೆ.

ಎಂಟನೇ ಕ್ಲಾಸ್ ಅಂದರೆ ಲೋಯರ್ ಸೆಕೆಂಡರಿ ಪರೀಕ್ಷೆ ಮುಗಿದ ಮೇಲೆ ನನಗೆ ವಿದ್ಯಾಭ್ಯಾಸ ಮುಂದುವರಿಸುವ ಆಲೋಚನೆ ಇರಲಿಲ್ಲ. ಹೋಟೆಲಿನಲ್ಲಿ ಕೆಲಸ ಮಾಡಿಕೊಂಡು

ನಾಲ್ಕು ಕಾಸು ಸಂಪಾದನೆ ಮಾಡುವ ಆಲೋಚನೆ ಇತ್ತು. ನನ್ನ ಭಾವನವರು ಇದಕ್ಕೆ ಒಪ್ಪಲಿಲ್ಲ. ಅಲ್ಲದೆ ಆ ಸಂದರ್ಭದಲ್ಲಿ ನನಗೆ ಮಾರ್ಗ ತೋರಿ ನನ್ನನ್ನು ಸರಿ ದಾರಿಗೆ ತಂದವರು ಪಿರಿಯಾಪಟ್ಟಣದ ಡಾಕ್ಟರ್ ನಾರಾಯಣ ಉಡುಪರು. ಅವರು ಆಗಾಗ್ಗೆ ಹುಣಸೂರಿಗೆ ಬರುತ್ತಿದ್ದರು. ಅವರಿಗೆ ಅಲ್ಲಿ ಸ್ವಲ್ಪ ಹೊಲ ಗದ್ದೆ ಇತ್ತು. ಅಲ್ಲದೆ ಅವರ ಅಣ್ಣನ ಒಂದು ದೊಡ್ಡ ಹೋಟೆಲೂ ಅಲ್ಲಿತ್ತು. ನಾನು ಶಾಲೆಗೆ ಹೋಗಲು ಕೇಳುತ್ತಿಲ್ಲವೆಂದು ನನ್ನ ಭಾವ ಅವರಲ್ಲಿ ದೂರಿಕೊಂಡರು. ಅವರು ಹುಣಸೂರಿಗೆ ಬಂದು ನಮ್ಮ ಹೋಟೆಲಿನಲ್ಲಿ ಗಂಟೆಗಟ್ಟಲೆ ಕುಳಿತು ನನಗೆ ಉಪದೇಶ ಮಾಡಿದರು. ಅಲ್ಲದೆ ಹುಣಸೂರು ಶಾಲೆಯ ನನ್ನ ಉಪಾಧ್ಯಾಯರೆಲ್ಲ ಬಂದು ನಾನು ವಿದ್ಯಾಭ್ಯಾಸ ಮುಂದುವರಿಸಲೇಬೇಕೆಂದು ಹಠ ಹಿಡಿದರು. ಇವರೆಲ್ಲರ ಒತ್ತಾಯಕ್ಕೆ ಮಣಿದು ನಾನು ಹೈಸ್ಕೂಲ್ ಸೇರಲು ಒಪ್ಪಿಕೊಂಡೆ. ಆ ಸಂದರ್ಭದಲ್ಲಿ ಅವರ ಒತ್ತಾಯ ಇಲ್ಲದಿದ್ದರೆ ನಾನು ಏನಾಗುತ್ತಿದ್ದೆನೋ! ನಾನು ಆ ಮಹನೀಯರನ್ನು ಎಂದೂ ಮರೆಯಲಾರೆ.

ಹೈಸ್ಕೂಲಿನಲ್ಲಿ ಕನ್ನಡ ಮೀಡಿಯಮ್‌ಗೆ ಸೇರಲು ನಾನು ಬಯಸಿದೆನಾದರೂ ನಮ್ಮ ಉಪಾಧ್ಯಾಯರು ನನ್ನನ್ನು ಇಂಗ್ಲಿಷ್ ಮಿಡಿಯಮ್‌ಗೆ ಸೇರಿಸಿದರು. ಅವರ ದೃಷ್ಟಿಯಲ್ಲಿ ನಾನೊಬ್ಬ ಹೆಚ್ಚು ಮಾರ್ಕು ತೆಗೆಯುವ ವಿದ್ಯಾರ್ಥಿ ಎಂದು ಪರಿಗಣಿತನಾಗಿದ್ದೆ. ಮೂರು ವರ್ಷವೂ ಅಂಗಿ ಚಡ್ಡಿಯಲ್ಲೇ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದೆ. ಯಾವ ಹಮ್ಮು ಬಿಮ್ಮು ಇಲ್ಲದೆ, ಚಪ್ಪಲಿ ಧರಿಸದೆ ಇದ್ದೆ. ಹೋಟೆಲ್ ಗಿರಾಕಿಗಳಿಗೆ ನಾನು ಶಾಲೆಗೆ ಹೋಗುವ ವಿದ್ಯಾರ್ಥಿ ಎಂಬುದೂ ತಿಳಿಯದಂತೆ ಇದ್ದೆ. ಹೈಸ್ಕೂಲಿನಲ್ಲಿ ನನಗೆ ಒಳ್ಳೆಯ ಉಪಾಧ್ಯಾಯರೇ ಸಿಕ್ಕಿದ್ದರು. ಅವರಲ್ಲಿ ನನಗೆ ತುಂಬ ಇಷ್ಟವಾದ ಬಿ. ಎನ್. ಸುಬ್ಬಯ್ಯ ಎಂಬವರು. ಅವರನ್ನು ಬೀನ್ಸ್ ಅಂತಲೂ ಕರೆಯುತ್ತಿದ್ದೆವು. ಆರಡಿ ಎತ್ತರದ ಮನುಷ್ಯ. ನೆಟ್ಟಗೆ ಇದ್ದರು. ಪ್ಯಾಂಟ್ ಕೋಟ್ ಬೂಟ್ಸ್ ಹಾಕುತ್ತಿದ್ದರು. ಅವರಿಗೆ ಮದುವೆಯಾಗಿತ್ತು. ಒಂದೆರಡು ಮಕ್ಕಳೂ ಇದ್ದರು. ಮೂರು ವರ್ಷವೂ ಗಣಿತದ ಪಾಠ ಹೇಳಿಕೊಟ್ಟರು. ಅಂಥ ಮಾಸ್ತರರು ತುಂಬ ಜನ ಇರಲಿಕ್ಕಿಲ್ಲ. ಶಾಲೆಯ ಯಾವ ಪಾಠವನ್ನೂ ಮನೆಯಲ್ಲಿ ಅಭ್ಯಾಸ ಮಾಡಬೇಕೆಂದೇ ಇರಲಿಲ್ಲ. ಪಾಠದ ಸಮಯವೇ ಎಲ್ಲವೂ ಅರ್ಥವಾಗುವಂತೆ ವಿವರಿಸುತ್ತಿದ್ದರು.

ಎಲ್ಲ ವಿದ್ಯಾರ್ಥಿಗಳನ್ನು ಸಮಾನರಾಗಿ ಕಾಣುತ್ತಿದ್ದ ಇನ್ನೊಬ್ಬರು ಬಿ. ಎಸ್. ರಾಮಕೃಷ್ಣ ಬಿಸ್ರಾ. ಸಿನೆಮಾ ಹೀರೋ ತರಹ ಇದ್ದರು. ಬಹಳ ಚುರುಕು. ಅವರು ಕೂಡಾ ನಮಗೆ ಲೆಕ್ಕಕ್ಕೆ. ಅದೇ ಶಾಲೆಯಲ್ಲಿದ್ದ ಒಬ್ಬ ಟೀಚರನ್ನು (ಇಂಗ್ಲಿಷ್ ಪಾಠ ಮಾಡುತ್ತಿದ್ದರು) ಲವ್ ಮಾಡಿ ಮದುವೆಯಾದರು. ಈ ಬೀನ್ಸ್, ಬಿಸ್ರಾಗಳ ಲೆಕ್ಕದ ಪಾಠ ನನಗೆ ಎಸ್‌ಎಸ್‌ಎಲ್‌ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ ತೊಂಭತ್ತೆಂಟು ಮಾರ್ಕು ತೆಗೆಯಲು ಸಹಾಯ ಮಾಡಿತು. ಇನ್ನೊಬ್ಬ ಮಾಸ್ತ್ರು ಇಂಗ್ಲಿಷ್ ಪಾಠಕ್ಕೆ ಬರುತ್ತಿದ್ದರು. ಅವರದ್ದು ಬಹಳ ಒಳ್ಳೆಯ ಇಂಗ್ಲಿಷ್. ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಸ್ ಓಡಿಸಲು ಶುರು ಮಾಡಿದರು. ಸೈನ್ಸ್ ಟೀಚರ್, ಚರಿತ್ರೆ ಭೂಗೋಳ ಉಪಾಧ್ಯಾಯರೂ ನೆನಪಾಗುತ್ತಾರೆ. ಅವರೆಲ್ಲ ಉತ್ತಮ ಬೋಧಕರಾಗಿದ್ದರು.

ಲಕ್ಷ್ಮೀಕುಮಾರ್ ತಾತಾಚಾರ್ಯರ ಕನ್ನಡ ತರಗತಿಗಳನ್ನು ಎಂದೂ ಮರೆಯಲಾರೆ. ಕಬ್ಬಿಣದ ಕಡಲೆಯನ್ನು ಸುಲಿದ ಬಾಳೆಯ ಹಣ್ಣಿನ್ನಾಗಿ ಮಾಡಿ ಕನ್ನಡದ ಬಗ್ಗೆ ವಿಶೇಷ ಒಲವು ಮೂಡುವಂತೆ ಮಾಡಿದವರು ಅವರು. ಸ್ವಲ್ಪ ಸ್ವಲ್ಪ ಕೀರಲು ದನಿ. ತುಂಬು

ತೋಳಿನ ಶರ್ಟ್, ಕಚ್ಚೆಪಂಚೆ, ಮೇಲೊಂದು ಶಾಲು, ಹಣೆಯ ಮೇಲೊಂದು ಉದ್ದ ಕೆಂಪು ನಾಮ. ನಂತರ ಇವರನ್ನು ನೋಡುವ ಅವಕಾಶ ನನಗೆ ಸಿಗಲಿಲ್ಲ.

ಇನ್ನೊಬ್ಬ ಉಪಾಧ್ಯಾಯರು ವರದ ದೇಶಿಕಾಚಾರ್ ಎಂಬವರು. ಎಂದೆಂದೂ ಮರೆಯದಂತಹ ವ್ಯಕ್ತಿತ್ವ ಅವರದು. ಹಣೆಯ ಮೇಲೆ ಮೂರು ನಾಮ, ಕಚ್ಚೆ ಪಂಚೆ, ತೋಳು ಮುಚ್ಚಿದ ಅಂಗಿ, ತಲೆ ಮೇಲೊಂದು ಕರಿ ಟೋಪಿ. ಸಣ್ಣ ಜುಟ್ಟು. ಅವರು ವೇಗವಾಗಿ ನಡೆಯುವಾಗ ಎರಡು ಕೈಗಳನ್ನು ಒಟ್ಟಿಗೆ ಬೀಸುತ್ತಿದ್ದರು. ಇಂಗ್ಲಿಷ್, ಹಿಂದೀ ಕ್ಲಾಸ್‌ಗಳನ್ನು ತೆಗೆದುಕೊಳ್ಳುತ್ತಿದ್ದರು. ಇಂಗ್ಲಿಷ್ ಅಂದರೆ ಇಂಗ್ಲಿಷೇ! ಎಂಥ ದಡ್ಡನೂ ಅವರ ಪಾಠ ಕೇಳಿ ಬುದ್ಧಿವಂತನಾಗುತ್ತಿದ್ದ. ಪಾಪ, ಅವರು ಒಂದೇ ವರ್ಷ ನಮ್ಮ ಶಾಲೆಯಲ್ಲಿದ್ದರು. ಅವರ ಒಲವು ಅಧ್ಯಾತ್ಮದತ್ತ ಇತ್ತು. ನನ್ನ ಮೇಲೆ ತುಂಬ ಪ್ರೀತಿ ತೋರಿಸುತ್ತಲೂ ಇದ್ದರು. ಅನಂತರ ಅವರನ್ನು ನೋಡಲಿಲ್ಲ. ಬೆಂಗಳೂರಿನಲ್ಲಿ ರಾಮಾಯಣ ಭಾರತ ಪುಸ್ತಕಗಳು ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿವೆಯೆಂದು ಕೇಳಿದ್ದೇನೆ.

ನಮ್ಮ ಹೈಸ್ಕೂಲಿನ ಹೆಡ್ಮಾಸ್ತರರಾಗಿದ್ದವರು ಅರಸ್ ಎಂಬವರು. ಬಹುಶಃ ಸುಬ್ರಹ್ಮಣ್ಯರಾಜೇ ಅರಸ್ ಎಂದು ಇರಬೇಕು. ಮೈಸೂರು ಪೇಟಾ, ಕಚ್ಚೆ ಪಂಜೆ ಕೋಟು. ತೀರ ತೆಳ್ಳಗಿದ್ದರು. ಕನ್ನಡಕಧಾರಿ. ಒಳ್ಳೆಯ ಭಾಷಣಕಾರ. ಅವರು ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದರು. ಎಸ್. ಎಸ್. ಎಲ್. ಸಿ. ಯಲ್ಲಿ ಇಂಗ್ಲಿಷ್ ಪಠ್ಯದ ಮೊದಲ ಪಾಠ ಮುಗಿಸಲು ಒಂದು ತಿಂಗಳು ತೆಗೆದುಕೊಂಡಿದ್ದರು. ಆಮೇಲೆ ಉಳಿದ ಪಾಠಗಳನ್ನು ಹಾರಿಸಿದ್ದೇ. ಹಾಸ್ಯ ಚಟಾಕಿಗಳನ್ನು ಸಿಡಿಸುತ್ತಿದ್ದರು. ಅವರ ಕ್ಲಾಸ್ ತಪ್ಪಿಸಲು ಮನಸ್ಸಾಗುತ್ತಿರಲಿಲ್ಲ.

ಹೈಸ್ಕೂಲಿನಲ್ಲಿ ಮೂರು ವರ್ಷವೂ ಪರೀಕ್ಷೆಯಲ್ಲಿ ನಾನು ಪ್ರಥಮ ಸ್ಥಾನ ಪಡೆಯುತ್ತಿದ್ದೆ. ಹುಣಸೂರಿನ ಕಾಫೀ ಕ್ಯೂರಿಂಗ್ ವರ್ಕ್ಸ್‌ನವರು ಘೋಷಿಸಿದ್ದ ಪ್ರಥಮ ಬಹುಮಾನ ನನಗೆ ಸಿಗುತ್ತಿತ್ತು. ಆಗಿನ ಕಾಲದ ಐದು ರೂಪಾಯಿ. ಹೈಸ್ಕೂಲಿನ ವಾರ್ಷಿಕೋತ್ಸವದ ದಿನ ಹುಣಸೂರಿನಲ್ಲಿ ಸಂತೆ. ನಮ್ಮ ಹೋಟೆಲಿಗೂ ವ್ಯಾಪಾರ ಜೋರು. ನಾನು ಸಮಾರಂಭಕ್ಕೆ ಹೋಗಲಾಗಲಿಲ್ಲ. ರಾತ್ರಿ ಎಂಟು ಎಂಟೂವರೆಯ ಸಮಯ ಹೋಗಿ ಜನರ ಮಧ್ಯೆ ನಿಂತಿದ್ದಾಗ ಪ್ರಥಮ ಬಹುಮಾನ ಪಡೆಯಲು ನನ್ನ ಹೆಸರು ಕರೆದಾಗ ರೋಮಾಂಚನಗೊಂಡೆ. ಆದರೆ ಚಾ ಕಾಫಿ ಕಲೆಯ ಕೊಳಕು ಅಂಗಿ ಚಡ್ಡಿಯಲ್ಲಿದ್ದ ನಾನು ಸ್ಟೇಜ್‌ಗೆ ಹೋಗಲಿಲ್ಲ. ಹುಡುಗ ಬರಲಿಲ್ಲ ಎಂದು ಅನೌನ್ಸ್ ಮಾಡಿ, ಮಾರನೆ ದಿನ ಶಾಲೆಗೆ ಹೋದ ಮೇಲೆ ಐದು ರೂಪಾಯಿಯನ್ನು ಕವರ್‌ನಲ್ಲಿ ಹಾಕಿ ಹೆಡ್ಮಾಸ್ಟರ್ ಅರಸ್ ಅವರು ಕೊಟ್ಟು, ಭೇಷ್ ಎಂದು ಬೆನ್ನು ತಟ್ಟಿದರು. ಪಬ್ಲಿಕ್ ಪರೀಕ್ಷೆಯಲ್ಲಿ ಶಾಲೆಗೊಂದು ರ್‍ಯಾಂಕ್ ನನ್ನಿಂದ ಬರಬಹುದೆಂದು ನಿರೀಕ್ಷಿಸಿದ್ದರು. ಅನಾರೋಗ್ಯವೋ ಏನೋ ಹತ್ತು ರ್‍ಯಾಂಕುಗಳಲ್ಲಿ ನನಗೆ ಒಂದೂ ಬರಲಿಲ್ಲ! ಆದರೆ ಸ್ಟೇಟ್‌ಗೆ ಮೂವತ್ತನಾಲ್ಕನೇ ರ್‍ಯಾಂಕ್ ನನ್ನದಾಗಿತ್ತು. ನನಗೆ ಇದೊಂದು ದೊಡ್ಡ ಸಂಗತಿ ಅನಿಸಲಿಲ್ಲ. ಆದರೆ ನನ್ನ ವಿದ್ಯಾರ್ಥಿ ಜೀವನದ ಸುವರ್ಣಕಾಲ ನಾನು ಹೈಸ್ಕೂಲಿನಲ್ಲಿ ಕಳೆದ ಕಾಲ.

ನನ್ನ ಸಹಪಾಠಿಗಳಲ್ಲಿ ಭಾರ್ಗವ ಸಿನಿಮಾ ನಿರ್ದೇಶಕನಾಗಿದ್ದ. ಜೆ. ಎನ್. ಗೋವಿಂದರಾಜ ಟೆಲಿಕಮ್ಯುನಿಕೇಶನ್ನಿನ ಅಧಿಕಾರಿ. ಈಗ ಮೈಸೂರಿನಲ್ಲಿದ್ದಾನೆ. ಇನ್ನೊಬ್ಬ ಲಕ್ಷ್ಮೀನಾರಾಯಣ, ಲಾಯರ್‍ರ ಮಗ, ಇಂಜಿನಿಯರ್ ಆಗಿದ್ದ. ಮತ್ತೊಬ್ಬಳು ನನ್ನ ಸ್ಪರ್ಧಿಯಾಗಿದ್ದ ಶ್ರೀಲಕ್ಷ್ಮೀ. ಎಲ್ಲಿದ್ದಾಳೋ.

✦ **ಎಚ್. ಗೋಪಾಲ ಭಟ್ಟ**, 'ವಾಗ್ದೇವಿ', ಹಯಗ್ರೀವನಗರ, ಉಡುಪಿ–೫೭೬ ೧೦೨ ✦

ನನ್ನ ಶಾಲಾ ಗುರುಗಳು

ಕೆ. ವಿ. ಉಭಯಭಾರತಿ

ನನ್ನ ಶಾಲಾ ದಿನಗಳು ನೆನಪಾದಾಗ ಅಪ್ರಯತ್ನವಾಗಿ ಮನಸ್ಸು ನಲವತ್ತು- ನಲವತ್ತೈದು ವರ್ಷಗಳಷ್ಟು ಹಿಂದಕ್ಕೆ ಜಿಗಿಯುತ್ತೆ. ನಾನು ಓದಿದ್ದು ಮೈಸೂರಿನ ಸೇಂಟ್ ಮೇರಿ ಶಾಲೆಯಲ್ಲಿ. ಚಾಮುಂಡಿ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಎರಡೂ ಬದಿ ವಿಸ್ತಾರವಾಗಿ ಹರಡಿಕೊಂಡಿರುವ ವೀಳೆಯದೆಲೆ ತೋಟವಿದೆ. ಈ ಪ್ರಶಾಂತ ಪರಿಸರದ ಸಮೀಪದಲ್ಲಿದ್ದ ಶಾಲೆಯೇ ನಮ್ಮದು.

ನಾನು ಒಂದನೆ ತರಗತಿಗೆ ಸೇರಿದಾಗ ನನಗೆ ಸುಮಾರು ಐದು ವಯಸ್ಸಿರಬೇಕು. ಅಕ್ಷರ ಜ್ಞಾನ ಕಲಿಸಿದ 'ಲಿಲ್ಲಿ' ಟೀಚರ್ ನನ್ನ ಮೊದಲ ಶಾಲಾ ಗುರು. ಅವರ ಗಾತ್ರ, ಬಣ್ಣ, ಕಂಠಕ್ಕೆ ಭಯಪಡದ ಮಕ್ಕಳಿರಲಿಲ್ಲ. ಇದಕ್ಕೆ ನಾನೂ ಹೊರತಾಗಿರಲಿಲ್ಲ. ಯಾವುದೇ ಮಗು ಗಲಾಟೆಯೋ ಅಥವಾ ಅತ್ತು ರಂಪ ಮಾಡಿದ್ದೇ ಆದಲ್ಲಿ ಅವರು 'ಏಯ್, ಅಳು ನಿಲ್ಲಿಸದಿದ್ರೆ ನಿನ್ನನ್ನ ಸೊಳ್ಳೆ ರೂಮಿನಲ್ಲಿ ಕೂಡಿ ಹಾಕ್ತೀನಿ' ಎಂದು ಬಿರುಗಣ್ಣು ಬಿಟ್ಟು ಹೆದರಿಸುತ್ತಿದ್ದರು. 'ಸೊಳ್ಳೆ ರೂಮು' ಎಂದರೆ ಶಾಲೆಯ ಶೌಚಗೃಹದ ಪಕ್ಕವಿದ್ದ ಹಳೆ ಸಾಮಾನು, ಕಸ-ಕಡ್ಡಿ, ಧೂಳಿನಿಂದ ತುಂಬಿದ್ದ ಕತ್ತಲೆ ಕೋಣೆ. ಎಲ್ಲಿ ಆ ಕೋಣೆಯಲ್ಲಿ ಹಾಕಿಬಿಡುವರೋ ಎಂಬ ಭಯಕ್ಕೆ ಯಾವ ಮಗುವಾದರೂ ಸದ್ದಡಗಿಸಿ ಗಪ್‌ಚಿಪ್ ಆಗಿಬಿಡುತ್ತಿತ್ತು.

ಒಮ್ಮೆ ತರಗತಿಯಲ್ಲಿರುವಾಗ ಮೂತ್ರದ ಬಾಧೆ ತೀರಿಸಿಕೊಂಡು ಬರಲು ಅವರ ಅಪ್ಪಣೆ ಕೂಡ ಕೇಳಲು ಅಂಜಿ ಕೂತಲ್ಲೇ ಮುಗಿಸಿಬಿಟ್ಟಿದ್ದೆ. ನನ್ನ ಪಕ್ಕದಲ್ಲಿ ಕುಳಿತಿದ್ದ ಇಬ್ಬರು ಹುಡುಗಿಯರು ಥೂ... ಥೂ... ಎಂದು ಕೂಗುತ್ತ ನನ್ನಿಂದ ದೂರ ಓಡಿದ್ದನ್ನು ಕಂಡ ಟೀಚರು ನನ್ನ ಬಳಿಗೆ ಬಂದಾಗ ನನಗೆ ಒಮ್ಮೆಲೆ ನಡುಕ ಉಂಟಾಯಿತು. ಆದರೆ ಅವರು ಸ್ವಲ್ಪವೂ ಮುಖ ಸಿಂಡರಿಸದೆ 'ಏನೇ ಇದು?... ಅವಸರ ಆದರೆ ಕೇಳೋದಕ್ಕೆ ಆಗ್ತಿರಲಿಲ್ಲವಾ?' ಎಂದು ನಯವಾಗಿಯೇ ಮಾತಾಡಿದರು. ತುಂಬಾ ನಾಚಿಕೆಯಿಂದ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತು. 'ಯಾಕೆ ಅಳ್ತೀಯಾ?, ಹೋಗಲಿ ಬಿಡು' ಎಂದು ಹೇಳಿ 'ಅಣ್ಣಮ್ಮ... ಇಲ್ಲಿ ಬಂದು ಸ್ವಲ್ಪ ಕ್ಲೀನ್ ಮಾಡು' ಎಂದು ಶಾಲೆಯ ಪರಿಚಾರಕಿಯನ್ನು ಕೂಗಿದರು. ನನ್ನ ಸ್ಕರ್ಟ್ ನೆಂದು ಹೋಗಿದ್ದುದನ್ನು ಗಮನಿಸಿ, 'ಮನೆಗೆ ಹೋಗಿ ಬಟ್ಟೆ ಬದಲಾಯಿಸಿಕೊಂಡು ಬಾ' ಅಂತ ಶಾಲೆಗೆ ಹತ್ತಿರವೇ ಇದ್ದ ನನ್ನ ಮನೆಗೆ ಕಳಿಸಿದರು. ಆ ನಂತರ ಅವರ ಮೇಲಿದ್ದ ನನ್ನ ಭಯ ಹೊರಟು ಹೋಯಿತು.

ನನ್ನ ತಂದೆಗೆ ನಶ್ಯ ಹಾಕಿಕೊಳ್ಳುವ ಅಭ್ಯಾಸವಿತ್ತು. ಹಲವಾರು ಗಂಡಸರು ನಶ್ಯ ಹಾಕಿಕೊಳ್ಳುವುದನ್ನು ನಾನು ನೋಡಿದ್ದೆ. ಈ ಲಿಲ್ಲಿ ಟೀಚರ್ ಎಲ್ಲರೆದುರಿಗೆ ತಮ್ಮ ದೊಡ್ಡ ಮೂಗಿನ ಹೊಳ್ಳೆಗಳಿಗೆ ನಶ್ಯ ಏರಿಸುತ್ತಿದ್ದುದಲ್ಲದೆ ಅದೇ ಶಾಲೆಯಲ್ಲಿ ಸಂಗೀತ ಮೇಷ್ಟ್ರು ಆಗಿದ್ದ ನನ್ನ ತಂದೆಯಿಂದ ಯಾವುದೇ ಸಂಕೋಚವಿಲ್ಲದೆ, ನನ್ನನ್ನು ಕಳಿಸಿ ಆಗಾಗ ನಶ್ಯ ತರಿಸಿಕೊಳ್ಳುತ್ತಿದ್ದುದು ನನಗೆ ಅಚ್ಚರಿಯುಂಟು ಮಾಡುತ್ತಿತ್ತು. ಅವರನ್ನು ಮರೆಯದಿರಲು ಇನ್ನೊಂದು ಮುಖ್ಯ ಕಾರಣವೇನೆಂದರೆ ಅವರು ನಮಗೆ ಶಿಶುಗೀತೆಗಳನ್ನು ಕಲಿಸುವಾಗ ನಮ್ಮ ತಲೆಗೆ ಹತ್ತುವಂತೆ ರಾಗವಾಗಿ ಹಾಡುತ್ತ ಅದಕ್ಕೆ ತಕ್ಕಂತೆ ತಮ್ಮ ದೇಹವನ್ನು

ಕುಲುಕಿಸುತ್ತ, ನಮ್ಮನ್ನು ಹಾಡಿಸಿ ಕುಣಿಸುತ್ತಿದ್ದರು. ನಮಗೆ ಅವರ ಪಾಠವೇ ಒಂದು ಆಟವಾಗಿತ್ತು. ಇವತ್ತಿಗೂ ಅಂದಿನ ಹಾಡುಗಳು ನನ್ನ ನೆನಪಿನಲ್ಲಿ ಹಚ್ಚ ಹಸುರಾಗಿ ಉಳಿದುಕೊಂಡಿವೆ. "ನಾಯಿಮರಿ... ನಾಯಿಮರಿ ತಿಂಡಿ ಬೇಕೇ...", "ಬಣ್ಣದ ತಗಡಿನ ತುತ್ತೂರಿ... ಕಾಸಿಗೆ ಕೊಂಡನು ಕಸ್ತೂರಿ", "ನಮ್ಮ ಶಾಲೆಯ ತೋಟದಲಿ ಕಾಯಿಪಲ್ಲೆ ಬಿತ್ತಿದೆವು...", "ಝಣ ಝಣ ಝಣ... ಜೇಬು ತುಂಬ ಹಣ", "ಡೊಳ್ಳು ಹೊಟ್ಟೆ ಭಾರಿ ಅವನೇ ಡುಮ್ಮಣ್ಣಾಚಾರಿ", "ಜಾಕ್ ಅಂಡ್ ಜಿಲ್", "ಬಾ ಬಾ ಬ್ಲ್ಯಾಕ್ ಷೀಪ್"...

ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ನಾನು ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಳ್ಳಲು ಮುಖ್ಯ ಕಾರಣ ನನಗೆ ಏಳನೆಯ ತರಗತಿಯಲ್ಲೇ ಗಣಿತದಲ್ಲಿ ಆಸಕ್ತಿ ಹುಟ್ಟಿಸಿ ಭದ್ರ ಬುನಾದಿ ಹಾಕಿ ಕೊಟ್ಟ ಸರೋಜಮ್ಮ ಟೀಚರ್. ಭಿನ್ನರಾಶಿ, ಸರಳ ಮತ್ತು ಚಕ್ರಬಡ್ಡಿ, ಅನುಪಾತ, ಲಾಭ ನಷ್ಟದ ಲೆಕ್ಕಗಳನ್ನು ಅವರು ನಮಗೆ ಅರ್ಥವಾಗುವ ರೀತಿಯಲ್ಲಿ ಕಲಿಸುತ್ತಿದ್ದರು. ಅವರು ಬಹಳ ಕಟ್ಟುನಿಟ್ಟಿನವರಾಗಿದ್ದು ವಿದ್ಯಾರ್ಥಿನಿಯರಲ್ಲಿ ಶಿಸ್ತು-ವಿನಯ-ಶ್ರದ್ಧೆಯನ್ನು ನಿರೀಕ್ಷಿಸುತ್ತಿದ್ದರು.

ಯಾವುದೇ ವಿದ್ಯಾರ್ಥಿನಿ ಹೋಮ್‌ವರ್ಕ್ ಮಾಡಿಕೊಂಡು ಬರದಿದ್ದಲ್ಲಿ ಅವಳಿಗೆ ಬೆತ್ತದೇಟಿನ ಉಡುಗೊರೆ ತಪ್ಪಿದ್ದಲ್ಲ. ಹೀಗಿದ್ದಾಗ್ಯೂ ಎಸ್. ವಿಜಯ ಎಂಬ ಹುಡುಗಿಯೊಬ್ಬಳು ಆಗಾಗ ಹೋಮ್‌ವರ್ಕ್ ಮಾಡಿಕೊಂಡು ಬರುತ್ತಿರಲಿಲ್ಲ. ದಡ್ಡರನ್ನಾದರೂ ನಮ್ಮ ಟೀಚರ್ ಸಹಿಸಿಯಾರು, ಆದರೆ ಸೋಮಾರಿಗಳನ್ನು ಕಂಡರೆ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಹಾಗಾಗಿ ಅವರು ಸಿಟ್ಟಿನಿಂದ ಅವಳ ಕುಂಡೆಗೆ ಬಾರಿಸುತ್ತಿದ್ದರು. ಹಾಗೆ ಬಾರಿಸುವಾಗ ಅವರು ಒಂದೊಂದು ಏಟಿಗೂ ಕೇಳುವ ಪ್ರಶ್ನೆಗಳು ನಮಗೆಲ್ಲಾ ನಗುವಂತೆ ಮಾಡುತ್ತಿತ್ತು- "ಏನೇ... ಮನೇಲಿ ಮುಸುರೆ ತಿಕ್ಕೀಯಾ?, ಮನೆ ಕಸ ಗುಡಿಸ್ಬೇಕಾ?, ಮಗುವಿನ ಹೇಲು ಬಟ್ಟೆ ಒಗೀಬೇಕಾ?... ಹೋಮ್‌ವರ್ಕ್ ಮಾಡೋಕೆ ನಿಂಗೇನು ಕೇಡು...?" ಇಷ್ಟಾದರೂ ತನಗಲ್ಲ ಎನ್ನುವಂತೆ ಸುಮ್ಮನೆ ಅವಳು ಗಣೇಮರದ ಹಾಗೆ ನಿಂತಿರುತ್ತಿದ್ದುದು ಟೀಚರ್‌ಗೆ ಕೆಣಕಿದಂತಾಗುತ್ತಿತ್ತು. ಒಮ್ಮೆ ಹೀಗೆ ಅವಳಿಗೆ ಬೆತ್ತದೇಟು ಬಾರಿಸಿ ಸುಸ್ತಾದ ಟೀಚರ್, "ಏನೇ... ಲಂಗದ ಒಳಗೆ ರಟ್ಟು ಹಾಕ್ಕೊಂಡು ಬಂದಿದೀಯಾ?" ಎಂದು ಅವಳನ್ನು ಕೇಳಿದಾಗ ನಮಗೆಲ್ಲಾ ನಗುವೋ ನಗು, ಅವಳಿಗೂ ನಗು, ಅವರಿಗೂ ನಗು. ಆವರಿಗೆ ಏನೋ ಅನುಮಾನ ಬಂದು ಕಾಲಿನ ವರೆಗೂ ಇದ್ದ ಅವಳ ಲಂಗವನ್ನು ಸ್ವಲ್ಪವೇ ಬೆತ್ತದಿಂದ ಸರಿಸಿ ನೋಡಿದರು. ಒಳಗೆ ಒಂದು ಲಂಗ!... ಅದನ್ನು ಎತ್ತಿದಾಗ ಅದರೊಳಗೆ ಇನ್ನೊಂದು! ಅದನ್ನೂ ಎತ್ತಿ ನೋಡಿದರೆ ಮತ್ತೊಂದು! ಒಟ್ಟು ೪ ಲಂಗಗಳು!

ಇನ್ನೊಂದು ಪ್ರಸಂಗದಲ್ಲಿ ಇದೇ ಟೀಚರ್ ಲೆಕ್ಕ ತಪ್ಪುತಪ್ಪಾಗಿ ಮಾಡಿಕೊಂಡು ಬಂದದ್ದಕ್ಕಾಗಿ ಜಯಂತಿ ಎಂಬ ಶ್ರೀಮಂತ ಬಟ್ಟೆ ವ್ಯಾಪಾರಿಯ ಮಗಳಿಗೆ ಚೆನ್ನಾಗಿ ಥಳಿಸಿದ್ದರು. ಮರುದಿನ ಅವಳ ಜೊತೆಯಲ್ಲಿ ಬಂದ ಅವಳ ಅಜ್ಜಿ ದೊಡ್ಡ ರಂಪಾಟವನ್ನೇ ಎಬ್ಬಿಸಿಬಿಟ್ಟರು. "ನಾವೇ ನಮ್ಮ ಮಕ್ಕಳಿಗೆ ಹೊಡೆಯೋದಿಲ್ಲ... ನೀವ್ಯಾಕೆ ಹೊಡೀಬೇಕು... ಒಳ್ಳೆ ಮಾತ್ನಲ್ಲಿ ಪಾಠ ಹೇಳಿ ಕೊಡ್ಬೇಕು... ಅದು ಬಿಟ್ಟು ಹೀಗೆ ಹೊಡೆಯೋದಾ?" ಎಂದು ಕೂಗಾಡಿದ್ದರು. ಟೀಚರ್‌ಗೆ ಕೋಪ ಬಂದರೂ ಸಮಾಧಾನದಿಂದ, "ಮಕ್ಕಳಿಗೆ ಹೇಗೆ ಕಲಿಸಬೇಕು ಅಂತ ನಮಗೂ ಗೊತ್ತು. ನಿಮ್ಮ ಹಾಗೆ ಯಾವ ಅಜ್ಜಿ, ಅಪ್ಪ-ಅಮ್ಮಂದಿರು ಶಾಲೆಗೆ ಬಂದು ಈವರೆಗೆ ಗಲಾಟೆ ಮಾಡಲಿಲ್ಲ. ನೀವೇ ನಿಮ್ಮ ಮಗುವನ್ನು ಮುದ್ದಿನಿಂದ ಹಾಳು ಮಾಡಬಾರದು" ಎಂದು ಎಚ್ಚರಿಕೆ ನೀಡಿ ಅವರನ್ನು ಕಳಿಸಿದ್ದರು. ಈ ಗಂಭೀರ ಪ್ರಸಂಗವನ್ನೂ ನಾನು ಇವತ್ತಿಗೂ ಮರೆತಿಲ್ಲ.

ಇನ್ನು ಚರಿತ್ರೆ–ಭೂಗೋಳ ಟೀಚರ್ ಜಯಮ್ಮನವರನ್ನು ಕಂಡರೆ ನಮಗೆ ವಿಪರೀತ ಭಯ. ಅವರ ಕಣ್ಣ ನೋಟಕ್ಕೆ ನಾವು ಬೆದರುತ್ತಿದ್ದೆವು. ಅಂದಿನ ಒಂದು ಪ್ರಸಂಗವನ್ನು ನೆನೆಸಿಕೊಂಡರೆ ಈಗಲೂ ನಗು ಉಕ್ಕಿ ಬರುತ್ತದೆ.

ಅರ್ಧವಾರ್ಷಿಕ ಪರೀಕ್ಷೆ ಮುಗಿದ ನಂತರ ನಮಗೆಲ್ಲಾ ದಸರಾ ರಜೆ ಪ್ರಾರಂಭ ವಾಗುವುದೆಂಬ ಸಂಭ್ರಮ. ಟೀಚರುಗಳಿಗೆ ನಮ್ಮ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕಾದ ಸಂಕಟ. ತರಗತಿಯಲ್ಲೇ ಕುಳಿತು ಉತ್ತರಗಳನ್ನು ನೋಡುತ್ತಿದ್ದ ಜಯಮ್ಮ ಟೀಚರ್ ಯಾರದ್ದೋ ಉತ್ತರಪತ್ರಿಕೆಯನ್ನು ಹಾಗೆ ಹೀಗೆ ತಿರುಗಿಸುತ್ತ, "ಯಾವಳೇ ಅವ್ಳು ದಡ್ಡ ಶಿಖಾಮಣಿ" ಎಂದು ಹುಬ್ಬು ಗಂಟಿಕ್ಕಿ ನಮ್ಮ ಕಡೆ ನೋಡಿದರು. ಐತಿಹಾಸಿಕ ಹಾಗೂ ಭೌಗೋಳಿಕ ವಿವರಗಳನ್ನು ನೆನಪಿನಲ್ಲಿಟ್ಟುಕೊಂಡು ಉತ್ತರಿಸುವುದು ಕಷ್ಟವಾದದ್ದ ರಿಂದ ಈ ವಿಷಯದಲ್ಲಿ ನಾವು ಹೆಚ್ಚು ತಪ್ಪುಗಳನ್ನು ಮಾಡುವುದು ಸಹಜವಾಗಿತ್ತು. ಹಾಗಾಗಿ ಯಾರಿಗೆ ಇವತ್ತು ಗ್ರಹಚಾರ ಕಾದಿದೆಯೋ ಎಂದು ಆತಂಕಪಟ್ಟೆವು. "ಯಾರೇ ಅವ್ಳು... ಎಸ್. ಕೆ. ವಿಶಾಲಾಕ್ಷಿ!... ಎದ್ದು ನಿಂತ್ಕೊಳೆ" ಎಂದು ಕೂಗು ಹಾಕಿದರು. ವಿಶಾಲಾಕ್ಷಿ ಅನ್ನುವವಳು ನಡುಗುತ್ತಲೇ ಎದ್ದು ನಿಂತು ಟೀಚರ್ ಮುಖವನ್ನೇ ಭಯದಿಂದ ನೋಡುತ್ತಿದ್ದಳು. "ನಿನಗೇನು ಬಂದಿದೆ ದಾಡಿ?... ಚೆನ್ನಾಗಿ ಊಟ ಮಾಡೋದಕ್ಕೆ ಮಾತ್ರ ಬರುತ್ತೆ. ಚೆನ್ನಾಗಿ ಓದೋದಕ್ಕೆ ಏನು ರೋಗ?" ಸಿಡುಕುತ್ತಲೇ ಬೈದರು. ಅವಮಾನದಿಂದ ಅವಳು ಕುಗ್ಗಿಹೋದಳು. "ರಾಜರಾಜ ಚೋಳನ್ನ ಮೊಘಲ ಸಾಮ್ರಾಜ್ಯದ ಮೊದಲನೆಯ ಅರಸ ಅಂತ ಬರೆದಿದ್ದೀಯಲ್ಲ... ಅದ್ಯಾವಾಗ ಚೋಳ ಮುಸಲ್ಮಾನ ಆಗಿಹೋದ?" ಅಂತ ಮೂದಲಿಸಿದರು. ನಮಗೆಲ್ಲಾ ಗುಸುಗುಸು ನಗು. ಅದನ್ನು ಕಂಡ ಟೀಚರ್ "ಯಾಕ್ರೆ ನಗ್ತೀರಾ?... ಸರಿಯಾದ ಉತ್ತರ ಎಷ್ಟು ಮಂದಿಗೆ ಗೊತ್ತು? ಕೈ ಎತ್ತಿ ನೋಡೋಣ?" ಎಂದರು. ಪ್ರಶ್ನೆ ಸುಲಭವಾದದ್ದರಿಂದ ಬಹುತೇಕ ಎಲ್ಲರ ಕೈಗಳು ಮೇಲೆತ್ತಿದ್ದವು. "ಹೂಂ... ಈಗ ಹೇಳಿ ಉತ್ತರ..." ಎಂದದ್ದಕ್ಕೆ ನಾವೆಲ್ಲರೂ 'ಬಾ... ಬರ್' ಎಂದು ಒಕ್ಕೊರಲಿನಲ್ಲಿ ಹೇಳಿದ್ದೆವು. ಅವರು ಪಾಠ ಮಾಡುವಾಗ 'ಬಾಬರ್' ಎನ್ನುವುದನ್ನು 'ಬಾ... ಬರ್' ಎಂದು ಅಕ್ಷರ ವಿಂಗಡಿಸಿ ಉಚ್ಚಾರ ಮಾಡುತ್ತಿದ್ದುದನ್ನು ಗಮನಿಸಿದ್ದ ನಾವು ಸರಾಗವಾಗಿ ಅವರನ್ನೇ ಅನುಕರಣೆ ಮಾಡಿದ್ದೆವು. ಅವರ ಮುಖದಲ್ಲೂ ಕಿರು ನಗೆ ಮೂಡಿ ಮಾಯವಾಯಿತು. ಇನ್ನೂ ನಿಂತುಕೊಂಡೇ ಇದ್ದ ವಿಶಾಲಾಕ್ಷಿಯನ್ನು ನೋಡಿ, "ಏನು ನೋಡ್ತಿದ್ದೀಯ... ಗೆಡ್ಡೆಗಣ್ಣು ಬಿಟ್ಕೊಂಡು?... ಕುಕ್ಕರಿಸು" ಅಂತ ರೇಗಿದರು. ವಿಶಾಲಾಕ್ಷಿಗೆ ನಿಜಕ್ಕೂ ಮುಂದಕ್ಕೆ ಬಾಚಿಕೊಂಡಂತಿದ್ದ ದೊಡ್ಡ ದೊಡ್ಡ ಕಣ್ಣುಗಳಿದ್ದವು. ಪಾಪ!... ಅವಳು ತತ್ತರಿಸಿ ಹೋಗಿದ್ದಳು. ಅಂದಿನ ಆ ದೃಶ್ಯಗಳು ನನ್ನ ನೆನಪಿನಿಂದ ಇನ್ನೂ ಮಾಸಿ ಹೋಗಿಲ್ಲ.

ವಿದ್ಯಾರ್ಥಿನಿಯರನ್ನು ಬೈಯುವುದು, ಶಿಕ್ಷಿಸುವುದು ಶಾಲೆಯ ಟೀಚರುಗಳಿಗೆ ಸಾಮಾನ್ಯವಾಗಿದ್ದರೂ ಸಿಸಿಲಿಯಾ ಸಿಸ್ಟರ್‌ನ ವರಸೆ ತೀರಾ ಭಿನ್ನವಾಗಿದ್ದರಿಂದ ಅವರನ್ನು ಮರೆಯಲು ಸಾಧ್ಯವೇ ಇಲ್ಲ. ಬೈಯುವುದರಲ್ಲಿ ಅವರು ನಿಸ್ಸೀಮರು. "ಏಯ್ ದೋಣಿ ಹಾಗೆ ಇದ್ದೀಯಲ್ಲೇ?", "ಏಯ್ ಮೂಳಿ... ನೀನು ರಾಗಿ ಬೀಸೋದಕ್ಕೆ ಲಾಯಕ್ಕು, ಸ್ಕೂಲ್‌ಗೆ ಯಾಕೆ ಬರ್ತೀಯಾ?", "ಏಯ್... ನಿನ್ನ ತಲೆಯಲ್ಲಿ ಲದ್ದಿ ತುಂಬಿದೆಯಾ?" ಅಂತ ಹೀನಾಯಮಾನವಾಗಿ ಜಾಲಾಡುತ್ತಿದ್ದರು. ಅರ್ಥವಾಗುವ ದೂಷಣೆಗಿಂತ ಅನರ್ಥವಾದ ದೂಷಣೆಯೇ ಹೆಚ್ಚು ಪರಿಣಾಮಕಾರಿಯೋ ಏನೋ? ಅವರಿಗೆ ಕೋಪ

ಬಂತೆಂದರೆ ಹುಡುಗಿಯರು ಗಡಗಡ ನಡುಗುತ್ತಿದ್ದರು. ವಿದ್ಯಾರ್ಥಿನಿಯ ಜುಟ್ಟು ಹಿಡಿದು ಗಲಗಲ ಅಲುಗಾಡಿಸಿ ಕಡ್ಡಿಯಿಂದ ಬಾರಿಸುತ್ತಿದ್ದರು. ದಂಡಿಸುವಾಗ ಅವರು ಥೇಟ್ ಚಂಡಿಯಂತೆ ಕಾಣುತ್ತಿದ್ದರು.

ಟೀಚರುಗಳು ನಮ್ಮನ್ನು ಎಷ್ಟೇ ದೂಷಿಸಿ ದಂಡಿಸಿದರೂ ಯಾವ ವಿದ್ಯಾರ್ಥಿನಿಗೂ ಅವರುಗಳ ಬಗ್ಗೆ ಕೋಪ, ದ್ವೇಷದ ಭಾವನೆಗಳು ಮೂಡುತ್ತಿರಲಿಲ್ಲ. ಈ ಏಟಿನ ಶಿಕ್ಷೆ ಅಂತ್ಯಗೊಂಡದ್ದು ನಾವು ಹೈಸ್ಕೂಲಿಗೆ ಬಂದಾಗಲೇ.

ನಾವು ಏಳನೆಯ ತರಗತಿ ಮುಗಿಸಿ ಇದೇ ಶಾಲೆಯ ಹೈಸ್ಕೂಲು ವಿಭಾಗಕ್ಕೆ ಸೇರಿಕೊಳ್ಳುವಾಗ ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಬದಲಾಯಿಸಿಕೊಳ್ಳುವ ಅವಕಾಶವಿತ್ತು. ನಾನು ಈ ಅವಕಾಶವನ್ನು ಬಳಸಿಕೊಂಡೆ. ಇಂಗ್ಲಿಷ್ ಪಾಠ ಬೋಧಿಸುವ ಮೇರಿ ಟೀಚರ್‌ಗೆ ಕನ್ನಡ ಅಷ್ಟಾಗಿ ಬರುತ್ತಿರಲಿಲ್ಲ. ಒಮ್ಮೆ ಅವರು ನಮಗೆ "Zoo" ಕುರಿತು ಪ್ರಬಂಧ ಬರೆಯಲು ಹೇಳಿದರು. ಬರೆದು ಮುಗಿಸಿ ನಮ್ಮ ನೋಟ್‌ಪುಸ್ತಕಗಳನ್ನು ಅವರಿಗೆ ಕೊಟ್ಟೆವು. ನನ್ನ ಪ್ರಬಂಧ ಓದತೊಡಗಿದರು. ಅದರಲ್ಲಿ "Animals are kept in bones" ಎಂಬ ವಾಕ್ಯ ಇತ್ತು. ನಾನು ಏನನ್ನು ಹೇಳಲು ಪ್ರಯತ್ನಿಸುತ್ತಿದ್ದೇನೆ ಎಂಬುದು ಅವರಿಗೆ ಅರ್ಥವಾಗಲಿಲ್ಲ. ನನ್ನನ್ನು ಕರೆದು "Why are they kept in bones?" ಎಂದು ನನ್ನನ್ನು ಪ್ರಶ್ನಿಸಿದರು. ನನಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ. ಏಕೆಂದರೆ ಅವರಿಗೆ ಕನ್ನಡ ಸರಿಯಾಗಿ ಬರುತ್ತಿರಲಿಲ್ಲ. ನಾನು ಕನ್ನಡದಲ್ಲಿ ಹೇಳಿದರೂ ಅವರು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಳ್ಳುವರೆಂದು ನನಗೆ ಸಂದೇಹ. ಅಷ್ಟರಲ್ಲಿ ಪೀರಿಯಡ್ ಗಂಟೆ ಹೊಡೆಯಿತು. ಟೀಚರ್ ಅಲ್ಲಿಂದ ಹೊರಡಬೇಕೆನ್ನುವಷ್ಟರಲ್ಲೇ ಮುಂದಿನ ಪೀರಿಯಡ್‌ನ ಕನ್ನಡ ಮೇಷ್ಟ್ರು ವೆಂಕಟರಮಣಯ್ಯ ತರಗತಿಯೊಳಗೆ ಪ್ರವೇಶಿಸಿದರು. ಅವರಿಗೆ ನನ್ನ ಈ ವಾಕ್ಯವನ್ನು ತೋರಿಸಿ, "Can you tell what she means by this?" ಎಂದು ಕೇಳಿದರು. ಮೇಷ್ಟ್ರಿಗೂ ಮೊದಲು ಏನೆಂದು ತಿಳಿಯಲಿಲ್ಲ. ನನ್ನನ್ನೇ ಅದನ್ನು ಕನ್ನಡದಲ್ಲಿ ಹೇಳುವಂತೆ ಕೇಳಿದಾಗ, ನಾನು "ಪ್ರಾಣಿಗಳನ್ನು ಬೋನುಗಳಲ್ಲಿ ಇಡುತ್ತಾರೆ" ಎಂದೆ ಆಗ ಮೇಷ್ಟ್ರು ಬಿದ್ದು ಬಿದ್ದು ನಗುತ್ತಾ ಟೀಚರಿಗೆ ಅದರ ಬಗ್ಗೆ ವಿವರಿಸಿದರು– "She means to say that the animals are in the place of cages". ಮೇರಿ ಟೀಚರಿಗೂ ನಗು ಬಂದು, "Thank you for clearing the puzzle" ಎಂದರು. ನನ್ನನ್ನು "Oh Miss Bones!" ಎಂದು ಕರೆದು ನನ್ನ ಬೆನ್ನು ತಟ್ಟಿ ಹೊರಟುಹೋದರು. ನನಗೋ ಮೇಷ್ಟ್ರ ಮುಖ ನೋಡಲು ನಾಚಿಕೆಯಾಗಿತ್ತು.

ಕಚ್ಚೆ ಪಂಚೆ, ಜುಬ್ಬಾ ಉಡುಗೆ, ಹಣೆಯಲ್ಲಿ ವಿಭೂತಿ ಪಟ್ಟೆ–ಕುಂಕುಮ, ಬೋಳು ತಲೆಯ ಹಿಂದಿನ ಪಿಳಜುಟ್ಟು, ಶಾಂತ ಮುಖಮುದ್ರೆಯ ವೆಂಕಟರಮಣಯ್ಯ ಮೇಷ್ಟ್ರು ಕಾನ್ವೆಂಟ್ ಪರಿಸರಕ್ಕೆ ಹೊಂದುತ್ತಿರಲಿಲ್ಲ. ಗದ್ಯ–ಪದ್ಯ ವ್ಯಾಕರಣದಂತಹ ಕ್ಲಿಷ್ಟ ಪಾಠಗಳನ್ನು ಬಹಳ ಸಹನೆಯಿಂದ ನಮಗೆ ಮನದಟ್ಟಾಗುವಂತೆ ಕಲಿಸುತ್ತಿದ್ದರು. ಪಾಠಗಳ ನಡುವೆ ಸ್ವಾರಸ್ಯಕರ ಕಥೆಗಳನ್ನು ಹೇಳುತ್ತಿದ್ದುದು ನಮಗೆಲ್ಲ ಖುಷಿ ಕೊಡುತ್ತಿತ್ತು. ರುಕ್ಮಿಣಿ–ಸತ್ಯವತಿ ಎಂಬ ನಮ್ಮ ತರಗತಿಯ ಅವಳಿ ಹೆಣ್ಣುಮಕ್ಕಳಿಗೆ ಅವರಿಟ್ಟಿದ್ದ ಹೆಸರು ಅಕ್ಕುಲು–ಅಮ್ಮುಲು ಎಂದು. ಅವರಿಬ್ಬರನ್ನು ಅವರು ಯಾವಾಗಲೂ ಕರೆಯುತ್ತಿದ್ದುದು ಅಡ್ಡ ಹೆಸರಿನಿಂದಲೇ. ಕನ್ನಡ ಭಾಷೆ–ಸಾಹಿತ್ಯದಲ್ಲಿ ನನಗೆ ಆಸಕ್ತಿ, ಅಭಿರುಚಿ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಿದ ಅವರನ್ನು ನಾನು ಹೇಗೆ ಮರೆಯಲಿ?

ಬಿ.ಎಸ್‌ಸಿ. ಮುಗಿಸಿದ ನನಗೆ ನಾನು ಕಲಿತ ಶಾಲೆಯಲ್ಲೇ ಟೀಚರ್ ಕೆಲಸ ಸಿಕ್ಕಾಗ ನನ್ನ ಪ್ರಥಮ ಗುರು ಲಿಲ್ಲಿ ಟೀಚರ್, "ಏನೇ ಭಾರತಿ... ನೀನು ಟೀಚರ್ ಆಗಿ ಬಿಟ್ಟೇನೇ!" ಎಂದು ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡಿದ್ದನ್ನು ನಾನು ಮರೆಯುವಂತಿಲ್ಲ. ನನಗೆ ಒಂದು ಕಡೆ ನನ್ನ ಗುರುಗಳ ಸಹೋದ್ಯೋಗಿಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತಲ್ಲಾ ಎಂಬ ಸಂತೋಷ; ಇನ್ನೊಂದು ಕಡೆ ಮುಜುಗರ ಹಾಗೂ ಬೇಸರ. ಏಕೆಂದರೆ ನನ್ನ ತಂದೆಯವರು ನಿವೃತ್ತಿಯಾಗಿದ್ದು, ಬಿ.ಎ. ಪದವೀಧರೆಯಾಗಿದ್ದ ನನ್ನ ಅಕ್ಕ ಟೀಚರ್ ಆಗಿ ಅದೇ ಶಾಲೆ ಸೇರಿಕೊಂಡು ಎರಡು ವರ್ಷಗಳಾಗಿದ್ದವು. ಒಂದೇ ಶಾಲೆಯಲ್ಲಿ ಅಕ್ಕ ತಂಗಿ ಕೆಲಸ ಮಾಡುವುದು ನನಗೆ ಸರಿ ಬರುತ್ತಿರಲಿಲ್ಲ. ಒಂದು ವರ್ಷ ತಳ್ಳುವಷ್ಟರಲ್ಲೇ ನನಗೆ ಎಲ್.ಐ.ಸಿ.ಯಲ್ಲಿ ಉದ್ಯೋಗ ದೊರೆತಿದ್ದರಿಂದ ಅದೊಂದು blessing in disguise ಆಗಿ ಕಂಡು ಬಂತು.

ನಾನು ಟೀಚರ್ ಆಗೇ ಅಲ್ಲಿ ಮುಂದುವರಿದಿದ್ದರೆ ಮುಂದೊಂದು ದಿನ ನನ್ನ ಶಿಷ್ಯೆಯೊಬ್ಬಳು ನನ್ನನ್ನು ಕೊಂಡಾಡಿ ನನ್ನ ಬಗ್ಗೆ 'ಸಂಕಲನ'ದಲ್ಲಿ ಬರೆದ ಲೇಖನ ನಾನು ಓದಬಹುದಿತ್ತು!

✦ **ಕೆ. ವಿ. ಉಭಯಭಾರತಿ,** ನಂ. ೧೮೦/೨೮, 'ಇಂಚರ', ೧೫ನೇ ಮೇನ್,
೩ನೇ ಕ್ರಾಸ್, ಕುರುಬರಹಳ್ಳಿ, ಮಹಾಲಕ್ಷ್ಮೀಪುರಂ, ಬೆಂಗಳೂರು-೫೬೦ ೦೮೬ ✦

ನಗುವ ಕವಿತೆ

ರಾಮಗಿರಿ ರವೀಂದ್ರ

ಕವಿತೆ ನೀನು ಜಲವಿದ್ದಂತೆ
ಆಳ ಪಾತಾಳದಾಳಕ್ಕೆ ಇಳಿದು
ಅಗೆದರೇನು ಫಲ; ಸಿಕ್ಕಲಾರದು ಸೆಲೆ
ತಿಳಿಯದು ನಿನ್ನ ನೆಲೆ.

ಮಹಾಕವಿಯೆ ತೀರಿತು ನಿನ್ನ
ಪರಾಕ್ರಮ. ಕುಡಿ ಚಿವುಟಿ ಎಸೆದ ಹೂ
ನೀನು; ಚಿಗುರಲಾರೆ ಟಿಸಿಲೊಡೆದು
ಗರಿಬಿಚ್ಚಿ ಗಗನಕ್ಕೆ ಹರಡಿಕೊಳ್ಳುವ ಪರಿ
ಕನಸುಗಳಿಗಿನ್ನೆಲ್ಲಿದೆ ಬಿಡು ಬಿಡು ಸಾಕು.

ಕಾವ್ಯಗಂಗೆಯ ಸೆಳವು ಚಿಮ್ಮುವ
ಚಿಲುಮೆ ಚೆಲುವು ಗತ ವೈಭವದ
ನೆನಪು; ಚಿನ್ನದ ತೇರಲ್ಲಿ
ಮೆರವಣಿಗೆ, ಮಹಾಸಿಂಹಾಸನ
ಅದೆಲ್ಲೀಗ ನಿನ್ನ ಚಕ್ರಾಧಿಪತ್ಯ

ಕೈಕಾಲು ನಡುಗಿ ಕಣ್ಣ ದೀಪಗಳೆ
ಮಂಕಾದವು; ಜಲವಿದ್ದಷ್ಟೆ ದಿನ
ಆ ಪೈರು, ಹೊಲ ಗದ್ದೆ ಹಸಿರು ಎಲ್ಲ
ಕವಿಗಳ ಹಾಡು-ಪಾಡು, ಇಲ್ಲ
ತಲೆ ಮೇಲೆ ಗರಿ ಹಣ್ಣ ಫಲ ಎಲ್ಲ ಬೋಳು.

ಇದುವೆ ನಶ್ವರದ ಬಾಳು
ಕಾವ್ಯವೂ ಇಷ್ಟೇ, ಇದೊಂದು ಸಂತೆ; ಸಂಜೆಗೇ
ಖಾಲಿ ಈ ನೆಲ ಮುಗಿಲು. ಆದರೆ
ನಿನ್ನ ಹಳೆಯ ಸಂಗ್ರಹದಲ್ಲೊಂದು ನಗುವ
ಕವಿತೆ ಹಾಗೆಯೇ ಇದೆ ಈಗಲೂ.

✦ **ರಾಮಗಿರಿ ರವೀಂದ್ರ,** 'ನಿರ್ಮಿತಿ', ೧೧/ಎ, ೧ನೇ ಮಹಡಿ, ೪ನೇ ಪವರ್
ಹೌಸ್ ಸ್ಟ್ರೀಟ್, ೧ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು-೫೬೦ ೦೨೮ ✦

ಕಾರಂತರ ಜೀವಂತ ಪಾತ್ರಗಳು – ೬

ಸಿ. ಸೋಮಶೇಖರಯ್ಯ

'ನಂಜಿದವರ ನಾಕ ನರಕ', 'ಧರ್ಮರಾಯನ ಸಂಸಾರ'ದ ದಾಂಪತ್ಯ ಸಮಸ್ಯೆಗಳು, ಗಂಡಿನ ಅಹಂಕಾರ ಮತ್ತು ಬೇಜವಾಬ್ದಾರಿಯ ಪರಿಣಾಮಗಳಾದರೆ, 'ಕೇವಲ ಮನುಷ್ಯರು' ಕಾದಂಬರಿಯ ವಾರಿಜೆ ಅದೇ ರೀತಿಯ ಹೆಣ್ಣು ಬೇಜವಾಬ್ದಾರಿಗೆ ಕಾರಣೀಭೂತಳಾಗುವ ವಿಚಿತ್ರ ಕಥೆ.

ಹೆಣ್ಣೊಬ್ಬಳು ಸಂಸಾರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಇತರ ಚಟುವಟಿಕೆಗಳಲ್ಲಿ ಮನೆಯನ್ನೇ ಮರೆಯುವುದು 'ವೀರ ಪಾಂಡ್ಯ ಕಟ್ಟಬೊಮ್ಮನ್' (ಆ ಕಾಲದ ಒಂದು ಜನಪ್ರಿಯ ತಮಿಳು ಚಲನಚಿತ್ರ) ಚಲನಚಿತ್ರದ ವಿಮರ್ಶೆಯಷ್ಟು ಕೂಡಾ ಮನೆಯ ಕಡೆಗೆ ಗಮನ ನೀಡದಿದ್ದರೆ ಸಂಸಾರದಲ್ಲಿ ಸೃಷ್ಟಿಯಾಗುವ ಜಿರುಕಿನ ಕಡೆಗೆ ಇಲ್ಲಿ ಓದುಗರ ಗಮನ ಸೆಳೆಯಲಾಗಿದೆ. ಹೀಗೆ ಗಂಡು ಹೆಣ್ಣು ಎರಡಕ್ಕೂ ಇರಬೇಕಾದ ನಿಷ್ಠೆ, ಜವಾಬ್ದಾರಿ ಕಡಿಮೆಯದಲ್ಲ.

ಇಲ್ಲಿ ಹಯವದನರಾಯ ಬಡತನದಿಂದ ತನ್ನ ಓದಿನ ಕಾರಣಕ್ಕಾಗಿ ಮದ್ರಾಸಿನ ಬಂಧುಗಳ ಮನೆ ಸೇರುತ್ತಾನೆ. ಆ ಮನೆಯ ಮಗಳು ವಾರಿಜೆಯನ್ನು ಮದುವೆಯಾಗಲೇ ಬೇಕಾದ ಅನಿವಾರ್ಯಕ್ಕೆ ಒಳಗಾಗುತ್ತಾನೆ. ಮದುವೆಯ ಹುಡುಗನ ಬಗ್ಗೆ ವಾರಿಜೆಯ ಅಭಿಪ್ರಾಯವೇನೆಂಬುದು ಗೊತ್ತಾಗುವುದಿಲ್ಲ. ತಮ್ಮ ಮನೆಯ ಅನ್ನಕ್ಕಾಗಿ ಬಂದವನನ್ನು, ಹಿರಿಯರ ಇಷ್ಟದಂತೆ ಮದುವೆಯಾದವಳು. ಮದುವೆಯಾದ ತಪ್ಪಿಗೆ ಮಕ್ಕಳನ್ನೂ ಹಡೆಯುತ್ತಾಳೆ. ಅವನೊಡನೆ ಅನೇಕ ಊರುಗಳಲ್ಲಿ ಸಂಸಾರ ನಡೆಸಿದರೂ; ಶ್ರೀಮಂತ ಮನೆತನದವಳೆಂಬ ಹೆಮ್ಮೆ ಗಂಡನನ್ನೂ ಸಸಾರವಾಗಿ ಕಾಣುವಂತೆ ಮಾಡುತ್ತದೆ. ಆ ಗಂಡನ ಬಗ್ಗೆ ಅವಳಿಗೆ ಯಾವ ಬಂಧುರತೆಯೂ ಉಳಿಯುವುದಿಲ್ಲ. ಕೇವಲ ಅದು ಯಾಂತ್ರಿಕ ಬಂಧನವಾಗುತ್ತದೆ.

ಮುಖ್ಯ ಇಂಜಿನಿಯರನಾಗಿ ಅನೇಕ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಿದ ನಂತರ ನಿವೃತ್ತನಾಗಿ ವಾರಿಜೆಯೊಡನೆ ವಾಸಿಸಲು ಬಂದರೆ, ಅವನಿಗೆ ತುಂಬಾ ಶೀತಲವಾದ ಸ್ವಾಗತ ದೊರಕುತ್ತದೆ. ಅವಳ ತಂದೆ ಮದ್ರಾಸಿನಲ್ಲಿ ಅವಳಿಗಾಗಿ ಕೊಟ್ಟ 'ವಾರಿಜವಿಲ್ಲಾ'ದಲ್ಲಿ ಅವಳ ವಾಸ. ನಿಜಕ್ಕೂ ಹಯವದನರಾಯರ ಪಾಲಿಗೆ ವಾರಿಜೆ ಇಲ್ಲ ಎನ್ನುವಂತಾಗುತ್ತದೆ.

ತನ್ನ ಸ್ವಂತದ ಸ್ಥಳವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಳಿದ ಜೀವನ ಕಳೆಯಲು ಹಯವದನರಾಯ ನಿರ್ಧರಿಸುತ್ತಾನೆ. ಇದರಿಂದಾಗಿ ಹೆಂಡತಿ ಪೂರ್ವ ಕರಾವಳಿಯ ವಾಸಿಯಾದರೆ ಗಂಡ ಪಡುವಣ ಕರಾವಳಿಯ ನಿವಾಸಿ. ಹೆಂಡತಿಯನ್ನು ತನ್ನೊಡನೆ ಇರಿಸಿಕೊಳ್ಳಲು ಹಯವದನರಾಯರು ನಡೆಸುವ ಪ್ರಯತ್ನ ವಿಫಲವಾಗುತ್ತದೆ. ಇಬ್ಬರ ನಡುವೆ ಅವರ ಮನಸ್ಥಿತಿಯಷ್ಟೇ ಅಂತರದ ವಿಶಾಲ ಭೂ ಪ್ರದೇಶ. ಕಾದಂಬರಿಯ ಕೊನೆಯ ವರೆಗೆ ವಾರಿಜೆ ಹಯವದನರಾಯರು ಪುನಃ ಕಲೆತದ್ದು ಎಂಬುದು ಇಲ್ಲವೇ ಇಲ್ಲ.

ಕಾವೇರಿಯದು ಇನ್ನೊಂದು ರೀತಿಯ ಕರುಣಾಜನಕ ಕತೆ. ಗಂಡ ಇದ್ದರೂ ಇಲ್ಲದಂತಹ ಬಾಳು. ಮಕ್ಕಳಿಗೂ ಅವಳ ಮೇಲಿನ ಅಕ್ಕರೆ ಅಷ್ಟೇ. ಅವರಿವರ ಮನೆಯ ಚಾಕರಿಯೇ ಅವಳ ಹಣೆಬರಹ. ಆದರೂ ಬದುಕಲೇಬೇಕಲ್ಲ, ಅಷ್ಟಕ್ಕಾಗಿ ಅವಳ ಬದುಕು. ಇಂತಹ

ತತ್ತರಿಸುತ್ತಿದ್ದ ಬಾಳಿಗೆ ಆಶ್ರಯದಾತವಾಗಿ ಒಂದು ಹುಲ್ಲು ಕಡ್ಡಿಯ ಆಸರೆ, ಹಯವದನರಾಯರದು- ಯಾವುದೇ ಅತಂತ್ರ ಅನಿಶ್ಚಿತ ಬದುಕಿನಲ್ಲಿ ಆಕಸ್ಮಿಕವಾಗಿ ಅಪರೂಪವಾಗಿ ದೊರಕುವಂತಹುದು- ಅದನ್ನು ಅವಳು ಭದ್ರವಾಗಿ ಆಶ್ರಯಿಸುತ್ತಾಳೆ.

ಶಾಂತಾಬಾಯಿಯದು ಇನ್ನೊಂದೇ ತೆರನ ಬದುಕು. ಅವಳು ಮೀರಾಬಾಯಿಯನ್ನು ಮೀರಿಸುವಂತಹ ಭಕ್ತೆ. ಅವಳ ಭಗವತ್ಪ್ರೇಮದೆದುರು ರಾಧೆ ಸುಳ್ಳು, ಅವಳು ನಿಜ. ಅವಳ ಪತಿ ವಿಶ್ವನಾಥ ಅವಳಿಂದ ಎಂದೂ ಆ ತೆರನ ಪ್ರೀತಿಯನ್ನು ಕಾಣದ ಅಭಾಗ್ಯ. ಆದರೂ ಅವಳನ್ನು ಮೆಚ್ಚುಗೆಯಿಂದ ನೋಡಬಲ್ಲ ಸಹೃದಯಿ. ಅವಳ ದೈವ ಅಭಿನ್ನಾನಂದ. ವಿಶ್ವನಾಥನಿಗೂ ಆದರಣೀಯನಾದ ಗುರು. ಅಭಿನ್ನಾನಂದರ ಪೂರ್ವಾಶ್ರಮದ ಹೆಸರು ಮುಕುಂದ ಕಮ್ತಿ. ಮಡದಿ ಪ್ರೇಮಮಯಿಯಾದ ಭವಾನಿ. ಅವಳ ಬಾಳು ಕಡಿಮೆ ಅವಧಿಯದು. ನಂತರ ಅಧ್ಯಾತ್ಮದೆಡೆಗೆ ಆಕರ್ಷಿತನಾಗಿ ವಿಭಿನ್ನ ರೀತಿಯ ವಾಸ್ತವವಾದದ ಆಧಾರದಲ್ಲಿ ತನ್ನ ವಿಚಾರಗಳನ್ನು ರೂಪಿಸಿಕೊಳ್ಳುತ್ತಾ ಹೊಸ ರೀತಿಯ ತಾತ್ವಿಕ ಅನ್ವೇಷಣೆಗೆ ತೊಡಗಿಕೊಳ್ಳುತ್ತಾನೆ.

ಅಧ್ಯಾತ್ಮದ ವಿಚಾರದಲ್ಲಿ ಗುರುವಿನೊಡನೆ ಪ್ರಶ್ನೋತ್ತರ ನಡೆಸಲು ಬಂದ ಶಾಂತಾಬಾಯಿ ತಾನೇ ಒಂದು ವಿಚಿತ್ರವಾದ ಯಕ್ಷ ಪ್ರಶ್ನೆಯಾಗುತ್ತಾಳೆ. ಶಾಂತಾಬಾಯಿಯ ಪ್ರವಾಹವಾಗಿ ಹರಿಯುವ ಹುಚ್ಚು ಪ್ರೇಮದ ಹೊಳೆಯಲ್ಲಿ ಜಾರಿ ಬಿದ್ದು ಕೊಚ್ಚಿ ಹೋದ ಅಭಿನ್ನಾನಂದ ಹೇಗೋ ಚೇತರಿಸಿಕೊಳ್ಳುತ್ತಾನೆ. ಇಷ್ಟು ಜೀವಂತ ಪಾತ್ರಗಳು ಸಾಕಲ್ಲ 'ಕೇವಲ ಮನುಷ್ಯರ'ನ್ನು ನಿರೂಪಿಸಲು.

ಕಾದಂಬರಿಯ ಉದ್ದಕ್ಕೂ ನಡೆಯುವ ಘಟನೆಗಳು ಮನುಷ್ಯನ ಅಸಹಾಯಕ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಮನಗಾಣಿಸುತ್ತಲೇ ಹೋಗುತ್ತವೆ. ಕಾರಂತರು ಎಲ್ಲೋ ಒಂದು ಕಡೆ ಹೇಳುತ್ತಾರೆ, ಕಾದಂಬರಿಯೊಳಗಣ ಜೀವಂತ ಪಾತ್ರಗಳು ಎಂದೂ ಲೇಖಕನ ಮಾತನ್ನು ಕೇಳುವುದಿಲ್ಲವಂತೆ! 'ಅವನು ಹೇಳಿದಂತೆ ಕುಣಿಯಲು' ಅವೇನು ನಿರ್ಜೀವಿಗಳಾದ ಸೂತ್ರದ ಬೊಂಬೆಗಳೇ!? ರಕ್ತಮಾಂಸಗಳಿಂದ ಕೂಡಿದ ಭಾವಜೀವಿಗಳು ಅವು! 'ಕೇವಲ ಮನುಷ್ಯರಲ್ಲಿ'ನ ಮಾಂಸಲ ಜೀವಿಗಳು. ಕಾರಂತರ ಮಾತನ್ನು ಹೇಗೆ ತಾನೆ ಕೇಳಿಯಾವು? ಅವುಗಳ ಬಾಳು ಅವುಗಳದ್ದು. ಕಾರಂತರ ಅಂಕೆಗೆ ಸಿಗುವಷ್ಟು ನಿರ್ಜೀವಿಗಳಲ್ಲ ಅವು. ಹಯವದನರಾಯರು, ಕಾವೇರಿ, ವಿಶ್ವನಾಥ, ಶಾಂತಾಬಾಯಿ, ಅಭಿನ್ನಾನಂದ ಈ ರೀತಿಯ ಕೇವಲ ಮನುಷ್ಯರಾದ, ಸನ್ನಿವೇಶದ ಶಿಶುಗಳು ಸಮಾಜ ಒಪ್ಪದೇ ಇರಬಹುದಾದ ಸಂಬಂಧಗಳಲ್ಲೂ, ನೆಮ್ಮದಿಯನ್ನು ಕಂಡುಕೊಳ್ಳುತ್ತವೆ. ಇಲ್ಲಿ ದೂರಬಹುದಾದದ್ದು ಅಂದಂದಿನ ಸನ್ನಿವೇಶವನ್ನೇ ಹೊರತು ಮತ್ತಾರನ್ನೂ ಅಲ್ಲ.

ಕಾವೇರಿಯ ಗಂಡ ತೀರಿಕೊಂಡಾಗ ಆ ವಿಷಯವನ್ನು ಅವಳನ್ನು ಚುಚ್ಚಲೆಂದೇ ಅವಳ ಸಂಬಂಧಿಯು ಉತ್ಪ್ರೇಕ್ಷೆಯಿಂದ ಅವಳಿಗೆ ತಲುಪಿಸಿದಾಗ ಕಾವೇರಿಯಂತಹ ಅಸಹಾಯಕ ಅಬಲೆಯಾದ ಹೆಣ್ಣುಮಗಳೂ ಸಹ, ನಿತ್ಯದಕ್ಕಿಂತಲೂ ದೊಡ್ಡದಾಗಿ ಕುಂಕುಮವನ್ನಿಟ್ಟುಕೊಂಡು ಮೌನವಾಗಿಯೇ ಪ್ರತಿಭಟಿಸುತ್ತಾಳೆ. ವಿವಾಹಿತ ಹೆಂಗಸಿನ ಎಲ್ಲ ರೀತಿಯ ಸೌಲಭ್ಯಗಳಿರುವ ತಾನು ಹೇಗೆ ವಿಧವೆ? ಎಂಬುದು ಅವಳ ಅಂತರಂಗದ ಪ್ರಶ್ನೆ. ಸತ್ತು ಹೋದ ಗಂಡ ಅವಳ ಪಾಲಿಗೆ ಸತ್ತುದು ಎಂದೋ- ಹತ್ತಾರು ವರ್ಷಗಳಿಗೆ ಮೊದಲೇ. ಅಂದ ಮೇಲೆ ಇವತ್ತು ಅವನು ಸತ್ತು ಹೋದುದು ಯಾವ ವಿಶೇಷವೂ ಅಲ್ಲ ಅವಳ ಪಾಲಿಗೆ.

'ಕೇವಲ ಮನುಷ್ಯರು', ಮನುಷ್ಯ ತನ್ನಿಂದ ಸಾಧ್ಯವಾಗದ ಆದರ್ಶಗಳನ್ನು ಸಾಧ್ಯವೆಂದು ಸಾಧಿಸಲು, ಅಥವಾ ಹಾಗೆ ವಾದಿಸಲು, ಹೆಣಗಾಡುವ ಅತಾರ್ಕಿಕ ನಿಲುವನ್ನು ವಿಡಂಬಿಸಿ; ಮನುಷ್ಯನ ಸೋಗಲಾಡಿತನವನ್ನು ಬಯಲು ಮಾಡುವಲ್ಲಿ ಯಶಸ್ಸು ಕಂಡ ಬರಹ. ಈ ವಿಷಯವಾಗಿ ಕಾರಂತರು ಹೇಳುವುದು ಒಂದೇ ಮಾತು: ಅವರವರ ಅಂತರಂಗವನ್ನು ಅವರೇ ಕೇಳಿಕೊಂಡು, ಇಂತಹ ವಿಷಯಗಳಲ್ಲಿ ನಿರ್ಧಾರಕ್ಕೆ ಬರುವುದು ಸರಿಯಾದ ದಾರಿ, ಇಲ್ಲಿ ಯಾರ ಉಪದೇಶವೂ ಅನಾವಶ್ಯಕ, ಎಂಬುದು.

'ಕೇವಲ ಮನುಷ್ಯರು' ಬರೆಯುವುದಕ್ಕಿಂತ ಮೂರು ವರ್ಷ ಮುಂಚೆಯೇ ಬರೆದ ಬರಹ **'ಮೂಕಜ್ಜಿಯ ಕನಸುಗಳು'**. 'ಮೂಕಜ್ಜಿಯ ಕನಸುಗಳು' ಮನುಷ್ಯನ ಬಾಳಿನ ಹಿನ್ನೆಲೆಯಲ್ಲಿ ಮನುಷ್ಯನ ಇತಿಹಾಸವನ್ನೇ ತೆರೆದಿಡುವ ಒಂದು ದೊಡ್ಡ ಪ್ರಯತ್ನ. ಮೂಕಜ್ಜಿಯ ತೆರದ ಒಂದು ಅಜ್ಜಿ ಇದ್ದಳೇ? ಎಂಬುದಕ್ಕೆ ನಮ್ಮ ನಿಮ್ಮ ಮನಸ್ಸುಗಳಲ್ಲಿರುವ ಸಂಶಯ ಪಿಶಾಚಿಯೇ ಮೂಕಜ್ಜಿ ಎನ್ನುತ್ತಾರೆ ಕಾರಂತರು. ಇತಿಹಾಸ ಪೂರ್ವ ಕಾಲದ ಕಾಲ ಘಟ್ಟಗಳನ್ನೂ, ಇತಿಹಾಸವೆಂಬುದು ಸಾಗಿ ಬಂದ ಬಗೆಯನ್ನೂ, ಮೂಕಜ್ಜಿಯು ವಸ್ತುಗಳನ್ನು ಕೈಲಿ ಹಿಡಿದೇ ಅದರ ಪೂರ್ವಾಪರಗಳನ್ನು ಅರಿತುಕೊಳ್ಳುವ ತಂತ್ರದ ಮೂಲಕ ಯಶಸ್ವಿಯಾಗಿ ಮಂಡಿಸುವ ಕಾರಂತರ ಶೈಲಿ ಬಲವಂತವಾಗಿ ಸಾಧಿಸಹೊರಟ ಶೈಲಿಯಲ್ಲ. ಸಹಜವಾಗಿ ತನ್ನಿಂದ ತಾನೇ ಮೂಡುತ್ತಾ ಹೋಗುವಂತಹ ಅಪೂರ್ವ ಶೈಲಿ.

ಬದುಕು ಎಷ್ಟು ದೊಡ್ಡದಾದರೂ ಅದು ನಿಂತಿರುವುದು ಚಿಕ್ಕದಾದ ಕೌಟುಂಬಿಕ ನೆಲೆಗಳ ಮೇಲೆ. ಆದರೆ ಮನುಷ್ಯನ ವಿಧಿ. ಈ ಕುಟುಂಬಗಳನ್ನು ಚೂರು ಮಾಡಲು ತುದಿಗಾಲ ಮೇಲೆ ನಿಂತಿರುತ್ತದೇನೋ ಎನಿಸುವಂತೆ ಘಟನಾವಳಿಗಳು ಜರುಗುತ್ತವೆ. ಮನುಷ್ಯನ ಸಣ್ಣ ಸಂತೋಷಗಳೂ ಸಹ ಅವನ ವಿಧಿಗೆ ಸಹ್ಯವಾಗುವುದಿಲ್ಲವೇನೋ ಎನಿಸುವಂತೆ ಅದರ ಆಟ ನಡೆದಿರುತ್ತದೆ. ನಾಗಿ ಮತ್ತು ರಾಮಣ್ಣನ ಜೀವನದಲ್ಲೂ ನಡೆದದ್ದು ವಿಧಿಯದೇ ಆಟ. ಇಲ್ಲಿ ವಿಧಿ ಎಂದರೆ ಬೇರಾರೂ ಅಲ್ಲ, ನಾಗಿಯ ತವರು ಮನೆಯವರು. ಏಕೆ ಅವಳ ಬಾಳಿನಲ್ಲಿ ಅವರು ಪ್ರವೇಶ ಮಾಡಿದರೋ; ಹಣಕ್ಕೋ; ಅಸೂಯೆಗೋ? ಅಂತೂ ಅವಳ ಬಾಳು ಮೂರಾಬಟ್ಟೆಯಾಯಿತು. ಮುಗ್ಧ ವಯಸ್ಸಿನಲ್ಲಿ ಅವಳನ್ನು ಕೈ ಹಿಡಿದು ಹೊಲಸು ತುಳಿಸಿದರು. ಅವಳ ಯೌವನಕ್ಕೋ, ರೂಪಕ್ಕೋ ಮರುಳಾಗಿ ಅವಳ ಬಾಳನ್ನು ಹಾಳುಗೆಡವಿದ ಮನುಷ್ಯ, ಅವಳ ಕೈಗೆ ಮಕ್ಕಳನ್ನು ಕೊಟ್ಟು, ಬೀದಿ ಪಾಲು ಮಾಡಿದ. ಅವಳ ಗಂಡ ರಾಮಣ್ಣ ಕೇವಲ ಅಸಹಾಯಕನಾಗಿದ್ದ. ಇತಿಹಾಸದ ಉದ್ದಕ್ಕೂ ನಡೆದಿರುವ ಇಂಥವನ್ನು ಮೂಕಜ್ಜಿ ಗುರುತಿಸುತ್ತಾಳೆ.

ಕಾಲ ಯಾವುದಾದರೂ ಆಗಲಿ, ದೇಶ ಯಾವುದಾದರೂ ಆಗಲಿ, ಮಾನವ ಸಮಾಜ ಇತಿಹಾಸ ಪೂರ್ವದ್ದಾಗಲೀ ಅಥವಾ ಇವತ್ತಿನದಾಗಲಿ ಅಲ್ಲಿ ಯಾವ ನಂಬಿಕೆಗಳು, ಶ್ರದ್ಧೆಗಳು ರೂಢಿಯಲ್ಲಿರಲಿ. ಕತೆ ಮಾತ್ರ ಒಂದೇ. ಹೆಣ್ಣು ಗಂಡುಗಳ ಅನುರಕ್ತಿ ವಿರಕ್ತಿಗಳಿಗೆ ಸಂಬಂಧಿಸಿದುದು.

ಸಾಂಪ್ರದಾಯಿಕವಾಗಿ ಬಂದ ಎಲ್ಲ ಶ್ರದ್ಧೆಗಳನ್ನು ಮೂಕಜ್ಜಿಯ ಮನಸ್ಸಿನ ನಿಕಷ ಒರೆಗೆ ಹಚ್ಚುತ್ತಲೇ ಇರುತ್ತದೆ. ಅನೇಕ ನಂಬಿಕೆಗಳ ಬುಡ, ಈ ಅಜ್ಜಿಯ ಪ್ರಖರ ಪ್ರಜ್ಞೆಯ ಕೊಡಲಿಯ ಏಟಿಗೆ ತತ್ತರಿಸಿ ಉರುಳುತ್ತವೆ. ದೇವರು, ಅವತಾರಗಳು, ದೇವಮಾನವರು ಎಲ್ಲರೂ ಪ್ರಶ್ನಾರ್ಹರಾಗುತ್ತಾರೆ. ಒಂದು ಸಣ್ಣ ಜೀವವನ್ನು ತೆಗೆಯಲು ದೇವರು ಅವತಾರ ಎತ್ತಬೇಕೆ? ಒಂದು ಎಲೆಯನ್ನು ಉದುರಿಸಲು ಇಡೀ ಮರ ಎದ್ದು ಕುಣಿಯಬೇಕೆ?

ಒಂದು ಸಿಡಿಲಿನ ಸೋಂಕಿಗೆ ನಾಶವಾಗಬಲ್ಲ ಜೀವವನ್ನು ದೇವರೇ ಬಂದು ನಾಶ ಮಾಡಬೇಕೆ? ದೇವರು ಎಂಬುದು ಅಷ್ಟು ಸಣ್ಣ ವಸ್ತುವೇ? ಇಂತಹ ತಾರ್ಕಿಕ ಪ್ರಶ್ನೆಗಳೇ ಮೂಕಜ್ಜಿಯ ವೈಚಾರಿಕ ನಿಲುವುಗಳು.

ಸೋಗಿನ ವೈರಾಗ್ಯ ತಾರ್ಕಿಕವಲ್ಲದ ನೀತಿ. ಇವೆಲ್ಲಾ ಅಜ್ಜಿಯ ಸರಳ, ಸಹಜ ಸಡೆಯೆದುರು ಪಲಾಯನ ಪಠಿಸುತ್ತವೆ. ಅನಂತರಾಯನ ಸಾಮಾನ್ಯರಿಗಿಂತ ನಾನು ಭಿನ್ನ, ವಿರಾಗಿ ಎಂಬ ಅಹಂಕಾರ ಅಥವಾ ತಪ್ಪು ತಿಳಿವಳಿಕೆಗೆ ಮೂಕಜ್ಜಿ ಎಲ್ಲರಂತೆ ನಿನ್ನ ಮನಸ್ಸಿನಲ್ಲೂ ಹೆಣ್ಣಿನ ರೂಪ ಸುಳಿಯುತ್ತಿರುವಾಗ ನೀನೂ ಸಹ ನಾಲ್ಕು ಜನರಲ್ಲಿ ಒಬ್ಬ ಅಷ್ಟೇ. ನಿನ್ನದು ಎಂಬ ದೊಡ್ಡಸ್ತಿಕೆ ಯಾವುದೂ ಇಲ್ಲ, ಎನ್ನುವ ಮಾತು ಹುಲು ಮಾನವನ ಅವಾಸ್ತವಿಕ ತಿಳಿವಳಿಕೆಯ ಬುಡಕ್ಕೆ ಬಿಡುವ ಕುದಿ ನೀರಾಗುತ್ತದೆ.

ಮೊಮ್ಮಗ ಸುಬ್ರಾಯ ತಪಸ್ಸಿನ ವಿಷಯವಾಗಿ ಕೇಳುವ ಪ್ರಶ್ನೆಗೆ ಉತ್ತರವಾಗಿ, "ಇಷ್ಟೊಂದು ವರ್ಷ ನಾನು ಇಲ್ಲಿ ಕುಳಿತು ಮಾಡಿದ್ದಾದರೂ ಏನು...?" ಎನ್ನುತ್ತಾಳೆ. "ಹಾಗಾದರೆ ಮುನಿಗಳು ಗುಹೆಗಳಲ್ಲಿ, ಕಾಡಿನಲ್ಲಿ ಮಾಡಿದ್ದು ತಪಸ್ಸಲ್ಲವೇ...?" ಎಂದರೆ "ಕಾಡೇ ಯಾಕೆ ಬೇಕು? ಕಾಡಿನ ಪರ್ಣಶಾಲೆ, ಊರಿನ ಜೋಪಡಿಗೆ ಹೇಗೆ ಭಿನ್ನ...?" ಎನ್ನುತ್ತಾಳೆ. "ಗುಹೆಗಳು ಮನುಷ್ಯನ ಪಲಾಯನವಾದಕ್ಕೆ ಸಾಕ್ಷ್ಯಗಳು ಅಷ್ಟೆ. ಜಗತ್ತನ್ನು ಎದುರಿಸಲಾರದವನು ತಾಯ ಗರ್ಭದಲ್ಲಿ ಸುರಕ್ಷಿತವಾಗಿರುವಂತೆ ಗುಹೆಯಲ್ಲಿ ಸುರಕ್ಷಿತವಾಗಿರಲು ಬಯಸುತ್ತಾನೆ. ಮರಳಿ ತಾಯ ಉದರವನ್ನು ಸೇರಲಾರನಲ್ಲಾ, ಅದಕ್ಕಾಗಿ ಗುಹೆ ಸೇರುತ್ತಾನೆ" ಎನ್ನುವುದು ಅವಳ ತರ್ಕ.

ದೇವರು ಹೆಣ್ಣು ಗಂಡುಗಳನ್ನು ಸೃಷ್ಟಿಸಿರುವುದು ನಿಜವಾದರೆ, ವೈರಾಗ್ಯ ಅವನ ಉದ್ದೇಶವಾಗಿರಲಿಕ್ಕಿಲ್ಲ. ಅದೇ ಉದ್ದೇಶವಾಗಿದ್ದರೆ ಸೃಷ್ಟಿಯಲ್ಲಿ ಹೆಣ್ಣು ಗಂಡುಗಳು ಇರುತ್ತಲೇ ಇರಲಿಲ್ಲ. ಹುಟ್ಟಿದ ಪ್ರತಿಯೊಬ್ಬನೂ ಪ್ರತಿಯೊಂದು ಜೀವವೂ ಹುಟ್ಟುವ ರೀತಿ ಗಂಡು ಹೆಣ್ಣುಗಳ ಮಿಲನವೇ ಆಗಿರುವಾಗ ಅದು ಸರಿಯಾದ ಕ್ರಮವಲ್ಲವೆನ್ನುವ ಎದೆಗಾರಿಕೆ, ದೇವರ ಉದ್ದೇಶವನ್ನೇ ಪ್ರಶ್ನಿಸಿದಂತಲ್ಲವೇ? ಅದು ಅಸಹ್ಯವಾಗಿದ್ದರೆ ಅಂತಹ ಸೃಷ್ಟಿಯನ್ನು ಮಾಡಿದ ದೇವರೇ ಅಸಹ್ಯದ ಮೂಲ ಕಾರಣನಾಗುತ್ತಾನೆ. ಈ ರೀತಿಯ ತತ್ವ ಮೂಕಜ್ಜಿಯ ಪಾತ್ರದ ಮೂಲಕ ಇಡೀ ಕಾದಂಬರಿಯಲ್ಲಿ ಮೂರ್ತಗೊಳ್ಳುತ್ತಾ ಹೋಗುತ್ತದೆ.

ಯಾವ ಸಣ್ಣ ಜೀವನ ಸಹ ಕಡೆಗಣಿಸುವಂತಹುದಲ್ಲ. ರಾಮಣ್ಣ ನಾಗಿಯರಂತಹ ಸಾಮಾನ್ಯ ಜೀವನ ಸಹ, ಅದು ಚಿಗುರಬೇಕಾದ್ದೇ; ಆದ ತಪ್ಪುಗಳನ್ನು ಮರೆತು ಅವರ ಸಂಸಾರ ಪುನಃ ನಿಂತಲ್ಲಿಂದ ಮುಂದಕ್ಕೆ ಹರಿಯಬೇಕಾದ್ದೇ. ತಿಪ್ಪಜ್ಜಿಯಂತಹ ಮುಗ್ಧ ಹೆಣ್ಣು ಮಗಳು ತನ್ನ ಅವಸಾನ ಕಾಲದಲ್ಲಿ ಬೇಗುದಿ ಇಲ್ಲದೆ ಶಾಂತಿಯನ್ನು ಹೊಂದತಕ್ಕದ್ದೇ. ಇದು ಎಲ್ಲ ಜೀವಗಳ ಹಕ್ಕಲ್ಲವೇ? ಈ ರೀತಿಯಾಗಿ ಜೀವನ ಮತ್ತು ಅಧ್ಯಾತ್ಮವನ್ನು ಬೆಸೆಯುತ್ತಾ ಹೋಗುವ 'ಮೂಕಜ್ಜಿಯ ಕನಸುಗಳು' ಕನ್ನಡ ಸಾಹಿತ್ಯದ ಒಂದು ವಿಶೇಷ ಕೊಡುಗೆ.

ಕಾರಂತರ **'ಮರಳಿ ಮಣ್ಣಿಗೆ'** ತೊಂಭತ್ತು ವರ್ಷಗಳ ಸುದೀರ್ಘ ಕಥಾನಕವನ್ನು ಹೊಂದಿರುವ ಒಂದು ಬೃಹತ್ ಕಾದಂಬರಿ. ೧೮೫೦ ರಿಂದ ೧೯೪೦ ರ ವರೆಗಿನ ಸಾಮಾಜಿಕ ಜೀವನದ ಬದಲಾವಣೆಗಳನ್ನು ಸಮಗ್ರವಾಗಿ ಬಿಡಿಸಿಡುವ ಒಂದು ದೊಡ್ಡ ಪ್ರಯತ್ನ.

ಇಂತಹ ಒಂದು ಬರಹವನ್ನು ಯಾವುದೇ ಚೌಕಟ್ಟಿನಡಿಯಲ್ಲಿ ಕೂಡಿಸಿಡುವುದು

ಕಷ್ಟದ ಕೆಲಸ. ಏಕೆಂದರೆ ಈ ಕಾಲಾವಧಿಯು ಇಡೀ ಪ್ರಪಂಚದ ಜನ ಸಮೂಹಗಳ ಜೀವನ ಕ್ರಮದಲ್ಲಿ ಅಗಾಧವಾದ ಬದಲಾವಣೆಗಳನ್ನು ಮೂಡಿಸುತ್ತಿದ್ದ ಸಂಕ್ರಮಣ ಸಮಯ. ಸಾಮಾಜಿಕ ಜೀವನವಲ್ಲಿ ಆರ್ಥಿಕ ವಲಯಗಳಲ್ಲಿ, ರಾಜಕೀಯ ವಾತಾವರಣದಲ್ಲಿ, ಧಾರ್ಮಿಕ ಪ್ರಭಾವಗಳಲ್ಲಿ ಹಿಂದೆ ಕಂಡರಿಯದ ರೀತಿಯ ಮಾರ್ಪಾಡುಗಳು ಜರುಗುತ್ತಿದ್ದವು. ವೈಜ್ಞಾನಿಕ ಅನ್ವೇಷಣೆಗಳ ಫಲವಾಗಿ ಹೊಸ ರೀತಿಯ ವಿಚಾರಗಳು, ಭಾವನೆಗಳು ಜನ ಮಾನಸವಲ್ಲಿ ರೂಹು ತಳೆದು, ಹೊಸ ದಿಗಂತಗಳನ್ನು ತೆರೆದಿದ್ದವು. ಆದರೆ ಸಾಮಾನ್ಯರ ಬಾಳಿನಲ್ಲಿ ಸಂಕಷ್ಟಗಳ ಸರಮಾಲೆಗಳೇ ಸೃಷ್ಟಿಯಾಗಿದ್ದುದರಿಂದ ಜನರು ಬದುಕನ್ನು ಅರಸಿ, ಅತಂತ್ರ ರೀತಿಯಲ್ಲಿ ತಿರುಗಾಡುವ ಅನಿವಾರ್ಯತೆಗೂ ಪಕ್ಕಾಗಿದ್ದರು. ಅಮಾನವೀಯ ವಾದ ಪ್ರಪಂಚ ಯುದ್ಧಗಳು ಮಾನವ ಪ್ರಾಣಗಳನ್ನು ತೃಣ ಸಮಾನವಾಗಿಸಿದ್ದವು.

ಅದೇ ಸಮಯದಲ್ಲಿ ಮನುಷ್ಯರ ಸ್ವಾತಂತ್ರ್ಯದ ಹಕ್ಕುಗಳನ್ನು ದಮನಗೊಳಿಸುವ ವಿದ್ಯಮಾನಗಳೂ; ಅಂತಹ ದಮನಗಳ ವಿರುದ್ಧ ಮಾನವೀಯ ಹೋರಾಟಗಳೂ ಎಲ್ಲೆಡೆ ಸಾಮಾನ್ಯವಾಗಿದ್ದ ಕಾಲಘಟ್ಟವದು. ಈ ವಿದ್ಯಮಾನಗಳು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ ಇಡಿ ಮನುಷ್ಯ ಕುಲ ವಾಸಿಸುತ್ತಿದ್ದ ಭೂಖಂಡಗಳನ್ನೆಲ್ಲ ವ್ಯಾಪಿಸಿದ್ದವು. ಭಾರತದಲ್ಲಂತೂ ಪರಕೀಯರ ಆಡಳಿತದ ವಿರುದ್ಧವಾಗಿ ಸ್ವಾತಂತ್ರ್ಯ ಸಮರ, ಅಹಿಂಸಾ ಮಾರ್ಗದಲ್ಲಿ ಜಗತ್ತು ಕಂಡರಿಯದ ಹೊಸ ಬಗೆಯ ಹೋರಾಟವಾಗಿ ರೂಹು ತಳೆಯುತ್ತಿತ್ತು.

ಇಂತಹ ಸಮಯದಲ್ಲಿನ ಕನ್ನಡ ಕರಾವಳಿಯ ಕುಗ್ರಾಮವೊಂದರಲ್ಲಿ ಘಟಿಸುತ್ತಿದ್ದ ಮನೆತನವೊಂದರ ಜೀವನ ಕ್ರಮವನ್ನು ಅನಾವರಣಗೊಳಿಸುತ್ತಾ, ಮೂರು ತಲೆಮಾರಿನ ಜೀವನ ಚಿತ್ರಣಗಳನ್ನು ಕಾರಂತರು ಚಿತ್ರಿಸುವ ರೀತಿಯೇ ಅಸಾಧಾರಣವಾದದ್ದು. ಕಾದಂಬರಿಯಲ್ಲಿ ಚಿತ್ರಿತವಾಗುವ ಇತರ ವಿಷಯಗಳ ಕಡೆಗೆ, ಬೇರೊಂದು ಬರಹದಲ್ಲಿ ವಿಶ್ಲೇಷಿಸಬಹುದಾದುದರಿಂದ ಸದ್ಯಕ್ಕೆ ಅಲ್ಲಿನ ಮಾನವೀಯ ಸಂಬಂಧಗಳ ಬಗ್ಗೆ ಮಾತ್ರವೇ ಈ ಲೇಖನದ ಮಿತಿಯಲ್ಲಿ ಚರ್ಚಿಸಬಹುದು.

ರಾಮ ಐತಾಳರ ಜೀವನ ಕಾಲವೆಂಬುದು ಉಳಿಗಮಾನ್ಯ ಪದ್ಧತಿಯ ಕೊನೆಯ ಕಾಲಘಟ್ಟವಾಗಿತ್ತು. ಅವರ ತಂಗಿ ವಿಧವೆ ಸರಸೋತಿ, ಮನೆತನದ ವಿದ್ಯಮಾನಗಳಲ್ಲಿ ಹೆಣ್ಣನ್ನು ಕಡೆಗಣಿಸುತ್ತಿದ್ದ ಪದ್ಧತಿಯ ವಿರುದ್ಧ ಆಕ್ರೋಶ ತೋರಿಸುತ್ತಿದ್ದಳು. ಹಗಲು ರಾತ್ರಿಯೆನ್ನದೆ ಮನೆತನದ ಹಿತಕ್ಕಾಗಿ ದುಡಿಯುತ್ತಿದ್ದ ಹೆಣ್ಣು ಮಕ್ಕಳಿಗೆ, ಕುಟುಂಬದ ಅತಿ ಮುಖ್ಯ ವಿಷಯಗಳಲ್ಲಿ ಸಹ, ಚರ್ಚೆಗೆ ಅವಕಾಶವಿರುವುದಿರಲಿ, ವಿಷಯವನ್ನೇ ಅವರಿಗೆ ತಿಳಿಸಬೇಕಾದ ಅಗತ್ಯವಿಲ್ಲವೆನ್ನುವಂತೆ ವರ್ತಿಸುತ್ತಿದ್ದ ಗಂಡಿನ ರೀತಿ, ಹೆಣ್ಣುಮಕ್ಕಳು ಕೆರಳಲು ಕಾರಣವಾಗಿತ್ತು. ರಾಮ ಐತಾಳರ ಎರಡನೆಯ ಮದುವೆಯೆಂಬುದು ಅವರ ಹೆಂಡತಿ ಪಾರೋತಿಗೆ ಸಹ ಮನೆಯ ಮುಂದೆ ಮದುವೆಯ ಚಪ್ಪರ ಎದ್ದಾಗಲೂ ಗೊತ್ತಿರಲಿಲ್ಲ.

ಕಾದಂಬರಿಯ ಆರಂಭಕ್ಕೇನೆ ಪಾರ್ವತಿ ರಾಮ ಐತಾಳರ ಮಳೆಗಾಲದ ಮದುವೆಯ ಗ್ರಾಮೀಣ ಸಂಭ್ರಮದ ಚಿತ್ರಣದೊಡನೆ ಸಹಜವಾಗಿ ಜೀವಂತವಾಗತೊಡಗುವ ಕತೆ, ಮುಂದುವರಿಯುವುದು ಸರಸೋತಿ ಪಾರೋತಿಯರ ಮುಗ್ಧ ಬದುಕಿನ ಸಜೀವ ಚಿತ್ರಣದೊಡನೆ. ಮಳೆಗಾಲವನ್ನು ಎದುರಿಸಲು ಕರಾವಳಿಯ ಮನೆಗಳಲ್ಲಿ ನಡೆಯುವ ಪೂರ್ವ ಸಿದ್ಧತಾ ಕ್ರಮಗಳನ್ನು ಈ ಎರಡು ಹೆಣ್ಣು ಜೀವಗಳ ಚಟುವಟಿಕೆಗಳೊಡನೆ ಸಮೀಕರಿಸುತ್ತಾ ದಿನ ದಿನದ ಕರಾವಳಿಯ ಮನೆ ಮನೆಗಳ ಬದುಕನ್ನು, ಸರಸೋತಿ ಪಾರೋತಿಯರು, ಮನೆಯ ಹಪ್ಪಳ ಒಣಗಿಸುವುದರಿಂದ ಹಿಡಿದು, ಮನೆಗೆ ಬೇಕಾದ

ಎಣ್ಣೆಯನ್ನು ಒದಗಿಸಿಕೊಳ್ಳುವ ಕ್ರಮಗಳಿಂದ, ದನ ಕರುಗಳನ್ನು ನೋಡಿಕೊಳ್ಳುವ, ಓತ್ತಲಲ್ಲಿ ಕಾಯಿ ಪಲ್ಲೆ ಬೆಳೆಯುವ, ಬದುಕಿನ ಎಲ್ಲ ವಿಧಾನಗಳನ್ನು ಓದುಗನ ಕಣ್ಣೆದುರು ನಡೆಯುವ ವಿದ್ಯಮಾನಗಳಂತೆ ಚಿತ್ರಿಸುವ ರೀತಿಯೇ ಸಹಜ ಸೊಗಸಿನಿಂದ ಕೂಡಿದುದು.

ಮಕ್ಕಳಿಲ್ಲವೆಂಬ ಕಾರಣಕ್ಕೆ ಸತ್ಯಭಾಮೆಯನ್ನು ಎರಡನೆಯ ಮದುವೆಯಾದ ರಾಮ ಐತಾಳರ ಆಸೆಗೆ ತಕ್ಕಂತೆ ಲಚ್ಚ ಹುಟ್ಟುತ್ತಾನೆ. ಆದರೆ ಆ ಲಚ್ಚ ಮಾತ್ರ ಮನುಷ್ಯತ್ವಕ್ಕೆ ವಿರುದ್ಧವಾದ ಗುಣ ಧರ್ಮಗಳಿಂದ ಐತಾಳರ ಮನೆತನವನ್ನು ಅದರಲ್ಲಿ ಆಶ್ರಯ ಪಡೆದ ಜೀವಗಳನ್ನು, ಹಿಂಸೆಯ ಕೂಪಕ್ಕೆ ತಳ್ಳುತ್ತಾನೆ. ಇಲ್ಲಿ ಒಂದು ವಿಶೇಷವನ್ನು ಕಾರಂತರ ಬರಹದಲ್ಲಿ ಗುರುತಿಸಬಹುದಾದದ್ದು ನಿಸರ್ಗದೊಡನೆ ಒಡನಾಟವಿರುವ ಮನುಷ್ಯ, ಅವನ ಸ್ವಭಾವ ಯಾವ ತರದ್ದೇ ಆಗಿದ್ದರೂ ಒಂದಿಷ್ಟಾದರೂ ಸಹ್ಯವೆನಿಸುವ ರೀತಿಯಲ್ಲಿ ಬಾಳುತ್ತಾನೆ; ನಿಸರ್ಗವಿದೂರವಾದವನು ಎಲ್ಲ ಬಗೆಯ ಮನುಷ್ಯತ್ವ ವಿದೂರವಾದ ನರಕದ ಕಡೆಗೆ ಹೆಜ್ಜೆ ಹಾಕುತ್ತಾನೆ, ಎಂಬುದು.

ರಾಮ ಐತಾಳರು ಯಜಮಾನಿಕೆಯ ಸಂಸ್ಕೃತಿಯವರೇ ಆದರೂ, ಮನೆತನವನ್ನು ನಿಕೃಷ್ಟವಾಗಿ ಕಾಣುವುದಿಲ್ಲ. ಅದಕ್ಕೆ ಅನಿವಾರ್ಯವಾಗಿ ಪ್ರಕೃತಿಯೊಡನೆ ಬದುಕಬೇಕಾಗಿ ಬಂದ ಅವರ ಜೀವನ ವಿಧಾನವೂ ಕಾರಣವಾಗುತ್ತದೆ. ಕಡಲಿನ ದಂಡೆಯಲ್ಲಿಯೇ ಇರುವ ಅವರ ಮನೆ, ಅದರ ಆರ್ಭಟದಿಂದಾಗಿ ಹೊರ ಜಗತ್ತಿಗೆ ಅಲ್ಲಿನ ವಿದ್ಯಮಾನಗಳೇ ಅರಿವಾಗದಂತಹ ಪರಿಸ್ಥಿತಿಯನ್ನೇ ನಿರ್ಮಾಣ ಮಾಡಿದ್ದರೂ ಸಹ, ಅಲ್ಲಿ ಕರುಳ ಬೆಸುಗೆಗಳು ಪರಸ್ಪರ ಸ್ಪಂದಿಸುತ್ತಲೇ ಇರುತ್ತವೆ. ಆದರೆ, ಅದೇ ಮನೆತನದ ಕುಡಿ ಲಚ್ಚ, ತನ್ನ ಮನೆಗೆ ಸಮೀಪವೇ ಹರಿದು ಕಡಲು ಸೇರುವ ನದಿಯನ್ನೂ ಕಾಣ, ಸಮುದ್ರವಂತೂ ಅವನ ಲೆಕ್ಕದ ಪುಸ್ತಕದಲ್ಲಿಯೇ ಇಲ್ಲದ ವಿಚಾರ. ವಯಸ್ಸಿಗೆ ಬಂದ ಕೂಡಲೇ ಕಂಡದ್ದು, ಗಲ್ಲಿಗಳ ಕಮಟು ಹಿಡಿದ ರೂಮುಗಳಲ್ಲಿ ಇಸ್ಪೀಟಿನ ಸಹವಾಸ. ಜೊತೆಗೆ ಬೆಲೆವೆಣ್ಣುಗಳ ಬಲೆಯಲ್ಲಿ ಮತ್ತೇರಿದ ಬದುಕು. ಅದೇ ಅವನ ಮಗ ರಾಮನಿಗೆ ಸಮುದ್ರವೆಂದರೆ ಪ್ರಾಣ, ಕಾಡು ನದಿ ಝರಿ ಇವೆಲ್ಲ ಪ್ರಿಯ. ಈ ಬಗೆಯ ಮೂರು ರೀತಿಯ ಮನಸ್ಸುಗಳು ರೂಪುಗೊಳ್ಳುವುದು ಪ್ರಕೃತಿಯ ನಡುವಣ ರಕ್ತಿ ವಿರಕ್ತಿಗಳ ಪರಿಣಾಮವಾಗಿ.

ಲಚ್ಚನಂತಹ ಗಂಡನನ್ನು ಪಡೆದ ಅಭಾಗಿನಿ ನಾಗವೇಣಿಯದು, ಅಸಹಾಯಕತೆಯ ಪರಮಾವಧಿಯ ಬದುಕು. ಮನುಷ್ಯರ ರೀತಿ ನೀತಿಗಳನ್ನು ಕಿಂಚಿತ್ತಾದರೂ ರೂಢಿಸಿಕೊಳ್ಳದ, ಯಾವತ್ತಾದರೂ ಪ್ರವಾಸಿಯಂತೆ ಬಂದು ಮನೆತನವನ್ನೇ ವಿನಾಶದ ಅಂಚಿಗೆ ದೂಡುವ ಸನ್ನಾಹಗಳಿಂದಲೇ ಸಜ್ಜಾಗಿರುತ್ತಿದ್ದ ಮನುಷ್ಯನನ್ನು, ಸಹಿಸಬೇಕಾದ ಅನಿವಾರ್ಯತೆ ಅವಳದು. ತನ್ನ ಸ್ವಾರ್ಥ ಮತ್ತು ವಿಷಯ ಲೋಲುಪ್ತಿಗೆ ಮನೆತನದ ಆಸ್ತಿಯನ್ನು ಮೋಸದಿಂದ ಪರಭಾರೆ ಮಾಡಿ, ಹೆಂಡತಿ ಮಕ್ಕಳ ಬಾಳನ್ನು ಬೀದಿಗೆ ತಂದು ನಿಲ್ಲಿಸಿ, ಅದಕ್ಕಾಗಿ ಸ್ವಲ್ಪವಾದರೂ ಪಶ್ಚಾತ್ತಾಪವಿಲ್ಲದ ಪರಮ ಬೇಜವಾಬ್ದಾರಿ ಬದುಕು ಅವನದು.

ತನ್ನ ಕರುಳ ದುಃಖವನ್ನು ಮರೆಯಲು, ನಾಗವೇಣಿ ಮೊರೆ ಹೊಗುವ ಸಂಗೀತವನ್ನು, ಪಿಟೀಲಿನ ಟುಯ್ಸ್ ಸದ್ದಿನಲ್ಲಿ, ಮನದಲ್ಲಿ ಮಡುಗಟ್ಟಿದ ದುಃಖವನ್ನು ತೋಡಿಕೊಳ್ಳಲು ಆಶ್ರಯಿಸುವುದು. ತೋಡಿ ರಾಗವನ್ನು ಸಮುದ್ರದೆದುರಿನಲ್ಲಿ ಸಮುದ್ರದಂತಹ ಸಮುದ್ರವೇ ಭೋರ್ಗರೆದು ಗೋಳಿಡುವಂತೆ, ಸಮುದ್ರದ ಮೊರೆತವನ್ನು ತನ್ನ ಸಂಗೀತದ ಲಯಗಳಲ್ಲಿ

ಹಿಡಿದಿಟ್ಟು ಮನಸ್ಸನ್ನು ಸ್ತಿಮಿತಕ್ಕೆ ತರಲು ಹೆಣಗುತ್ತಿದ್ದ ಆ ಜೀವಕ್ಕೆ ತಂಪೆರೆಯುವಂತೆ ಮಗ ರಾಮ ಅದೇ ಪಿಟೀಲಿನ ತನ್ನ ಪ್ರೌಢಿಮೆಯನ್ನು ತಾಯಿಯೆದುರು ತೋರಿಸಿ, ನೊಂದ ಜೀವಕ್ಕೆ ಸಾಂತ್ವನ ನೀಡುತ್ತಾನೆ.

ರಾಮನಿಗೆ ತನ್ನ ತಂದೆ ಎಂತಹವನು ಎಂದು ಗೊತ್ತಾಗುವ ಅವಕಾಶಗಳೇ ಇರಲಿಲ್ಲ. ಅವನು ಹುಟ್ಟಿದಾಗಿನಿಂದ ಯೌವನದ ವರೆಗೆ ತಂದೆಯನ್ನು ಕಂಡವನೇ ಅಲ್ಲ. ಅವನಿಗೆ ಇಪ್ಪತ್ತು ವರ್ಷವಾಗುವಾಗ ಮೈಸೂರಿನಲ್ಲೊಮ್ಮೆ ಶ್ರೀರಾಂಪೇಟೆಯ ಕವಲೊಡೆಯುವ ಒಂದು ಸಂದಿಯಲ್ಲಿ ತನ್ನ ತಂದೆಯನ್ನು ಕಾಣಲು ಹೋಗುತ್ತಾನೆ. ತಾನೆಂದೂ ನೋಡದ, ದೊಡ್ಡವನಾಗಿ ತನ್ನೆದುರು ನಿಂತ ತನ್ನ ಮಗನನ್ನು ಕಾಣುವ ಯಾವ ಕಾತರವನ್ನೂ ತೋರದೆ, ತನ್ನ ಇಸ್ಪೀಟಿನ ಆಟದಲ್ಲೇ ಲೀನನಾದ ತಂದೆಯನ್ನು ಕಂಡು ಉಂಟಾದ ಅಸಹ್ಯ ಭಾವವನ್ನು ತಡೆದುಕೊಂಡು, ತನ್ನ ತಾಯಿಯೊಡನೆ, "ಅಮ್ಮ ಎಂದೂ ನಾನು ಅಪ್ಪನಂತಾಗಲಾರೆ" ಎನ್ನುವ ಮಾತೇ ನಾಗವೇಣಿಯ ಪಾಲಿಗೆ ಭರವಸೆಯ ಮಾತಾಗಿ ಕೇಳಿಸುತ್ತದೆ. ಇದು ಮೂರು ತಲೆಮಾರುಗಳ ರಾಮ ಐತಾಳರ, ಅವರ ಮಗ ಲಚ್ಚನ ಮತ್ತು ಅವನ ಮಗ ರಾಮನ ಕತೆ ಮಾತ್ರವಲ್ಲ; ಮನುಷ್ಯನ ಮೂರ್ಖತನದೆದುರು ಬಳಲಿದ ಜೀವಗಳ ಆರ್ತನಾದದ ಕತೆ. ಹಾಗೆಯೇ ಜಗತ್ತಿನ ಮೂರ್ಖತನದಿಂದಾಗಿ ಮನುಷ್ಯಕುಲ ತೊಳಲಾಡುವ ಇತಿಹಾಸದ ಕತೆ.

●

ಕಾರಂತರ ಜೀವಂತ ಪಾತ್ರಗಳು – ೭

ಅಪಾರ ವಿಸ್ತಾರವಾದ, ಆಕಾಶವೆಂಬ ಅವಕಾಶದಲ್ಲಿ ಸಚರಾಚರಗಳನ್ನು ಸೃಷ್ಟಿಸಿಕೊಂಡ ಶಕ್ತಿ ಯಾವುದೋ? ಅದೆಂತಹ ಶಕ್ತಿಯೆಂಬುದನ್ನು ಬಲ್ಲವರು ಯಾರೂ ಇಲ್ಲ. ಅದರ ಬಗೆಗಿನ ತಿಳಿವಳಿಕೆಗಾಗಿ ಇದುವರೆಗೆ ನಡೆದಿರುವ ತತ್ವ ಜಿಜ್ಞಾಸೆಗಳು ಯಾವುವೂ ದಡ ಮುಟ್ಟಿಸಿಲ್ಲ; ಬಹುಶಃ ಮುಟ್ಟಿಸುವುದೂ ಇಲ್ಲ. ಕೊನೆಗೆ ಆ ಬಗೆಯ ಶಕ್ತಿಯನ್ನು; ತರ್ಕಾತೀತವೆಂದು ಪ್ರಾಜ್ಞರು ಕೈತೊಳೆದುಕೊಂಡಿದ್ದಾರೆ. ಇಂತಹ ಅದರ ರಚನೆಗಳಲ್ಲಿ, ಅತ್ಯಂತ ಕುತೂಹಲಭರಿತ ಮಾತ್ರವಲ್ಲ, ಸುಂದರ ಸಜೀವ ಗ್ರಹವೆಂಬುದು ಈ ಭೂಮಿ. ಇಂತಹ ಇನ್ನೊಂದು ಸಜೀವ ಗ್ರಹ ಇರುವ ಬಗ್ಗೆ ಕೂಡಾ ಸರಿಯಾದ ಮಾಹಿತಿ ಇದುವರೆಗೆ ಗೊತ್ತಿಲ್ಲ.

ಈ ಜೀವ ಇಲ್ಲಿ ಮೊಳೆತುದು ಆಕಸ್ಮಿಕವೋ? ಪೂರ್ವಯೋಜಿತವೋ? ಅಥವಾ ಎರಡೂ ಅಲ್ಲವೋ? ಪೂರ್ವಯೋಜಿತವೇ ಆಗಿದ್ದಲ್ಲಿ ಯಾರು ಅದರ ಪ್ರೇರಕರು? ಇದೂ ಕೂಡಾ ಯಾರಿಗೂ ಗೊತ್ತಿಲ್ಲ! ಈ ಗೊತ್ತಿಲ್ಲಗಳ ಸಂತೆಯಲ್ಲಿಯೇ ಇಲ್ಲಿ ನೆಲೆಯೂರಿದ ಜೀವ ಪಡೆದುಕೊಂಡ ವೈವಿಧ್ಯಕ್ಕೆ ಕೊನೆಯೆಂಬುದಿದೆಯೇ? ಸಸ್ಯ, ಪ್ರಾಣಿಗಳೆಂಬ ಅಪಾರ ಪ್ರಭೇಧಗಳಿಂದ ಕೂಡಿದ ಜೀವಜಾಲದ ನಡುವೆ ಯಾವಾಗಲೋ ಈ ಮನುಷ್ಯಜೀವಿ ಪಾದಾರ್ಪಣೆ ಮಾಡಿ ಆಗಿತ್ತು.

ಈ ಭುವಿಯ ಅನೇಕ ಶಕ್ತಿಶಾಲಿ ಜೀವಿಗಳ ಮಧ್ಯೆ ಅತ್ಯಂತ ದುರ್ಬಲ ಜೀವಿಯಾಗಿ ಮೈದಳೆದ ಮನುಷ್ಯ ಅವುಗಳ ನಡುವೆ ಅನೇಕ ಲಕ್ಷ ವರ್ಷಗಳ ಸೆಣಸಿನಲ್ಲಿ ಉಳಿದು ದೆಂಬುದೇ ಆಶ್ಚರ್ಯಗಳಲ್ಲಿ ಆಶ್ಚರ್ಯ! ಆಗೆಲ್ಲಾ ಅವನನ್ನು ಕಾಪಾಡಿದ್ದು, ಜೀವ ಜಗತ್ತಿನಲ್ಲಿ ಅವನದೇ ವಿಶಿಷ್ಟ ಶಕ್ತಿಯಾದ ಬುದ್ಧಿಶಕ್ತಿ ಎನ್ನುತ್ತಾರೆ ವಿಜ್ಞಾನಿಗಳು.

ನಲವತ್ತು ಲಕ್ಷ ವರ್ಷಗಳ ಪ್ರಾಣಿ ಜೀವನದಲ್ಲಿ ಅವುಗಳೊಡನೆ ಸೆಣಸಿ ಉಳಿದು ಪ್ರಕೃತಿಯ ಸುದೀರ್ಘ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ನಾಗರಿಕತೆಯ ಹತ್ತಿರಕ್ಕೆ ಬಂದುದು. (ಅದೂ ನಾಗರಿಕತೆಯ ಉಷೆಯಲ್ಲದ, ಇನ್ನೂ ಬೆಳ್ಳಿ ಮೂಡುವ ಕಾಲವೆನ್ನಬಹುದೇನೋ?) ಆ ಕಾಲ ಹದಿನೈದು ಸಾವಿರ ವರ್ಷಗಳಿಗೂ ಹಿಂದಿನದಿರಬಹುದೆನ್ನುತ್ತಾರೆ.

ಇತ್ತ ನಾಗರಿಕಜೀವನಕ್ಕೆ ತೇರ್ಗಡೆಯೂ ಅಲ್ಲ; ಅತ್ತ ಪ್ರಾಣಿ ಜೀವನದಿಂದ ಬಿಡುಗಡೆಯೂ ಅಲ್ಲ ಎನ್ನುವ ಆ ಸಂಧಿ ಕಾಲದಲ್ಲಿ ಕೆಲವಾದರೂ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಮೇಯಗಳು ಈ ವಿಚಿತ್ರ ಜೀವಿಗೆ ಪ್ರಾಪ್ತಿಸಿರಬಹುದು. ಕೆಲವಾದರೂ, ತೆಳುವಾದರೂ ಅನಿವಾರ್ಯವಾದ, 'ಇದನ್ನು ಮಾಡು, ಇದನ್ನು ಬಿಡು' ಎನ್ನುವ ವಿಧಿ ನಿಷೇಧಗಳೆನ್ನಬಹುದಾದ ಅಂಕಿತಕ್ಕೆ ತನ್ನ ಉಳಿವಿಗಾಗಿ ಮನುಷ್ಯ ಕುಲ ಒಳಪಟ್ಟಿರಬಹುದು. ಆಗಿನ್ನೂ ಯಾವ ಧರ್ಮಶಾಸ್ತ್ರಕಾರನೂ ಕಣ್ಣು ತೆರೆದಿರಲಿಲ್ಲವಲ್ಲ. ಮನುಷ್ಯ ಕುಲವನ್ನು ಜಾತಿ, ಮತ, ಪಂಥ, ಸಿದ್ಧಾಂತಗಳ ಆಧಾರದಲ್ಲಿ ವಿಂಗಡಿಸಲು ಕಾರಣಕರ್ತರಾದ ಮಾನವ ಜನಾಂಗದ, ಮಾರ್ಗದರ್ಶಕ ಕಂದಮ್ಮಗಳು ಇನ್ನೂ ಅವರವರ ತಾಯಂದಿರ ಉಡಿಗಳಲ್ಲಿ ಆಡುವ ಕಾಲ ಕೂಡಾ ಮುಂದೆಲ್ಲೋ ಬಲು ದೂರದ, ಕಾಲಗರ್ಭದ, ಮಹಾನ್ ಅಂಧಕಾರದಲ್ಲಿನ ಅನಂತ ಭವಿಷ್ಯತ್ತಿನಲ್ಲಿ ಅಡಗಿಹೋಗಿತ್ತು.

ಮತ್ತೇನಕ್ಕಲ್ಲದಿದ್ದರೂ ಮನುಷ್ಯರ ನಡುವೆ ವೈಮನಸ್ಯಕ್ಕೆ ಆರಂಭಿಕ ಕಾರಣಗಳಾಗ ಬಹುದಾಗಿದ್ದ, ಗಂಡು ಹೆಣ್ಣುಗಳ ನಡುವಣ ಸಂಬಂಧದ ಸೀಮಾವಲಯದ ಗಡಿಯ ನಿರ್ಧಾರದ ಅಗತ್ಯಗಳಿದ್ದವು. ಮಣ್ಣು ಎಂದು ಕರೆಯಲಾಗದಿದ್ದರೂ, ಇರುವಿಕೆಗೆ ಅಗತ್ಯವಾದ ನೆಲದ ಹಂಚಿಕೆಯ ವಿಷಯದಲ್ಲಿ ಮೊದಲ ಕಟ್ಟುಪಾಡುಗಳು ಮಸುಕಾಗಿ ಆರಂಭವಾಗತೊಡಗಿರಬಹುದು. ಗಂಡು ಗಂಡನ ರೂಪಕ್ಕೆ; ಹೆಣ್ಣು ಹೆಂಡತಿಯ ರೂಪಕ್ಕೆ ಬರಲು ಇನ್ನೂ ಹತ್ತಾರು ಸಾವಿರ ವರ್ಷಗಳ ಕಾಲ ಪರಿಪಕ್ವತೆಯ ಸನ್ನಿವೇಶವೇ ಇದ್ದರೂ, ಆರಂಭಿಕ ಯುಕ್ತಾಯುಕ್ತತೆಯ ರೂಪರೇಷೆಗಳು ಮಸುಕು ಮಸುಕಾಗಿ ಮೂಡತೊಡಗಿರ ಬಹುದು. ಕನಿಷ್ಠ ಬುಡಕಟ್ಟಿನೊಳಗಣ ಸಂಬಂಧಗಳ ಕಟ್ಟುಪಾಡುಗಳು ಮೊಳೆಯತೊಡಗಿರ ಬಹುದು: ಇಲ್ಲಿಯೂ ಸಹ ಕಾಡಿನ ನ್ಯಾಯ ಇದ್ದೇ ಇದ್ದಿರಬಹುದು.

ಇಂತಹ ವಿಷಯಗಳನ್ನು ತೆಗೆದುಕೊಂಡೇ **'ಮೂಕಜ್ಜಿಯ ಕನಸು'**ಗಳಲ್ಲಿನ ಆದಿಮಾನವನ ಜೀವನವನ್ನು ಕಟ್ಟಿಕೊಡಲು ಕಾರಂತರು ಪ್ರಯತ್ನಿಸುತ್ತಾರೆ. ಅಲ್ಲಿ ಬರುವ ಗುಹಾವಾಸಿ ಮಾನವನ ಜೀವನ ಚಿತ್ರಣವೆಂಬುದು ಇಂತಹದೇ ಪರಿಕಲ್ಪನೆ. ಕಾದಂಬರಿಯಲ್ಲಿ ಬರುವ ವಿಭಿನ್ನ ಧರ್ಮಗಳ ಕಾಲಘಟ್ಟಗಳನ್ನು ಸೂಚಿಸುವುದೂ ಸಹ, ಮನುಷ್ಯ ನಡೆದು ಬಂದ ದಾರಿಯ ಹುಡುಕಾಟದ ಒಂದು ಭಾಗ. ಮನುಷ್ಯನ ಜೈವಿಕ ವಲಯದಲ್ಲಿ ಸಂಕೀರ್ಣವಾಗಿ ಮೇಳೈಸಿ ಅವನ ಜೀವನ ವಿಧಾನದಲ್ಲಿ ಆಕ್ರಾಮಕ ರೂಪದಲ್ಲಿ ವ್ಯಾಪಿಸಿರುವ ಲೈಂಗಿಕ ವ್ಯಾಪಾರಗಳ ನಿರೂಪಣೆಯೇ ಕಾದಂಬರಿಯ ಕೇಂದ್ರ ತಿರುಳು. ಇನ್ನು ಜನರ ಜೀವನ ಕ್ರಮದಲ್ಲಿ ಅಪಾರ ಪ್ರಭಾವ ಬೀರಿರುವ ನಂಬಿಕೆಗಳಲ್ಲಿ ಧರ್ಮದ ಪಾತ್ರ ಪ್ರಧಾನವಾದುದು. ಈ ಧರ್ಮವೆಂಬುದೂ ಸಹ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುವ ಪ್ರಭುತ್ವ ಶಕ್ತಿಯ ಸಂಪರ್ಕದಿಂದ ಧರ್ಮವು ಪಡೆದುಕೊಳ್ಳಬಹುದಾದ ಪ್ರಬಲ ಆಯಾಮಗಳ ಚಿತ್ರಣ ಸಹ 'ಮೂಕಜ್ಜಿಯ ಕನಸು'ಗಳಲ್ಲಿ ಬಿಂಬಿತವಾಗುವ ಮುಖ್ಯ ವಿಷಯ.

ಧರ್ಮದ ಬಗೆಗಿನ ಸಂವಾದ, ಕಾರಂತರ ಕಾದಂಬರಿಗಳಲ್ಲಿ ಎಡೆಬಿಡದೆ ವ್ಯಾಪಕವಾಗಿರುವ ಒಂದು ಸೂತ್ರ. ಧರ್ಮದ ಕುರುಡು ನಂಬಿಕೆಗಳ ಮೊತ್ತವನ್ನು ಚುಚ್ಚಿ

ಒಡೆಮು ಹಾಕುತ್ತಲೇ ಅದರ ನೆಲೆಗಟ್ಟನ್ನು ಅನ್ವೇಷಿಸತೊಡಗುವುದು: ಮನುಷ್ಯ ಜೀವನದಲ್ಲಿ ಓತಪ್ರೋತವಾಗಿ ಹಬ್ಬಿರುವ ಅವನ ಮನೋಮಯ ಕ್ಷೇತ್ರದಲ್ಲಿ ಒಂದು ನವಿರಾದ ತೆರೆಯಂತೆ ವ್ಯಾಪಿಸಿರುವ, ಅಲ್ಲಿಂದಲೇ ಕ್ಷೀಣವಾದ ಆದರೂ ಪ್ರಬಲವಾದ ತರಂಗಗಳನ್ನು ಪಸರಿಸುತ್ತಲೇ, ಅವನ ಜೀವನವನ್ನು ಪ್ರಭಾವಿಸುತ್ತಿರುವ ವಿಚಿತ್ರ ಶಕ್ತಿಯಾದ ಈ ಧಾರ್ಮಿಕ ಪ್ರಭಾವಲಯವನ್ನು ವಿಶ್ಲೇಷಿಸುವುದು ಅವರ ಸಾಹಿತ್ಯದಲ್ಲಿ ಇಷ್ಟವಾದ ನಡೆ. ಅದೂ ಸಹ ತಮ್ಮ ಅರಿವಿಗೆ ಬರುವಷ್ಟನ್ನೇ ಬಳಸಿ, ಉಳಿದುದು ತಿಳಿದಿಲ್ಲವೆನ್ನುವ ಪ್ರಾಮಾಣಿಕ ನೆಲೆಗಟ್ಟಿನ ಮೇಲೆ ಕಟ್ಟಿರುವ ತಾತ್ವಿಕ ದರ್ಶನ.

'ಆಳ ನಿರಾಳ' ಕಾದಂಬರಿಯಲ್ಲಿ ಧಾರ್ಮಿಕ ತತ್ವ ಜಿಜ್ಞಾಸೆ ಇದಕ್ಕೆ ಅತ್ಯುತ್ತಮ ಉದಾಹರಣೆ. ಇಡೀ ಕಾದಂಬರಿ ಒಂದು ದೀರ್ಘ ಪ್ರವಾಸದ ಅದ್ಭುತ ಕಥಾನಕ. ಅದು ತೊಡಗಿದುದು ಬೆಂಗಳೂರಿನ ರೈಲು ನಿಲ್ದಾಣದಿಂದಲೇ ಆದರೂ ಭಾರತವನ್ನೇ ಒಂದು ಸುತ್ತು ಬರುವ ಯೋಜನೆ. ಈ ಸುತ್ತು ಭಾರತದ ಸುತ್ತೋ? ಭೂಮಿಯ ಮೇಲೆ ಇರುವ ಮಾನವ ತನಗರಿವಿಲ್ಲದೆಯೇ ಸೂರ್ಯನನ್ನೇ ಸುತ್ತುವ ಒಂದು ಕ್ರಿಯೆಯೋ? 'ಆಳ ನಿರಾಳ'ದ ರೈಲು ಬಂಡಿ ಮಾನವನ ಕೃತ್ಯಕ್ಕೆ ಬಲಿಯಾಗಿ, ಅಪಘಾತದಿಂದ ಅಲ್ಲಿನ ಬದುಕು ನಾಶವಾಗುವಂತೆ: ಈ ಸುಂದರ ಧರೆ, ಮಾರ್ಗಮಧ್ಯದಲ್ಲಿಯೇ ಅದೇ ಮನುಷ್ಯನ ಧಾರ್ಮಿಕ ಅಂಧ ಶ್ರದ್ಧೆಗಳಿಂದಾಗಿ; ಅಜ್ಞಾನ, ದುರಾಸೆ, ಪ್ರಲೋಭನೆಗಳಿಂದಾಗಿ ಬಲಿಯಾಗದಿರಬೇಕಾದರೆ ಮಾಡಬಹುದಾದದ್ದಾದರೂ ಏನನ್ನು? ಅಥವಾ ಅವನ ಅಸಹಾಯಕತೆಯೇ ಅವನ ವಿಧಿಯೇ? ಎನ್ನುವ ಪ್ರಶ್ನೆಗಳನ್ನು ಹುಟ್ಟಿ ಹಾಕುತ್ತವೆ.

ರೈಲು ಬಂಡಿ ಒರಿಸ್ಸಾ ರಾಜ್ಯದಲ್ಲಿ ಸಂಚರಿಸುವಾಗ ಪುರಿಯ ಜಗನ್ನಾಥ ಮಂದಿರದಲ್ಲಿ ಕಾಣಿಸುವ ಮಿಥುನ ಶಿಲ್ಪಗಳಿಂದ ಆರಂಭವಾಗುವ ಚರ್ಚೆ ಭುವನೇಶ್ವರದ ಲಿಂಗರಾಜ ಮಂದಿರದಲ್ಲಿ ಮುಂದುವರಿಯುತ್ತದೆ. ವೈಷ್ಣವ ಮಂದಿರಗಳಲ್ಲಿ ಇರುವ ಲೈಂಗಿಕ ಶಿಲ್ಪಗಳು ಲಿಂಗರಾಜ ಮಂದಿರದಲ್ಲಿಲ್ಲ ಎನ್ನುವ ಶಿವಣ್ಣನ ಸಮಾಧಾನಕ್ಕೆ, ಲಿಂಗ ರಾಜ ಎನ್ನುವುದೇ ಲೈಂಗಿಕತೆಯ ಪ್ರತೀಕವಲ್ಲವೇ? ಎನ್ನುವ ಪ್ರಶ್ನೆ ಎದುರಾದಾಗ ನಿರುತ್ತರನಾಗುತ್ತಾನೆ. ಹೀಗೆ ಜನ ಸಾಮಾನ್ಯರ ಅನೇಕ ಪ್ರಶ್ನೆಗಳಿಗೆ ಸಮಾಧಾನವೆನ್ನುವುದು, ಅನೇಕ ರೀತಿಯಾಗಿ ಹೊರಹೊಮ್ಮುವುದು ಕಾರಂತರ ಬಹುಮುಖೀ ಅನ್ವೇಷಣೆಯ ಫಲ. ಹಾಗೆಯೇ ಲಿಂಗರಾಜ ಮಂದಿರದ ಎತ್ತರದ ಶಿಖರಗಳ ಭವ್ಯ ಸಂಪತ್ತನ್ನೂ, ಜಗನ್ನಾಥ ಮಂದಿರದ ಶಿಲ್ಪ ಕಲೆಯನ್ನೂ ಚಿತ್ರಿಸುವಲ್ಲಿ ಸಹ ಕಾರಂತರ ಲೇಖನಿ ಇನ್ನಿಲ್ಲದಷ್ಟು ಯಶಸ್ವಿಯಾಗಿದೆ. ಕಲಾವಿದ ವಸಂತ ದೇಸಾಯಿಯ ಕಣ್ಣಿನಲ್ಲಿ ಸಂಜೆಯಿಂದ ನಿಶೀಥದತ್ತ ಹೊರಳುತ್ತಿರುವ, ಚಂದ್ರನ ಕಾಂತಿಯ ಶೀತಲ ಸನ್ನಿವೇಶದಲ್ಲಿನ, ಸುನೀಲ ಗಗನದಲ್ಲಿ ಕೊರೆದ ರೇಖಾಚಿತ್ರಗಳಂತೆ ಕಾಣುವ ಬೃಹದ್ ಗೋಪುರಗಳ ರಸಪೂರ್ಣ ವರ್ಣನೆ ಓದುಗನ ಮನಸ್ಸಿನಲ್ಲಿ ಸ್ಥಾಯಿಯಾಗುತ್ತದೆ.

ಕಾರಂತರ ತತ್ವ ಚಿಂತನೆ ಎನ್ನುವುದು ಜನರ ಸ್ವಾಭಾವಿಕ ಚರ್ಯೆಗಳಿಂದ, ಕ್ರಿಯೆಗಳಿಂದ ವಿದೂರವಾದ ಮಾತಿನ ಮಂಟಪವಲ್ಲ; ಅವರ ವರ್ತನೆಗಳ ನಡುವೆಯೇ ಮೈದಾಳುವ, ಸಹಜ ಪ್ರಕ್ರಿಯೆ. ಇಡೀ 'ಆಳ ನಿರಾಳ' ಕಾದಂಬರಿಯ ಜೀವಾಳವಿರುವುದೇ ಅಲ್ಲಿನ ವಿವಿಧ ಮನಃಸ್ಥಿತಿಯ ವಿವಿಧ ಸ್ವಭಾವದ ಜೀವಂತ ಜನ ಜಂಗುಳಿಯ ಸುತ್ತಣ ಕ್ರಿಯೆಗಳಲ್ಲಿ ರಾಜಮಂಡ್ರಿಯ ಗೋದಾವರೀ ತಟದಲ್ಲಿ ಎಷ್ಟೊಂದು ಬಗೆಯ ಭಾವನೆಗಳ ನೂಕು ನುಗ್ಗಲು ಸಂಭವಿಸುತ್ತದೆಂಬುದನ್ನು ಊಹಿಸಲೂ ಆಳವಲ್ಲ. ಅಲ್ಲಿನ ಪುರೋಹಿತರಿಗಿಂತ ಗಮನ ಸೆಳೆಯುವ ವ್ಯಕ್ತಿಗಳು, ಆ ಜಾಗದ ಕ್ಷೌರಿಕರೆಂಬ ವಿನೋದಮಯ ಹೇಳಿಕೆ.

ಮುಂದಣ ವಿವರಣೆಗಳಲ್ಲಿ ಜೀವಂತಿಕೆಯನ್ನು ತಾಳುತ್ತದೆ. ಕಾರಂತರ ಮಾತಿನಲ್ಲಿಯೇ ಅದನ್ನೊಂದಿಷ್ಟು ಗಮನಿಸೋಣ:

ಅವರಲ್ಲೊಬ್ಬ ಕರಿಯ, ಅಚ್ಚ ಕರಿಯ. ಅವನದು ಹೊಳೆಯುವ ಬಿಳಿಯ ಅಂಗಿ, ಅವನ ಮಾಂಸ ತುಂಬಿದ ಮೈ, ಕೂದಲು ತುಂಬಿದ ತಲೆ. ಅವನು ಒಣಗಿ ಸೊರಗಿದ ಹೆಂಗುಸೊಬ್ಬಳ ಕೇಶರಾಶಿಯನ್ನು ನಿಷ್ಕರುಣೆಯಿಂದ ಕತ್ತರಿಸಿ ಹಾಕಿದ್ದು; ಅವಳಾದರೆ ಆ ಸಂಚಿತ ಕೇಶರಾಶಿಯನ್ನು ನಿರ್ಭೀತಿಯಿಂದ ಅವನ ಕೈಗೊಪ್ಪಿಸಲು ಅವಳ ಮನಸ್ಸಾದರೂ ಹೇಗೆ ಬಂತೋ? ಅವನು ತುಂಬಾ ತೃಪ್ತನಾಗಿ ಕೆಲಸ ಮಾಡುತ್ತಿದ್ದ. ಬಾಳನ್ನು ಮಸೆಯುತ್ತಾ, ಆ ಬಡ ತಲೆಯನ್ನು ಗಿಲಾಯಿಸಲು ಹೊರಟ...

ಕಲಾವಿದ ವಸಂತ ದೇಸಾಯಿಗೆ ಈ ಚಿತ್ರ ಮಾರಿಯಮ್ಮನ ಮುಂದೆ ಕಡಿಯಲು ತಂದು ನಿಲ್ಲಿಸಿದ ಕುರಿಯಂತೆ ಕಂಡಿರಬಹುದು. 'ನಿಷ್ಕರುಣೆಯಿಂದ ಕ್ಷೌರದ ಕತ್ತಿಯನ್ನು ಝಳಪಿಸುತ್ತಿದ್ದ ಮುಖ ಮಾತ್ರ ಕಟುಕನದಲ್ಲ. ಇನ್ನೂ ಹತ್ತಾರು ತಲೆಗಳನ್ನು ನುಣ್ಣಗೆ ಮಾಡಲು ಆತುರ ಉಳ್ಳ ಮಿದುವಾದ ಹಸನ್ಮುಖಿ.' ಇಂತಹ ಅನೇಕ ಚಿತ್ರಗಳನ್ನು ಕಟ್ಟಿಕೊಡುವ ಗೋದಾವರಿ ತಟ. ಮನುಷ್ಯ ತನ್ನ ಪಾಪಗಳೆಂದುಕೊಂಡಿರುವ ಕೃತ್ಯಗಳಿಂದ ಪಾರಾಗಲು ಹಿಡಿಯುವ ವಿಚಿತ್ರ ಮಾರ್ಗಗಳು ಗೋದಾವರಿ ಮತ್ತು ಅದರಂತಹ ಪುಣ್ಯ ನದಿಗಳ ದಂಡೆಗಳಲ್ಲಿ ಕಾಣಸಿಗುವ ಸಾಮಾನ್ಯ ನೋಟಗಳಾದರೂ ಅವುಗಳ ಹಿಂದಿನ ಮನಃಸ್ಥಿತಿ ಯೆಂಬುದು ಮಾತಿಗೆ ನಿಲುಕದ್ದು.

'ಆಳ ನಿರಾಳ'ದಲ್ಲಿ ಎಷ್ಟೊಂದು ಪಾತ್ರಗಳು? ಒಂದು ರೈಲು ಬಂಡಿಯಲ್ಲಿ ಯಾತ್ರೆ ಹೊರಟವರೆಂದರೆ ಸಾಮಾನ್ಯವೇ? ಎಷ್ಟೊಂದು ವಿಭಿನ್ನ ಬಗೆಯ ಸಂಸ್ಕಾರಗಳಿಂದ ಕೂಡಿದ ಬಗೆಬಗೆಯ ಮನೋವೃತ್ತಿಯ ಹಾಗೆಯೇ ಬಗೆಬಗೆಯ ವೃತ್ತಿಯ; ಪ್ರವೃತ್ತಿಯ ಜೀವಂತ ಜನ ಜಂಗುಳಿ. ಅದನ್ನೆಲ್ಲಾ ಚಿತ್ರಿಸಲು ಕಾರಂತರ ಲೇಖನಿಗೆ ಅವಸರವೇನಿಲ್ಲ. ಸ್ವಭಾವತಃ ಅವಸರದ ಪ್ರವತ್ತಿಯವರಾದ ಕಾರಂತರೂ ಸಹ, ಇಲ್ಲಿ ಸಮಗ್ರ ಚಿತ್ರಣ ನೀಡಲು ಹಿಂದೇಟು ಹಾಕುವುದಿಲ್ಲ. ಚುರುಕಾದ ವಿವರಣೆಗಳೊಡನೆಯೇ ಸಮಗ್ರತೆಯನ್ನೂ ಕೈಬಿಡದಂತೆ ವಿಶಿಷ್ಟ ಬಗೆಯಲ್ಲಿ 'ಆಳ ನಿರಾಳ'ದ ಶೈಲಿಯನ್ನು ಹದಗೊಳಿಸಿಕೊಂಡಿದ್ದಾರೆ.

ಜನರ ನಡುವೆ ತಾನು ವಿಶಿಷ್ಟನೆಂದು ಭಾವಿಸುತ್ತಲೇ ಬಾಯಿ ಜೋರಿನಿಂದ ಸವಲತ್ತುಗಳನ್ನು ಪಡೆದುಕೊಳ್ಳುವ ಪತ್ರಕರ್ತ ವೆಂಕಟರಾಮ. ಗೋದಾವರಿ ನದೀ ತಟದಂತಹ ಜನನಿಬಿಡ ಜಾಗದಲ್ಲಿಯೇ ಯೋಗ ಭಂಗಿಯಲ್ಲಿ ಕುಳಿತು ಧ್ಯಾನಸ್ಥನಾಗಿಬಿಡುವ(?) ಸ್ವಾಮಿ ಅದ್ಭುತಾನಂದ. ಹೆಸರೋ ಬಿರುದೋ ಎಂಬುದೇ ಅರ್ಥವಾಗದ ರಾಜಕೀಯ ವ್ಯಕ್ತಿ ಜಂಬಣ್ಣನವರ್. ಚಿತ್ರ ಕಲಾವಿದನಾದ, ವಿಶಿಷ್ಟ ಒಳನೋಟಗಳನ್ನು ಹೊಂದಿರುವ ಸೂಕ್ಷ್ಮ ವ್ಯಕ್ತಿತ್ವದ ವಸಂತ ದೇಸಾಯಿ. ವ್ಯಾಪಾರಿಗಳಾದ ಗೋವಿಂದರಾಜು ಮತ್ತು ವೆಂಕಟರಾಜುಶೆಟ್ಟರು. ಅರವತ್ತರ ವೃದ್ಧ ಮೈಲಾರಯ್ಯ. ಏಲಕ್ಕಿ ವ್ಯಾಪಾರಿ ತಂಬಾಕದ ಶಿವಣ್ಣ ಇನ್ನೂ ಇನ್ನೂ ಎಷ್ಟೋ? ಇವರುಗಳ ನಡುವೆಯೇ ಸಮಾಜದ ಅರಿವಿಗೇ ಬಾರದ ರೀತಿಯಲ್ಲಿ, ಜಂಬಣ್ಣನವರಂತಹ ರಾಜಕೀಯ ವ್ಯಕ್ತಿಯ ಬಂಧನದಲ್ಲಿರುವ; ಆ ಬಂಧನದಿಂದ ಹೊರ ಬರುವ ಮಾರ್ಗವೇ ತಿಳಿಯದೆ, ಪಂಜರದ ಪಕ್ಷಿಯಂತೆ ಒದ್ದಾಡುತ್ತಿರುವ ಶಾರದೆ. ಅವಳ ಮೇಲೆ ನಡೆಯುವ ದೈಹಿಕ, ಮಾನಸಿಕ, ಪೈಶಾಚಿಕ ಹಿಂಸಾಚಾರ. ಇದೆಲ್ಲವನ್ನೂ ಸಹಿಸಿ ಶಾಂತವಾಗಿರುವಂತೆ ಕಾಣುವ ಶಾರದೆ, ಸುಪ್ತವಾದ ಜ್ವಾಲಾಮುಖಿ. ಇವರಲ್ಲದೆ ನಿಲ್ದಾಣಗಳಲ್ಲಿ ಕಂಡು ಬರುವ ಚಿತ್ರ ವಿಚಿತ್ರ ಜನಸಮೂಹ,

'ಆಳ ನಿರಾಳ' ಓದುಗನನ್ನೂ, ಯಾತ್ರಿಕರ ಗುಂಪಿಗೆ ಸೇರಿಸಿ ಕರೆದೊಯ್ಯುದಿದ್ದರೆ ಕೇಳಿ.

ಸ್ವಾಮಿ ಅದ್ಭುತಾನಂದನಿಗೆ ಯೋಗವೆಂಬುದು ಒಂದು ಪ್ರದರ್ಶಕ ಕಲೆ: ಅಧ್ಯಾತ್ಮ ಅಂತರಂಗದ ಅನುಭೂತಿ ಎಂಬುದರ ಅರಿವೇ ಇಲ್ಲದ ಅವನಿಗೆ. ಬಯಲು ವೇಷವೆಂಬುದು ನಾಲ್ಕು ಜನರನ್ನು ಆಕರ್ಷಿಸಲಿರುವ ಸಾಧನ. ಇಲ್ಲಿ ಯೋಗವು ಅಂತರ್ಮುಖಿಯಾದ ಹರಿವಾಗದೆ ಬಹಿರ್ಮುಖವಾದ ಮುಖವಾಡ. ಜಂಬಣ್ಣನವರ್ ರಾಜಕೀಯದ ಕ್ರೌರ್ಯಗಳನ್ನು ಸರಿಯಾಗಿ ಆವಾಹಿಸಿಕೊಂಡ ಅಪ್ಪಟ ರಾಜಕಾರಣಿ, ನಡೆ ನುಡಿ ಎಲ್ಲದರಲ್ಲೂ ಸಹ. ಇನ್ನು ಪತ್ರಕರ್ತ ವೆಂಕಟರಾಮು ತನ್ನ ಹುದ್ದೆಯನ್ನು ಸಮರ್ಪಕವಾಗಿ ತನ್ನ ಅನುಕೂಲಕ್ಕೆ ತಿರುಗಿಸಿಕೊಳ್ಳುವ ಕಲೆಯಲ್ಲಿ ಪ್ರವೀಣ. ಹೀಗೆ ಮನುಷ್ಯನ ವಿವಿಧ ರೀತಿಯ ವರ್ತನೆಗಳನ್ನು ಮತ್ತು ತನ್ನ ಸೌಖ್ಯಕ್ಕಾಗಿ ಪರರ ಮೇಲೆ ನಡೆಸುವ ದೌರ್ಜನ್ಯವನ್ನು, ಅದನ್ನು ಮರೆಮಾಚಲು ತೊಡುವ ಸೋಗಿನ ಅಧ್ಯಾತ್ಮದ: ತೋರಿಕೆ ಮುಖವಾಡದ ಪರಿವೇಷವನ್ನು ಕಾರಂತರು 'ಆಳ ನಿರಾಳ'ದಲ್ಲಿ ಸೊಗಸಾಗಿ ಚಿತ್ರಿಸುತ್ತಾರೆ.

ವಸಂತ ದೇಸಾಯಿ ಪ್ರವಾಸದ ಉದ್ದಕ್ಕೂ ವಿಶಿಷ್ಟ ರೀತಿಯಲ್ಲಿ ಗಮನ ಸೆಳೆಯುವ ಪಾತ್ರ. ಯಾತ್ರೆಯ ಪ್ರತಿ ವಿವರಗಳನ್ನೂ ತನ್ನ ವಿಚಾರದ ಪರಿಧಿಯಲ್ಲಿ ತಾಳೆ ನೋಡುತ್ತಲೇ ವಿಭಿನ್ನ ರೀತಿಯ ಗ್ರಹಿಕೆಗಳಿಂದ ವಾಸ್ತವವನ್ನು ಗಮನಿಸುವ ಮತ್ತು ಆಳದಲ್ಲಿ ತನ್ನಲ್ಲಡಗಿದ ಕಲಾವಿದನ ಕಣ್ಣಲ್ಲಿ ಹೊರಗನ್ನು ಗಮನಿಸುತ್ತಲೇ ಒಳಗಣ ಭಾವಜೀವನವನ್ನು ಉದ್ದೀಪನಗೊಳಿಸಿಕೊಳ್ಳುವ ಅಪ್ಪಟ ಕಲಾವಿದ. ಹಾಗೆಯೇ ತಂಬಾಕದ ಶಿವಣ್ಣನಂತಹ ಮುಗ್ಧನಾದರೂ ಕುತೂಹಲಿಯಾಗಿರುವ ವ್ಯಕ್ತಿಯ ಸಾಹಚರ್ಯದಿಂದ ಅವನಲ್ಲಿ ನಿರರ್ಗಳ ಮಾತುಕತೆಯಲ್ಲಿ ತೊಡಗುವಿಕೆಯೇ ವಿಚಾರಗಳ ಹರಹನ್ನು ಹರವಲು ಕಾರಂತರಿಗೆ ಸಾಧನವಾಗುತ್ತಾನೆ.

ಮುಂದೆ ನಮ್ಮ ಯಾತ್ರಾ ಸ್ಪೆಷಲ್ ರೈಲು ಗಯಾಕ್ಕೂ ತಲುಪುತ್ತದೆ. ಅಲ್ಲಿ ಬುದ್ಧನಿಗೆ ಜ್ಞಾನೋದಯವಾದ ಬೋಧಿ ವೃಕ್ಷವನ್ನು ಕಂಡ ವಸಂತ ದೇಸಾಯಿಯ ಮನಸ್ಸಿನಲ್ಲಿ, ಆ ಜಾಗದಲ್ಲಿ ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಬುದ್ಧ ನಡೆದಾಡಿರಬಹುದಾದ ಚಿತ್ರಗಳು ಮೂಡುತ್ತವೆ. ಉತ್ತರ ಭಾರತವನ್ನೆಲ್ಲಾ ವ್ಯಾಪಿಸಿದ್ದ ಬೌದ್ಧ ಧರ್ಮ ಏಳನೆಯ ಶತಮಾನದ ವೇಳೆಗೆ ಈ ನಾಡಿನಿಂದಲೇ ಮರೆಯಾಗಿ ಹೋದ ರೀತಿ ಆಶ್ಚರ್ಯಕ್ಕೆ ಕಾರಣವಾಗುತ್ತದೆ. ಸ್ವತಃ ಬುದ್ಧ ತನ್ನದೊಂದು ಮತ ಬೆಳೆಯಲೆಂದು ಯೋಚಿಸಿರಲಿಕ್ಕಿಲ್ಲ. ಅದು ಅವನ ಶಿಷ್ಯರ ಅಭೀಷ್ಟವಾಗಿದ್ದಿರಬಹುದು ಎನಿಸುತ್ತದೆ. ನಂತರ ಎಲ್ಲ ಧರ್ಮಗಳಂತೆ ಬೌದ್ಧ ಧರ್ಮವೂ ಸಹ ಅನೇಕ ಬದಲಾವಣೆಗಳಿಗೊಳಪಟ್ಟು ಅನೇಕ ಪಂಥಗಳಾಗಿ ಬೆಳೆಯಿತು. ಆಸೆಯೇ ದುಃಖಕ್ಕೆ ಕಾರಣವೆಂದು ಮಾತ್ರ ಹೇಳಿದ; ಬದುಕನ್ನು ಬಂದಂತೆ ಸ್ವೀಕರಿಸಿ, ಸರಳ ಜೀವನದ ತತ್ವಗಳನ್ನು ಸರಳವಾಗಿ ಪ್ರತಿಪಾದಿಸಿದ ಬುದ್ಧನ ಮಾತುಗಳು ಜಾತಕ ಕತೆಗಳಾಗಿ, ಪೂರ್ವ ಅಪರ ಜನ್ಮಗಳಾಗಿ, ಹೀನಯಾನ, ಮಹಾಯಾನ ಪಂಥಗಳಾಗಿ, ಜನ ಸಾಮಾನ್ಯರಿಗೆ ಅರ್ಥವೇ ಆಗದಷ್ಟು ಕಗ್ಗಂಟಾಗಿ ಹೋದುದು ಮುಂದಿನ ಕಥೆ. ವರ್ತಮಾನದ ಬದುಕನ್ನು ಮಾತ್ರ ಪ್ರೀತಿಯಿಂದ ಬದುಕಿ, ಜೀವನಕ್ಕೆ ಒಂದು ಅರ್ಥವಂತಿಕೆಯನ್ನು ಗಳಿಸಿಕೊಡುವತ್ತ ಗಮನವನ್ನು ಕೇಂದ್ರೀಕರಿಸಿದ ಬುದ್ಧ; ದೇವರು ಮತ್ತು ಅಲೌಕಿಕ ಬದುಕಿನ ಬಗ್ಗೆ ಮೌನ ವಹಿಸಿದ. ಸಾಮಾನ್ಯ ಮನುಷ್ಯನಿಗೆ ಇಷ್ಟು ಸಾಕಾಗಲಿಕ್ಕಿಲ್ಲವೆನಿಸುತ್ತದೆ. ಆದರಿಂದಾಗಿಯೇ ಬೌದ್ಧ ಧರ್ಮ ಬುದ್ಧನನ್ನೇ ಬೋಧಿಸತ್ವವನ್ನಾಗಿಸಿ ಅವನನ್ನೇ ದೇವರ ಸ್ಥಾನದಲ್ಲಿ ಕೂರಿಸಿತು. ಸಾಮಾನ್ಯರಿಗಾಗಿ ಸರಳ ತತ್ವಗಳನ್ನು ಬುದ್ಧನು ಬೋಧಿಸಿದರೂ: ಸರಳವನ್ನು ಕಗ್ಗಂಟಾಗಿಸಿಕೊಳ್ಳುವಲ್ಲಿಯೇ ಜನರ ಮನಸ್ಸಿಗೆ ಸಮಾಧಾನವಿರುವಂತಿದೆ.

ಕೆಲವು ಜನರಿರುತ್ತಾರೆ. ಅವರಿಗೆ ತಾವು ಮಾಡುತ್ತಿರುವ ಕೃತ್ಯಗಳ ಬಗ್ಗೆ ಅರಿವಿರುವುದಿಲ್ಲ. ಈ ಜಗತ್ತು ಅವರ ಮೂಗಿನ ನೇರಕ್ಕೆ ಮಾತ್ರ ನಡೆಯಬೇಕು ಎನ್ನುವ ಸಿದ್ಧಾಂತ ಅವರದು. ಜಗತ್ತಿನ ಗಮನವನ್ನು ತಮ್ಮ ಕಡೆ ಸೆಳೆಯಲು ಅವರು ಹೂಡುವ ಹುನ್ನಾರಗಳು, ಅನೇಕ ನಿಷ್ಪಾಪಿ ಮುಗ್ಧರ ಬದುಕುಗಳನ್ನು ಹೊಸಕಿ ಹಾಕುತ್ತವೆ. ಮುಂದೊಂದು ದಿನ ತಾವೂ ಸಹ ಸಾಯಲೇಬೇಕಾಗಿರುವ ಈ ಮೂರ್ಖರು ಇಂದು ಮುಗ್ಧರನ್ನು ಹೊಸಕಿ ಹಾಕಲು ಒಂದಿಷ್ಟೂ ಯೋಚಿಸದಿರುವಷ್ಟು ಕ್ರೂರಿಗಳು.

ಯಾತ್ರಾ ಡಿಲಕ್ಸ್ ಬಂಡಿಯಲ್ಲಿ ನಿರ್ಯೋಚನೆಯಿಂದ ಪಯಣಿಸುತ್ತಿದ್ದ ಸಾವಿರಾರು ಮುಗ್ಧ ಜೀವಿಗಳು, ತಮಗೊದಬಹುದಾದ ದುರ್ಗತಿಯನ್ನು ಊಹಿಸುವ ಯಾವ ಪ್ರಮೇಯವೂ ಇರುವುದಿಲ್ಲ. ನಡೆಯಬೇಕಾದ ಮನುಷ್ಯಕೃತ ದುರ್ಘಟನೆಯ ಕಾರಣಕ್ಕೂ, ಯಾತ್ರಿಕರಿಗೂ ಯಾವ ರೀತಿಯ ಸಂಬಂಧವೂ ಇರುವುದಿಲ್ಲ. ಆದರೂ ಅತಿರೇಕವಾದಿಗಳ ಗುರಿ ಈ ಬಂಡಿ ಆಗಿರುವುದು, ಆಕಸ್ಮಿಕವೂ ವಿಚಿತ್ರ ಯೋಗಾಯೋಗವೂ ಆಗಿರುತ್ತದೆ. ಮಾನವನ ವಿಧ್ವಂಸಕ ಕೃತ್ಯಕ್ಕೆ, ಕಡೆಗೂ ಯಾತ್ರಿಕರ ಬಂಡಿ ಗುರಿಯಾಗುತ್ತದೆ. ಅಲ್ಲಿ ನಡೆಯುವ ದಾರುಣ ಅಪಘಾತವೂ ಸಹ ಮನುಷ್ಯನ ಅನೇಕ ಮುಖಗಳನ್ನು ಬಿಚ್ಚಿಡುತ್ತದೆ.

ಅಪಘಾತದಲ್ಲಿ ಕಾಲು ರೈಲಿನಡಿ ಸಿಕ್ಕಿಹಾಕಿಕೊಂಡು ಯಮಯಾತನೆ ನೀಡುತ್ತಿದ್ದರೂ ಹಲ್ಲು ಕಚ್ಚಿ ಅದನ್ನು ಸಹಿಸಿ ನಿರ್ಲಿಪ್ತನಂತಿದ್ದ ಶಾಂತಣ್ಣ; ಯಾತ್ರೆಯುದ್ದಕ್ಕೂ ಬಡಾಯಿ ಕೊಚ್ಚುತ್ತಿದ್ದ ಅದ್ಭುತಾನಂದ ಸ್ವಾಮಿಯ ಚಿತ್ರವನ್ನು ಸಹಜವಾಗಿ ಕುಬ್ಜಗೊಳಿಸುತ್ತಾನೆ. ಬಿಡುಗಡೆಗಾಗಿ ಚಡಪಡಿಸುತ್ತಿದ್ದ, ಅದಕ್ಕಾಗಿ ವಸಂತ ದೇಸಾಯಿಯ ನೆರವನ್ನೂ ಯಾಚಿಸಿದ್ದ, ಶಾರದೆಯ ಬಿಡುಗಡೆಯ ಬಯಕೆ, ಊಹಾತೀತವಾಗಿ, ಸಹಜವಾಗಿ, ನೆರವೇರಿಬಿಡುತ್ತದೆ. ಅಪಘಾತದಲ್ಲಿ ಸಿಲುಕಿದವರು, ಪರಸ್ಪರ ಸಹಾನುಭೂತಿಯಿಂದ ನೆರವಾಗುವುದು, ಹಾಗೆಯೇ ಸಂಕಟದಲ್ಲಿರುವವರ ಹಣ ಒಡವೆಗಳನ್ನು ದೋಚುವ ದುರಾತ್ಮರು, ಹೀಗೆ 'ಆಳ ನಿರಾಳ'ದ ಒಂದು ಅಪಘಾತ ಮನುಷ್ಯನ ಮಾನವೀಯ ಮುಖಗಳನ್ನೂ; ರಾಕ್ಷಸೀಯ ಕರಾಳ ಮುಖಗಳನ್ನೂ ಏಕಕಾಲಕ್ಕೆ ಅನಾವರಣಗೊಳಿಸುತ್ತಾ ಹೋಗುತ್ತದೆ.

'ಆಳ ನಿರಾಳ'ದ ಒಂದು ಯಾತ್ರಾ ಪ್ರಸಂಗವೆಂಬುದು, 'ಕಾರಂತರ ಕಾದಂಬರಿಗಳಲ್ಲಿ ತಾಂತ್ರಿಕ ನೈಪುಣ್ಯತೆ ಕಡಿಮೆ' ಎಂದು ಟೀಕಿಸುವವರೂ ಬೆರಗಾಗುವಂತೆ, ಸಹಜವಾಗಿ ಅರಳುವ ತನ್ನ ಕೌಶಲ್ಯದಿಂದಾಗಿ ನಿರೂಪಣಾ ತಂತ್ರವನ್ನು ತಾನಾಗಿ ರೂಪಿಸಿಕೊಳ್ಳುತ್ತದೆ.

✦ **ಸಿ. ಸೋಮಶೇಖರಯ್ಯ,**
'ಅರಿವು', ಸೊಸಾಯಿಟಿ ಹಿಂಭಾಗ, ಜೋಳಗುಡ್ಡ, ಚಿತ್ರದುರ್ಗ–೫೭೭ ೫೦೧ ✦

ಹನಿ ಹನಿ ಹನಿ — ಸಿ. ಪಿ. ಕೆ.

೧. ವಿಜ್ಞಾನದ / ವಾತಾಪಿಯನ್ನೂ / ಜೀರ್ಣಿಸಿಕೊಳ್ಳಬಲ್ಲ / ಅಗಸ್ತ್ಯ ಕಾವ್ಯ! / (ಅತ್ಯಗತ್ಯ ಬದುಕಿಗೆ.)
೨. ಹಲವರು ಸ್ತ್ರೀಯರು / "ಖಂಡವಿದೆ ಕೋ, / ಮಾಂಸವಿದೆ ಕೋ!" /
ಎನ್ನಬಲ್ಲ / ಮ(ಪ)ಣ್ಯಕೋಟಿಗಳು!
೩. ಕವಿ ಮುಕ್ಕಣ್ಣ; / ಸಹೃದಯರಿಗೆ ಮೂರಲ್ಲದಿದ್ದರೆ / ಎರಡಾದರೂ ಬೇಕು; /
ಆದರೆ ಕೆಲವರು ವಿಮರ್ಶಕರು / ಒಕ್ಕಣ್ಣ ಶುಕ್ರಾಚಾರ್ಯರು!
೪. ಇಂದಿನ ಜತ್ತಲು / ಕತ್ತಲು ಕಾಡಿನಲ್ಲಿ / ನೀತಿಬೋಧೆ ಎಂಬುದು / ಅರಣ್ಯರೋದನ!
೫. ಸೋಮಾರಿಗಳಿಗೆ / ಎಲ್ಲಿದೆ ಕಾಲ? / ಕಾರ್ಯನಿರತರಿಗಿದೆ / ವಿಪುಲ!

✦ ಡಾ. ಸಿ. ಪಿ. ಕೆ., ೨೨೬೫/೧೯, ಭಾರತಿ, ಒನೇ ಕ್ರಾಸ್, ವಿನಾಯಕನಗರ, ಮೈಸೂರು–೧೨ ✦

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪು

ಮ. ನ. ಜವರಯ್ಯ

೧

ಸುಲ್ತಾನ್ ಟೀಪು ಬಗ್ಗೆ ಚರಿತ್ರೆಯ ನೆಲೆಗಳಲ್ಲಿ ಮಾತನಾಡುವುದೇ ಬೇರೆ. ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ಅವನ ವ್ಯಕ್ತಿತ್ವವನ್ನು ಗ್ರಹಿಸುವುದೇ ಬೇರೆ. ಅದೇ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಸುಲ್ತಾನ್ ಟೀಪು ಬಗ್ಗೆ ಮಾತನಾಡುವುದು ಇವೆಲ್ಲಕ್ಕಿಂತಲೂ ಭಿನ್ನವಾದ ವಿಷಯವೇ ಆಗಿದೆ. ಆದರೆ, ಇವೆಲ್ಲಕ್ಕೂ ಮೊದಲು ಟೀಪು ಬಗ್ಗೆ ಶೈಕ್ಷಣಿಕವಾಗಿ ಚಿಂತಿಸುವುದು ಪ್ರಥಮತಃ ಮುಖ್ಯವಾದುದು.

ರಾಜ್ಯದ ಒಂದು ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ನಾಡಿನ ಕೆಲವು ಹೆಸರಾಂತ ಮತ್ತು ಸಂಶೋಧನ ಕ್ಷೇತ್ರದಲ್ಲಿನ ಕೆಲವು ಹಿರಿಯ ಪರಿಣತರ ಸಭೆ ನಡೆದಿತ್ತು. ಕನ್ನಡ ಸಾಹಿತ್ಯದ ಕುರಿತು ಸಂಶೋಧನ ಕ್ಷೇತ್ರದಲ್ಲಿ ಈವರೆಗೂ ಸಂಶೋಧನೆ ನಡೆದಿರುವ ಕ್ಷೇತ್ರಗಳ ಪರಿಶೀಲನೆ ಆ ಸಭೆಯಲ್ಲಿ ನಡೆದಿತ್ತು. ಇನ್ನು ಮುಂದೆ ಸಂಶೋಧನೆ ನಡೆಯಬೇಕಾಗಿರುವ ವಿಷಯ ಕ್ಷೇತ್ರಗಳನ್ನು ಗುರುತಿಸಿ ಪಟ್ಟಿ ಮಾಡಲಾಗುತ್ತಿತ್ತು. ಅಂತಹ ಒಂದು ಸಂದರ್ಭದಲ್ಲಿ "ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪು" ಎಂಬ ಒಂದು ವಿಷಯವನ್ನು ಸಂಶೋಧನೆಗಾಗಿ ನಾನು ಪ್ರಸ್ತಾಪಿಸಿದಾಗ, ಆ ಸಭೆಯಲ್ಲಿದ್ದ ಸಮಿತಿಯ ಕೆಲವು ಪರಿಣತ ಸದಸ್ಯರಿಗೆ ಆ ವಿಷಯ ಕೇಳಿ ಸಾಕಷ್ಟು ಆಶ್ಚರ್ಯವೇ ಆಗಿತ್ತು. ತದನಂತರ ಆ ಕುರಿತ ಸಾಹಿತ್ಯ ಪ್ರಕಾರಗಳನ್ನು ವಿವರಿಸತೊಡಗಿದೆ. ಅದರಲ್ಲೂ ಸುಮಾರು ಏಳುನೂರು ಪುಟಗಳಷ್ಟು ವಿಸ್ತಾರವಾಗಿರುವ ನನ್ನ "ಸೂರಪ್ಪ" ಕಾದಂಬರಿ ರಚನೆಯ ಹಿನ್ನೆಲೆಯಲ್ಲಿ, ಸುಲ್ತಾನ್ ಟೀಪುವನ್ನು ಕುರಿತಂತೆ ನಾನು ಕೈಗೊಂಡಂತಹ ಅಧ್ಯಯನದ ವ್ಯಾಪ್ತಿಯನ್ನು ಆ ಸಭೆಯಲ್ಲಿ ವಿವರಿಸುವುದು ಶೈಕ್ಷಣಿಕವಾಗಿಯೂ ಮುಖ್ಯವಾಗಿತ್ತು.

ಸುಲ್ತಾನ್ ಟೀಪು ಬಗ್ಗೆ ಜನಜನಿತ ವಿಷಯಗಳು ಕೇವಲ ಚರಿತ್ರೆಯ ಹಿನ್ನೆಲೆಯಲ್ಲಿ ಮಾತ್ರ ಜನಮನವನ್ನು ಮುಟ್ಟಿರುವಂತೆ ತಿಳಿದುಬರುತ್ತದೆ. ಆದರೆ, ಕನ್ನಡ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ಚಿತ್ರಿಸಲಾಗಿರುವ ಟೀಪುವಿನ ಪಾತ್ರ ಜನಸಮುದಾಯದಲ್ಲೂ ಚಿರಪರಿಚಿತವಲ್ಲ, ಸಮೂಹ ಮಾಧ್ಯಮಗಳಲ್ಲೂ ಅಷ್ಟು ಪರಿಚಿತವಿಲ್ಲ. ಆದಾಗ್ಯೂ, ಚರಿತ್ರೆಯ ಮುಖಾಂತರ ಜನರನ್ನು ಮುಟ್ಟಿರುವ ಟೀಪು ಬಗೆಗಿನ ವಿಷಯ ಕೇವಲ ವಿಕಾರಗೊಳಿಸಲಾದ ಚರಿತ್ರೆಯನ್ನೇ ಹೆಚ್ಚು ಪ್ರಚಾರ ಮಾಡಲಾಗಿರುವುದು ಮಾತ್ರ ಸ್ಪಷ್ಟವಾಗಿಯೇ ತಿಳಿದುಬರುತ್ತದೆ. ಆದರೆ, ಸುಲ್ತಾನ್ ಟೀಪುವನ್ನು ಕುರಿತ ಚರಿತ್ರೆಯನ್ನು ಹೀಗೆ ವಿಕಾರಗೊಳಿಸಲು ಕಾರಣವೇನು? ಇದು ಅತ್ಯಂತ ಚರ್ಚಾಸ್ಪದವಾದಂತಹ ಪ್ರಶ್ನೆ. ಹಾಗಾಗಿ, ಆ ವಿಷಯವನ್ನು ಕುರಿತ ಚರ್ಚೆಯನ್ನು ಮುಂದಿನ ಪ್ಯಾರಾಗಳಲ್ಲಿ ಮುಂದುವರಿಸಬಹುದಾಗಿದೆ. ಸದ್ಯ ಸೃಜನಶೀಲ ಕನ್ನಡ ಸಾಹಿತ್ಯದ ಯಾವ ಯಾವ ಪ್ರಕಾರಗಳಲ್ಲಿ ಸುಲ್ತಾನ್ ಟೀಪುವಿನ ಐತಿಹಾಸಿಕ ಪಾತ್ರವನ್ನು ಚಿತ್ರಿಸಲಾಗಿದೆ ಎಂಬುದನ್ನು ವಿವರಿಸಬಹುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪುವನ್ನು ಕುರಿತಂತೆ ಪ್ರಾಯಶಃ ಪ್ರಪ್ರಥಮ ಐತಿಹಾಸಿಕ ಕಾದಂಬರಿಯೆಂದರೆ, ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲೇ

ಪ್ರಕಟವಾಗಿರಬಹುದಾದ ವೀರಕೇಸರಿ ಕಾವ್ಯನಾಮದ ಸೀತಾರಾಮಶಾಸ್ತ್ರಿ ವಿರಚಿತ "ಮೈಸೂರು ಹುಲಿ". ಹಾಗೆ ನೋಡಿದರೆ, ಚಿತ್ರದುರ್ಗದ ಮದಕರಿ ನಾಯಕನನ್ನು ಕುರಿತ ತ.ರಾ.ಸು. ಅವರ "ದುರ್ಗಾಸ್ತಮಾನ" ಕಾದಂಬರಿಯೂ ಐತಿಹಾಸಿಕ ಕಾದಂಬರಿಯೇ. ಆಧುನಿಕ ಕನ್ನಡದಲ್ಲಿ ಅದೊಂದು ಮಹತ್ವಾಕಾಂಕ್ಷೆಯ ಕಾದಂಬರಿಯೂ ಹೌದು. ಆದರೆ, ಆ ಕಾದಂಬರಿಯ ಐತಿಹಾಸಿಕ ನಾಯಕನಾದ ಮದಕರಿ ನಾಯಕ, ಸುಲ್ತಾನ್ ಟೀಪುವಿನಂತೆ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಅಷ್ಟು ಜನಪ್ರಿಯ ಎಂದೇನೂ ಪ್ರಸಿದ್ಧಿಯಾಗಿಲ್ಲ. ಚರಿತ್ರೆಯ ಪ್ರಕಾರ ಮದಕರಿ ನಾಯಕ ಸುಲ್ತಾನ್ ಟೀಪುವಿನಂತೆ ಕ್ರಾಂತಿಕಾರಿ ಚಿಂತನೆಗೂ ಸಾಮಾಜಿಕ ಪರಿವರ್ತನೆಗೂ ಹೆಸರಾದ ನಾಯಕನೇನಲ್ಲ.

ಆಧುನಿಕ ಕನ್ನಡದಲ್ಲಿ ಸುಲ್ತಾನ್ ಟೀಪುವಿನ ಪಾತ್ರವನ್ನು ಕೊನೆಯ ಪಕ್ಷ ಮೂರು ರೀತಿಯ ಸಾಹಿತ್ಯ ಪ್ರಕಾರಗಳಲ್ಲಿ ಕಾಣಬಹುದಾಗಿದೆ. ಮೊದಲನೆಯದಾಗಿ, ಜನಪದ ಸಾಹಿತ್ಯ. ಎರಡನೆಯದು, ಈಗಾಗಲೆ ಸೂಚಿಸಿರುವ ಕಾದಂಬರಿ ಸಾಹಿತ್ಯ. ಮೂರನೆಯದು ಮತ್ತು ಮುಖ್ಯವಾದುದು, ನಾಟಕ ಸಾಹಿತ್ಯ. ಅಂದರೆ, ವೈಚಾರಿಕ ಬರವಣಿಗೆಯನ್ನೂ ಮೊದಲುಗೊಂಡು, ಸಾಹಿತ್ಯದ ಈ ವಿಭಿನ್ನ ಪ್ರಕಾರಗಳಲ್ಲಿ ಸುಲ್ತಾನ್ ಟೀಪು ನಾಯಕ ಪಾತ್ರವಾಗಿ ಕಾಣಿಸಿಕೊಂಡಿರುವುದರ ಹಿಂದಿನ ಮೂಲ ಪ್ರೇರಣೆ, ಸುಲ್ತಾನ್ ಟೀಪು ಮೂಲತಃ ಪರಾಕ್ರಮಿ ಯುದ್ಧವೀರ, ಕ್ರಾಂತಿಕಾರಿ ಚಿಂತಕ, ಅಭಿವೃದ್ಧಿ ಮತ್ತು ನಿತ್ಯಪರಿವರ್ತನಶೀಲ ಆಡಳಿತಗಾರನೆಂಬುದು. ಅವನ ನಾಯಕ ಪಾತ್ರದ ವ್ಯಕ್ತಿತ್ವವೇ ಅತ್ಯಂತ ರೋಚಕವಾದುದು ಮತ್ತು ವರ್ಣರಂಜಿತವಾದುದು. ಆದರೆ, ಈ ರೀತಿಯ ವರ್ಣಮಯ ವ್ಯಕ್ತಿತ್ವವನ್ನು ಮದಕರಿ ನಾಯಕನಲ್ಲಾಗಲಿ, ಆ ಕಾಲದ ಇಂಡಿಯಾದ ಅನ್ಯ ದೊರೆಗಳಲ್ಲಾಗಲಿ ಕಾಣಲಾಗದು.

ಜನಪದ ಸಾಹಿತ್ಯದಲ್ಲಿ ಟೀಪು ನಿಜವಾದ ಜನನಾಯಕನೇ ಆಗಿದ್ದಾನೆ. ಜನಪದ ಸಾಹಿತ್ಯವು ಸದಾ ನಂಬಿಕೆಗೆ ಅರ್ಹವಾದ ಸಾಹಿತ್ಯ. ಚರಿತ್ರೆಗಾರರಂತೆ ಜನಪದರು ಪೂರ್ವಗ್ರಹಪೀಡಿತರೂ ಅಲ್ಲ, ಜನಪದ ಸಾಹಿತ್ಯವನ್ನು ವಿಕಾರಗೊಳಿಸುವ ವೈದಿಕ ಪಂಡಿತರ ವಿಕಾರಬುದ್ಧಿಯೂ ಅಲ್ಲಿ ನಡೆಯುವುದಿಲ್ಲ. ಈ ಹಿನ್ನೆಲೆಯಲ್ಲಿ ಲಿಂಗದೇವರು ಹಳೆಮನೆ ಅವರು ಸಂಗ್ರಹಿಸಿ ಪ್ರಕಟಿಸಿರುವ "ಧೀರ ಟೀಪುವಿನ ಲಾವಣಿಗಳು" ಎಂಬ ಸಂಕಲನ ಇಲ್ಲಿ ಉದ್ಧರಣೀಯ. ಹಳೆಮನೆ ಅವರು ಹೈದರನನ್ನು ಕುರಿತು ನಾಟಕವನ್ನು ರಚಿಸಿರುವುದು ಗಮನಾರ್ಹ. ಅಂದರೆ, ಹೈದರ್ ಮತ್ತು ಟೀಪುವನ್ನು ಕುರಿತಂತೆ ಸಾಕಷ್ಟು ಅಧ್ಯಯನವನ್ನೇ ಅವರು ಕೈಗೊಂಡಿದ್ದಾರೆ ಎಂಬುದರಲ್ಲಿ ಅನುಮಾನವಿರಲಾರದು.

ಹಳೆಮನೆ ಅವರು ಸಂಗ್ರಹಿಸಿರುವ ಹೈದರ್ ಮತ್ತು ಟೀಪುವನ್ನು ಕುರಿತ ಲಾವಣಿಗಳಲ್ಲಿ ಒಂದು ಅಥವಾ ಎರಡು ಗದ್ಯರೂಪಗಳನ್ನು, ಸದ್ಯ ಪರಿಶೀಲಿಸಬಹುದಾಗಿದೆ. "ಹೈದರನ ಜಾತಿಸಮನ್ವಯತೆಯ ಬಗೆಗೆ ಅನೇಕ ಕಥೆಗಳು ಮೈಸೂರಿನ ಸುತ್ತಮುತ್ತಾ ಇವೆ. ಅವರಲ್ಲಿ ಒಂದು ಕಥೆ ಹೀಗಿದೆ : ಒಮ್ಮೆ ಗಣೇಶ ಚತುರ್ಥಿಯಂದು ಹಿಂದೂಗಳು ಶ್ರೀರಂಗಪಟ್ಟಣದ ರಾಜಬೀದಿಯಲ್ಲಿ ಗಣೇಶನ ವಿಗ್ರಹವನ್ನು ಕೊಂಡೊಯ್ಯುತ್ತಿದ್ದರು. ಗಣೇಶನ ಮೆರವಣಿಗೆ ಎಂದ ಮೇಲೆ. ಬಾಜಾ. ಬಜಂತ್ರಿ. ವಾದ್ಯ. ಘೋಷಣೆಗಳು ಇದ್ದದ್ದೆ. ಮೆರವಣಿಗೆ ರಾಜ್ಯದ ಮೌಲ್ವಿಯ ಮನೆಯ ಮುಂದೆ ಹಾದು ಹೋಗುತ್ತಿತ್ತು. ಮೆರವಣಿಗೆಯ ಗಲಾಟೆ ಮೌಲ್ವಿಯ ಕಿವಿಗೆ ಬಿತ್ತು. ಅದೇನೆಂದು ನೋಡಿಕೊಂಡು ಬರುವಂತೆ ತನ್ನ ಆಳನ್ನು ಅಟ್ಟಿದ. ಅದನ್ನು ನೋಡಿ ಬಂದ ಆಳು, ಅದು ಹಿಂದೂಗಳ ಗಣಪತಿ ಮೆರವಣಿಗೆ

ಎಂದು ತಿಳಿಸಿದ. ಇದನ್ನು ಕೇಳಿ ಕ್ರುದ್ಧನಾದ ಮೌಲ್ವಿ, ಅಲ್ಲಾನ ರಾಜ್ಯದಲ್ಲಿ ಕಾಫೀರರ ಮೆರವಣಿಗೆಯೆ? ಎಂದು, ತನ್ನ ಸೈನಿಕರನ್ನು ಕರೆದು, ಕೂಡಲೆ ಮೆರವಣಿಗೆಯನ್ನು ಚದುರಿಸಲು ಹೇಳಿದ. ಅದರಂತೆ ಸೈನಿಕರು ಮೆರವಣಿಗೆಗಾರರನ್ನು ಚದುರಿಸಿ ಓಡಿಸಿದರು. ಮಾರನೆಯ ದಿನ ಮೆರವಣಿಗೆಯ ಮುಂದಾಳುಗಳು ದೂರು ತೆಗೆದುಕೊಂಡು ಹೈದರನ ಹತ್ತಿರ ಹೋದರು. ಹೈದರ್ ಅವರ ದೂರು ಆಲಿಸಿ, ಮೌಲ್ವಿಗೆ ಬರುವಂತೆ ಹೇಳಿ ಕಳುಹಿಸಿದ. ಮೌಲ್ವಿಯನ್ನು ಕುರಿತು 'ನೀವು ಮೆರವಣಿಗೆಯನ್ನು ಚದುರಿಸಿದ್ದು ನಿಜವೆ?' ಎಂದು ಪ್ರಶ್ನಿಸಿದ. ಅದಕ್ಕೆ ಮೌಲ್ವಿ 'ಹೌದು' ಎಂದ. 'ಯಾಕೆ ಹಾಗೆ ಮಾಡಿದಿರಿ?' ಎಂದು ಹೈದರ್ ಕೇಳಿದ. ಅದಕ್ಕೆ ಮೌಲ್ವಿ 'ಮುಸ್ಲಿಂ ರಾಜ್ಯದ ರಾಜಬೀದಿಯಲ್ಲಿ ಕಾಫಿರರು ತಮ್ಮ ಮೆರವಣಿಗೆ ತೆಗೆದುಕೊಂಡು ಹೋಗಲು ಹಕ್ಕಿಲ್ಲ' ಎಂದು ಉತ್ತರಿಸಿದ. ಆಗ ಹೈದರ್ 'ಇದನ್ನು ಮುಸ್ಲಿಂ ರಾಜ್ಯವೆಂದು ನಿಮಗೆ ಹೇಳಿದವರಾರು?' ಎಂದು ಮತ್ತೆ ಪ್ರಶ್ನಿಸಿದ. ಅದಕ್ಕೆ ಮೌಲ್ವಿ 'ನನಗೆ ಯಾರೂ ಹೇಳಬೇಕಾಗಿಲ್ಲ. ಇಲ್ಲಿ ಮುಸ್ಲಿಂ ದೊರೆ ಆಳುತ್ತಿದ್ದಾನೆ. ಅದಕ್ಕೆ ಇದು ಮುಸ್ಲಿಂ ರಾಜ್ಯ' ಎಂದು ತಿಳಿಸಿದ. ಆಗ ಹೈದರ್ 'ಇಲ್ಲಿ ಕೇಳಿ. ಇದು ಮುಸ್ಲಿಂ ರಾಜ್ಯವೂ ಅಲ್ಲ. ಹಿಂದೂ ರಾಜ್ಯವೂ ಅಲ್ಲ. ಇದು ಮೈಸೂರು ರಾಜ್ಯ. ಇಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನ ಸ್ವಾತಂತ್ರ್ಯವಿದೆ. ಇಲ್ಲಿ ಯಾರು ಬೇಕಾದರೂ ತಮ್ಮ ಧಾರ್ಮಿಕ ಆಚರಣೆಗಳನ್ನು ತಮಗಿಷ್ಟ ಬಂದಂತೆ ಆಚರಿಸಿಕೊಳ್ಳಬಹುದು. ಇನ್ನು ಮೇಲೆ ನೀವು ಅವರ ತಂಟೆಗೆ ಹೋಗಕೂಡದು' ಎಂದು ಆಜ್ಞಾಪಿಸಿದ. ಇದರಿಂದ ವ್ಯಗ್ರನಾದ ಮೌಲ್ವಿ 'ಇಂಥ ಕಾಫಿರರ ರಾಜ್ಯದಲ್ಲಿ ಇರಲು ನಾನು ಇಷ್ಟಪಡುವುದಿಲ್ಲ' ಎಂದು ನುಡಿದ. ಆ ಕೂಡಲೆ ಹೈದರ್ ತನ್ನ ಸೇನಾಧಿಪತಿಯನ್ನು ಕರೆದು 'ಮೌಲ್ವಿ ಅವರಿಗೆ ಸೂಕ್ತವಾದ ಎಲ್ಲ ಗೌರವವನ್ನು ಸಲ್ಲಿಸಿ, ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ, ನಮ್ಮ ರಾಜ್ಯದ ಗಡಿ ದಾಟಿಸಿ ಬಾ' ಎಂದು ಆಜ್ಞಾಪಿಸಿದನಂತೆ." ೧

ಈ ಉದ್ಧರಣೆಯಲ್ಲಿ ಅಡಗಿರುವ ಕೆಲವು ಅರ್ಥ ಮತ್ತು ತಾತ್ಪರ್ಯಗಳನ್ನು ಪ್ರಾಯಶಃ ಪ್ರತ್ಯೇಕವಾಗಿಯೇ ಹೇಳಬೇಕೆನಿಸುತ್ತದೆ. ಮೌಲ್ವಿಯು ಗಣಪತಿ ಮೆರವಣಿಗೆ ಚದುರಿಸಿದ್ದನ್ನು ಸಮರ್ಥಿಸುವುದು ಹೈದರ್‌ಗೆ ಸುಲಭವಾಗಿತ್ತು. ಆದರೆ, ಅವನು ಹಾಗೆ ಮಾಡಲಿಲ್ಲ. ಬದಲಾಗಿ ಮೌಲ್ವಿಗೆ ಬುದ್ಧಿ ಹೇಳಿದ. ಹೈದರ್‌ನ ಬುದ್ಧಿಮಾತನ್ನು ಮೌಲ್ವಿ ನಿರಾಕರಿಸಿದ. ತತ್ಪರಿಣಾಮವಾಗಿ, ಹೈದರ್ ಮೌಲ್ವಿಯನ್ನು ಮೈಸೂರು ರಾಜ್ಯದ ಗಡಿಯಾಚೆಗೆ ಕಳುಹಿಸಿದ. ಈ ಘಟನೆಯೇ ಅತ್ಯಂತ ಜ್ವಲಂತವಾದುದು. ಇಂದಿನ ಸಂವಿಧಾನಾತ್ಮಕ ಸಮಾಜದಲ್ಲಿ ಕೂಡ ಈ ರೀತಿಯ ಧಾರ್ಮಿಕ ದುರಹಂಕಾರವನ್ನು ದಮನ ಮಾಡುವುದು ಕಷ್ಟ. ಹಾಗೆ ನೋಡಿದರೆ, ಹೈದರ್ ಮೌಲ್ವಿಯ ಧಾರ್ಮಿಕ ದುರಹಂಕಾರವನ್ನು ಸುಮ್ಮನೆ ಸಮರ್ಥಿಸಿ ಬಿಡಬಹುದಿತ್ತು. ಇದು ಹಿಂದೂ ರಾಜ್ಯವಲ್ಲ, ಬದಲಾಗಿ ಮುಸ್ಲಿಂ ರಾಜ್ಯ ಎಂತಲೂ ಹೈದರ್ ಹೇಳಬಹುದಿತ್ತು. ಬದಲಾಗಿ, ಇದು ಮೈಸೂರು ರಾಜ್ಯವೆಂದೇ ಘೋಷಿಸಿದ. ಇಂತಹ ಒಬ್ಬ ನೈಜ ಜನನಾಯಕ ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಒಂದು ನಾಟಕದ ನಾಯಕನೇ ಆಗಿದ್ದಾನೆ. ಅದರಲ್ಲಿ ಆಶ್ಚರ್ಯವೇನೂ ಇಲ್ಲ. ನಾಯಕ ವ್ಯಕ್ತಿತ್ವ ನಾಯಕನಲ್ಲೇ ಇದ್ದಾಗ ಮಾತ್ರ ನಾಟಕದಲ್ಲಿ ನಾಯಕನ ಪಾತ್ರಸೃಷ್ಟಿ ಸಾಧ್ಯ ಮತ್ತು ಅರ್ಥಪೂರ್ಣ. ಅಂತಹ ನಾಯಕಗುಣಶ್ರೇಷ್ಠತೆ ಹೈದರ್‌ನಲ್ಲಿ ಧಾರಾಳವಾಗಿದೆ.

ಇದೇ ರೀತಿಯ ಇನ್ನೊಂದು ಲಾವಣಿಯಲ್ಲಿ ಸುಲ್ತಾನ್ ಟೀಪುವಿನ ನಾಯಕ ಪಾತ್ರದ ಎಪಿಸೋಡ್‌ನ ಚಿತ್ರಣವಿದೆ. "ಟೀಪು ಸುಲ್ತಾನನ ಜೀಳಿನ ಹಾಡು" ಲಾವಣಿಯನ್ನು

ಲಂಕೇಶ್ ಮತ್ತು ಶಿವಪ್ರಕಾಶರ ನಾಟಕಗಳ ಪ್ರದರ್ಶನಕ್ಕೆ ಆ ರೀತಿಯ ಬದಲಾವಣೆಗಳ ಅಥವಾ ಮಾರ್ಪಾಟುಗಳ ಅಗತ್ಯವಿಲ್ಲ. ಗೌತಮ ಬುದ್ಧನ ಅಜ್ಞಾತ ಕಥಾವಸ್ತುವನ್ನು ಆಧರಿಸಿದ ನನ್ನ "ಜಲ" ನಾಟಕದ ರಚನೆಯ ಸಂದರ್ಭದಲ್ಲಾಗಲಿ ಅಥವಾ ಗಾಂಧಿ ಮತ್ತು ಅಂಬೇಡ್ಕರರ ನಡುವೆ ಘಟಿಸಿದ ಒಂದು ತೀವ್ರ ಘರ್ಷಣೆಯ ಐತಿಹಾಸಿಕ ಘಟನೆಯನ್ನು ಆಧರಿಸಿದ "ಯುಗಾಂತರ" ಎಂಬ ನನ್ನ ಇನ್ನೊಂದು ನಾಟಕ ರಚನೆಯ ಸಂದರ್ಭದಲ್ಲಾಗಲಿ, "ಗಾಂಧಿ ವರ್ಸಸ್ ಗಾಂಧಿ" ಮತ್ತು "ಗಾಂಧಿ ವರ್ಸಸ್ ಅಂಬೇಡ್ಕರ್" ಪ್ರದರ್ಶನ ನಾಟಕಗಳು ನನಗೆ ಸರಿಯೆನಿಸಲಿಲ್ಲ. ನಮ್ಮೆದುರಿಗೇ ಇರುವ ನಮ್ಮ ಚರಿತ್ರೆಯ ನೈಜ ರೂಪದ ಪ್ರದರ್ಶನದ ಹಿನ್ನೆಲೆಯಲ್ಲಿ "ಗಾಂಧಿ ವರ್ಸಸ್ ಗಾಂಧಿ" ಮತ್ತು "ಗಾಂಧಿ ವರ್ಸಸ್ ಅಂಬೇಡ್ಕರ್" ನಾಟಕಗಳಿಗೆ ಅತ್ಯಂತ ಗಂಭೀರವಾದ ಮಿತಿಗಳೇ ಸೃಷ್ಟಿಯಾಗುತ್ತವೆ. ಸುಲ್ತಾನ್ ಟೀಪುವೇ ಆಗಲಿ, ಮೀರ್ ಸಾದಿಖ್‌ನೇ ಆಗಲಿ, ಗಾಂಧಿ ಮತ್ತು ಅಂಬೇಡ್ಕರರೇ ಆಗಲಿ, ಸಂಬಂಧಪಟ್ಟ ಪಾತ್ರಧಾರಿಗಳು ರಂಗದ ಮೇಲೆ ಬಂದು, ಅಂಗಪ್ರದರ್ಶನ ಮತ್ತು ಸಂಭಾಷಣೆ, ಅದೂ ಅತ್ಯಂತ ಸಂಕ್ಷಿಪ್ತ ಸಂಭಾಷಣೆಗಳಲ್ಲಿ ತೊಡಗಿದಾಗ ಮಾತ್ರ, ನಾಟಕದ ವಸ್ತು ಪ್ರೇಕ್ಷಕನಿಗೆ ಸಂವಹನವಾಗುವುದು. ಅಂದರೆ, ಇದು ವಾಚನಾಭಿರುಚಿಗೆ ಕೆಲವೊಮ್ಮೆ ವ್ಯತಿರಿಕ್ತವಾದುದು ಮತ್ತು ರಂಗಪ್ರದರ್ಶನ ತಂತ್ರಗಳಿಗೆ ಮಾತ್ರ ಸೀಮಿತವಾದುದು. ಅಥವಾ, ಯಾವುದೇ ಒಂದು ನಾಟಕ, ರಂಗದ ಮೇಲೆ ಪ್ರಯೋಗವಾದ ಕಾರಣಕ್ಕಾಗಿಯೇ ಅದೊಂದು ಯಶಸ್ವಿ ಕಲಾಕೃತಿ ಎನ್ನಲಾಗದು.

ಅದೇನೇ ಇದ್ದರೂ, ಸುಲ್ತಾನ್ ಟೀಪು ಪಾತ್ರ ಚಿತ್ರಣದಲ್ಲಿ ಗಿರೀಶ ಕಾರ್ನಾಡ ಮತ್ತು ಶಿವಪ್ರಕಾಶರ ನಾಟಕಗಳು ತಮ್ಮ ಮಿತಿಗಳಲ್ಲೂ ಸಾಕಷ್ಟು ಪರಿಣಾಮ ಬೀರುತ್ತವೆ. ಕಂಪನಿ ನಾಟಕಗಳು ನೀಡುವ ವಿವರಗಳನ್ನು ಈ ನಾಟಕಗಳಲ್ಲಿ ನಿರೀಕ್ಷಿಸಲಾಗದು, ಹಾಗೆಂದು ಆಧುನಿಕ ಸಿನಿಮಾಗಳ ದೃಶ್ಯಗಳ ವೈಭವವನ್ನೂ ಇಲ್ಲಿ ನಿರೀಕ್ಷಿಸಲಾಗದು. ಆದರೂ, ಸುಲ್ತಾನ್ ಟೀಪುವಿನ ಅಗಾಧ ವ್ಯಕ್ತಿತ್ವವನ್ನೂ, ಅವನು ತೋರಿದ ಅಪ್ರತಿಮ ದೇಶಪ್ರೇಮವನ್ನೂ, ಧಾರ್ಮಿಕ ಸೌಹಾರ್ದದ ಪರಿಕಲ್ಪನೆಯನ್ನೂ, ಕಾರ್ನಾಡರು ಮತ್ತು ಶಿವಪ್ರಕಾಶರ ನಾಟಕಗಳು ಸಾಕಷ್ಟು ಚೆನ್ನಾಗಿಯೇ ಪ್ರದರ್ಶಿಸುತ್ತವೆ. ಅಲ್ಲಿನ ಅನ್ಯ ಪಾತ್ರಗಳು ಕೂಡ ಸುಲ್ತಾನ್ ಟೀಪುವಿನ ಗತ ಇತಿಹಾಸದ ಪರಿಸ್ಥಿತಿಗಳನ್ನು ಜೀವ ತುಂಬಿ ಪ್ರದರ್ಶಿಸಲು ಯತ್ನಿಸುತ್ತವೆ. ಆದರೂ, ಆ ನಾಟಕಗಳ ರಂಗಪ್ರದರ್ಶನವನ್ನು ವಿಮರ್ಶಿಸುವ ವಿಮರ್ಶೆಯೇ ಬೇರೆ. ಅದರ ಸಾಹಿತ್ಯಕ ಕಲಾಕೃತಿಯನ್ನು ವಿಮರ್ಶಿಸುವ ವಿಮರ್ಶೆಯೇ ಬೇರೆ ಎಂಬುದನ್ನು ಮರೆಯುವಂತಿಲ್ಲ.

ಇನ್ನು ಕನ್ನಡದಲ್ಲಿ ಸುಲ್ತಾನ್ ಟೀಪುವನ್ನು ಕುರಿತ ಅನ್ಯ ಬರೆಹಗಳ ಚರ್ಚೆಯಲ್ಲಿ ತೊಡಗುವ ಮೊದಲು, ಇನ್ನೊಂದು ಮುಖ್ಯಾಂಶ. ಸುಲ್ತಾನ್ ಟೀಪುವನ್ನು 'ಮೈಸೂರು ಹುಲಿ' ಎಂಬ ಒಂದು ಪ್ರಸಿದ್ಧ ವಿಶೇಷಣದಿಂದಲೂ ಸಂಬೋಧಿಸುವುದು ಉಂಟು. ಈ ಸಂಬೋಧನೆಯ ಹಿಂದೆ ಅವನ ಪರಾಕ್ರಮವನ್ನು ಮೆಚ್ಚುವ ಉಪಮಾ ಸಂಭ್ರಮವಿದೆ ಎಂಬುದೇನೋ ಇದರಿಂದ ಸರಳವಾಗಿಯೇ ವೇದ್ಯವಾಗುತ್ತದೆ. ಆದರೆ, ಈ ಮೈಸೂರು ಹುಲಿ ಎಂಬ ಉಪಮೆಯದಲ್ಲಿರುವ 'ಹುಲಿ' ಎಂಬ ನಾಮವಿಶೇಷಣ ಟೀಪುವಿನ ಹೆಸರಿನೊಡನೆ ಬೆಸೆದುಕೊಂಡು ಹೇಗೆ ನಡೆದುಬಂದಿತು ಎಂಬುದನ್ನು ಮಾತ್ರ ಚರಿತ್ರೆಗಾರರೂ ಹೇಳಿದಂತಿಲ್ಲ, ಬಹಳ ಜನ ಸೃಜನಶೀಲ ಲೇಖಕರೂ ಹೇಳಿದಂತಿಲ್ಲ. ಬಹಳವೆಂದರೆ,

ಸುಲ್ತಾನ್ ಟೀಪು ಒಂದು ಜೀವಂತ ಹುಲಿಯೊಡನೆ ಹೋರಾಡಿದನೆಂಬ ಕಾರಣಕ್ಕಾಗಿ ಅವನನ್ನು 'ಮೈಸೂರು ಹುಲಿ' ಎಂಬುದಾಗಿ ಕರೆಯಲಾಯಿತು ಎಂಬ ಒಂದು ಸಾಮಾನ್ಯ ಗ್ರಹಿಕೆಯನ್ನು ಬಿಟ್ಟರೆ, ಸುಲ್ತಾನ್ ಟೀಪು ಹಾಗೆ ಜೀವಂತ ಹುಲಿಯೊಡನೆ ಯುದ್ಧ ಮಾಡಲು ಮೂಲ ಕಾರಣವೇನು? ಮತ್ತು ಹಿಂದಿನ ಪ್ರೇರಣೆ ಏನೆಂಬ ಬಗ್ಗೆ ನನ್ನ "ಸೂರಪ್ಪ" ಕಾದಂಬರಿಯಲ್ಲಿನ ಒಂದೇ ಒಂದು ವಾಸ್ತವಿಕ ಎಪಿಸೋಡ್ ಬಿಟ್ಟರೆ ಟೀಪುವನ್ನು ಕುರಿತ ಅನ್ಯ ಯಾವುದೇ ಬರವಣಿಗೆಯಲ್ಲೂ ಆ ಬಗ್ಗೆ ಪ್ರಸ್ತಾಪವಿರುವುದಿಲ್ಲ.

ಇನ್ನು "ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪು" ಎಂಬ ವಿಷಯದ ಕುರಿತ ಮೂರನೆಯ ಅಂಶವಾದ ವೈಚಾರಿಕ ಬರವಣಿಗೆಯನ್ನು ಗಮನಿಸಬಹುದಾಗಿದೆ. ಆ ಕಾಲದ ಪುರೋಹಿತ ವರ್ಗ ಸುಲ್ತಾನ್ ಟೀಪುವಿಗೆ ವಿರುದ್ಧವಾಗಿದ್ದುದಕ್ಕೆ ಮಹತ್ವದ ನಾಲ್ಕು ಅಥವಾ ಐದು ಕಾರಣಗಳನ್ನು ಆ ಕುರಿತ ವೈಚಾರಿಕ ಬರವಣಿಗೆಗಳಲ್ಲಿ ದಾಖಲಿಸಲಾಗಿದೆ: (೧) ಟೀಪು ಜಾರಿಗೆ ತಂದ ಜೀತಪದ್ಧತಿಯ ರದ್ಧತಿ, (೨) ಜಾಗೀರಿ ಮತ್ತು ಜಮೀನ್ದಾರಿ ಪದ್ಧತಿಗಳ ರದ್ದತಿ, (೩) ಅಸ್ಪೃಶ್ಯರು ಸೈನ್ಯಕ್ಕೆ ಸೇರಲು ಅವರಿಗೆ ಅವಕಾಶ, (೪) ರೈತನಿಗೆ ದುಡಿಮೆಯ ಫಲ, (೫) ಸರ್ವರ ಶಿಕ್ಷಣಕ್ಕೆ ಆದ್ಯತೆ. (೬) ಇವೆಲ್ಲಕ್ಕಿಂತಲೂ ಮಿಗಿಲಾದುದು, ಮಹಿಳಾ ಸ್ವಾತಂತ್ರ್ಯಕ್ಕೆ ಟೀಪು ನೀಡಿದ ಆದ್ಯತೆ. ಈ ಬಗೆಗಿನ ಒಂದು ಉದ್ಧರಣೆ ಕೂಡ ಹೀಗಿದೆ : "*ಟೀಪು ಹಾಗೂ ಹೈದರಾಲಿ ಇಬ್ಬರೂ ಸಹ, ಮಹಿಳೆಯರು ಮೂಢಸಂಪ್ರದಾಯದಡಿ ಅನುಭವಿಸುತ್ತಿದ್ದ ಶೋಷಣೆಯ ಬಗ್ಗೆ ಸಂವೇದನಾಶೀಲರಾಗಿದ್ದರು. ಈಗಿನ ಆಧುನಿಕ ಮಹಿಳಾ ವಿಮೋಚನಪ್ರಜ್ಞೆ ಅವರಿಗಿರಲಿಲ್ಲವಾದರೂ ಅವರಿಗಿದ್ದ ಐತಿಹಾಸಿಕ ಕಾಲಘಟ್ಟದಲ್ಲಿ, ಮೂಢಸಂಪ್ರದಾಯ ಗಳಿಂದ ಮಹಿಳೆಯರ ಮೇಲಿನ ಶೋಷಣೆಯನ್ನು ತಡೆಗಟ್ಟಲು ಸಾಕಷ್ಟು ಪ್ರಯತ್ನಿಸಿದರು. ಉದಾಹರಣೆಗೆ, ಕೇರಳದ ಉತ್ತರ ಮಲಬಾರ್ ಪ್ರಾಂತದಲ್ಲಿ ಮಹಿಳೆಯರು ಎದೆಯ ಮೇಲೆ ಬಟ್ಟೆ ಹಾಕುವಂತಿರಲಿಲ್ಲ. ಅದರ ವಿರುದ್ಧ ಕ್ರಮ ಕೈಗೊಂಡು, ಸುಲ್ತಾನ್ ಟೀಪು ಹೊರಡಿಸಿದ ನಿರೂಪವೊಂದರಲ್ಲಿ 'ಮಹಿಳೆಯರು ಎದೆಯ ಮೇಲೆ ಬಟ್ಟೆ ಹಾಕಲಾರದ ಅನಿಷ್ಟ ಸಂಪ್ರದಾಯ ಸಮಾಜಕ್ಕೆ ಒಂದು ಕಳಂಕ. ಒಂದು ವೇಳೆ ಬಲಪ್ರಯೋಗದಿಂದ ಮಹಿಳೆಯನ್ನು ಈ ಸ್ಥಿತಿಗೆ ದೂಡಿದ್ದರೆ, ಅಂಥವರ ವಿರುದ್ಧ ಕ್ರಮಕೈಗೊಳ್ಳತಕ್ಕದ್ದು' ಎಂದು ಆದೇಶಿಸಿದ್ದ.*"

"ಕರ್ನಾಟಕ ವಿಮೋಚನಾ ರಂಗ"ದವರು ಪ್ರಕಟಿಸಿರುವ ಕೇವಲ ನಲವತ್ತನಾಲ್ಕು ಪುಟಗಳ ಈ ಕಿರುಪುಸ್ತಕವು, ಸುಲ್ತಾನ್ ಟೀಪು ಆಡಳಿತ ಕಾಲದ ಹಲವಾರು ಕ್ರಾಂತಿಕಾರಿ ಹಾಗೂ ಡಾಕ್ಯುಮೆಂಟರಿ ಮಾಹಿತಿಗಳನ್ನೇ ಒದಗಿಸುತ್ತದೆ. ಮೂಲತಃ ಲೇಖಕನೂ ಆಗಿದ್ದ ಟೀಪೂ. "ಟೀಪು ಕನಸುಗಳು" ಎಂಬ ಅವನ ಪುಸ್ತಕವು ಸುಮಾರು ಮೂವತ್ತೆಂಟು ಲೇಖನಗಳನ್ನು ಒಳಗೊಂಡಿದ್ದು, ಆ ಲೇಖನಗಳಲ್ಲಿ ಮೈಸೂರು ರಾಜ್ಯವನ್ನು ಸಂಪದ್ಭರಿತ ವನ್ನಾಗಿಯೂ, ಆಧುನಿಕ ಸಾಮ್ರಾಜ್ಯವನ್ನಾಗಿಯೂ ಕಟ್ಟುವುದು ಅವನ ಪರಮ ಧ್ಯೇಯವಾಗಿತ್ತು ಎಂಬುದಾಗಿ ತಿಳಿದುಬರುತ್ತದೆ. ಗಿರೀಶ ಕಾರ್ನಾಡರ "ಟಿಪೂ ಸುಲ್ತಾನ ಕಂಡ ಕನಸು" ಎಂಬ ಪ್ರಸಿದ್ಧ ನಾಟಕಕ್ಕೆ "ಟೀಪುವಿನ ಕನಸುಗಳು" ಎಂಬ ಈ ಪುಸ್ತಕ ಮೂಲ ಆಕರಗ್ರಂಥವೇ ಆಗಿದೆ ಎಂಬುದು ತುಂಬಾ ಕುತೂಹಲದ ಸಂಗತಿಯೇ ಸರಿ. ಆದರೆ, ಕಾರ್ನಾಡರ ನಾಟಕವು ಟೀಪುವಿನ ಕೇವಲ ಆರ್ಥಿಕ ಅಭಿವೃದ್ಧಿಯನ್ನಷ್ಟೇ

ಕೇಂದ್ರಪ್ರಜ್ಞೆಯನ್ನಾಗಿಸಿಕೊಂಡಿದೆ. ಅದೇ ಕೇರಳದ ಮಹಿಳೆಯರು ಸೊಂಟದ ಕೆಳಗೆ ಕೇವಲ ಒಂದು ಸೀರೆ ತುಂಡನ್ನು ಮಾತ್ರ ಬಿಗಿದುಕೊಳ್ಳಬೇಕೇ ಹೊರತು, ಅವರು ಎದೆಯ ಮೇಲೆ ಬಟ್ಟೆ ಹಾಕುವಂತಿಲ್ಲವೆಂಬ ಅನಿಷ್ಟ ಪದ್ಧತಿಗಳ ವಿರುದ್ಧದ ಟೀಪುವಿನ ಕ್ರಾಂತಿಕಾರಿ ಬದಲಾವಣೆಗಳನ್ನಾಗಲಿ, ಅಥವಾ, ಜೀತಪದ್ಧತಿಯ ರದ್ದತಿಯಂಥ ಸಾಮಾಜಿಕ ಬದಲಾವಣೆಯಂತಹ ಟೀಪುವಿನ ಚಿಂತನೆಗಳನ್ನಾಗಲಿ, ನಾಟಕವನ್ನಾಗಿ ಮಾಡುವುದು ಕಾರ್ನಾಡರಿಗೆ ಸಾಧ್ಯವಾಗಿಲ್ಲ. ಏಕೆಂದರೆ, ಅವೆಲ್ಲ ಟೀಪು ಜೀವನದ ಮತ್ತು ಆತನ ಆಡಳಿತ ಕಾಲದ ಕಟುವಾಸ್ತವ ಸತ್ಯಗಳು. ಆ ರೀತಿಯ ಕ್ರಾಂತಿಕಾರಿ ಆಲೋಚನೆಗಳನ್ನೆಲ್ಲ ಇನ್ನೂ ಹಸ್ತಪ್ರತಿಯ ಸ್ಥಿತಿಯಲ್ಲಿರುವ "ಕ್ರಾಂತಿಕಾರಿ ಸುಲ್ತಾನ್ ಟೀಪು" ಎಂಬ ನನ್ನ ಇನ್ನೊಂದು ನಾಟಕದಲ್ಲಿ ಚಿತ್ರಿಸಲು ಪ್ರಯತ್ನಿಸಲಾಗಿದೆ.

ಹಾಗೆ ನೋಡಿದರೆ, ಟೀಪು ಒಬ್ಬ ಮತಾಂಧ ದೊರೆ ಎಂದು ಮೊದಲು ಅಪಪ್ರಚಾರ ವನ್ನು ಆರಂಭಿಸಿದವರೇ ಬ್ರಿಟಿಷರು. ಅದೇ ವೇಳೆಯಲ್ಲಿ, ವೈದಿಕ ಧರ್ಮದ ಪುರೋಹಿತ ವರ್ಗದವರಿಗೆ ಬೇಕಾಗಿದ್ದುದೂ ಅದೇ. ಎರಡು ಯುದ್ಧಗಳಲ್ಲಿ ಟೀಪುವಿಗೆ ಸೋತು ಹೇಳಲಸಾಧ್ಯವೆಂಬಷ್ಟು ಮುಖಭಂಗಿತರಾಗಿದ್ದ ಬ್ರಿಟಿಷರು, ಸುಲ್ತಾನ್ ಟೀಪು ವಿರುದ್ಧ ಪುರೋಹಿತ ವರ್ಗದವರನ್ನು ಮೊದಲು ಹೇಗೆ ಎತ್ತಿ ಕಟ್ಟಿದರು ಎಂಬ ಸಂಗತಿಯೇ ಸೃಜನಶೀಲ ಸಾಹಿತ್ಯದಲ್ಲಿ ಒಂದು ಅದ್ಭುತವಾದ ಕಥಾವಸ್ತು ಎಂದೆನಿಸಲು ಸಾಧ್ಯವಿದೆ. ಆದರೆ, ಅಂತಹ ಅಸಲಿ ಸೃಷ್ಟ್ಯಾತ್ಮಕ ಕೃತಿಗಳು ಟೀಪು ಬಗ್ಗೆ ಈ ವರೆಗೂ ರಚನೆಗೊಂಡಂತೆ ಕಾಣುವುದಿಲ್ಲ. ಮರಾಠರು, ಹೈದರಾಬಾದ್‌ನ ನಿಜಾಮರು ಮತ್ತು ಉತ್ತರ ಇಂಡಿಯಾದ ರಾಜಮಹಾರಾಜರ ವಿರುದ್ಧ ಬ್ರಿಟಿಷರು ನಡೆಸಿದ ರಾಜಕೀಯ ಪಿತೂರಿಗಳೇ ಬೇರೆ. ಅದೇ ಸುಲ್ತಾನ್ ಟೀಪುವಿನ ಮೈಸೂರು ರಾಜ್ಯದಲ್ಲಿ ಅವನ ಕೆಲವು ಆಂತರಿಕ ವೈರಿಗಳೇ ಆಗಿದ್ದಂತಹ, ಮೀರ್ ಸಾದಿಖ್, ತಿರುಮಲರಾವ್ ಮತ್ತು ನಾರಾಯಣರಾವ್‌ಸಂಥವರನ್ನು ಖರೀದಿಸಿದ ಅದೇ ಬ್ರಿಟಿಷರು ಇಲ್ಲಿ ನಡೆಸಿದ ರಾಜಕೀಯ ಪಿತೂರಿಗಳೇ ಬೇರೆ.

ಇನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಲ್ತಾನ್ ಟೀಪುವನ್ನು ಕುರಿತಂತೆ ಇದೇ ರೀತಿಯ ಚರ್ಚಾಸ್ಪದವೆನಿಸುವ ಇನ್ನೆರಡು ಕನ್ನಡ ಗ್ರಂಥಗಳೆಂದರೆ, ಒಂದು ಕೋ. ಚೆನ್ನಬಸಪ್ಪನವರು ಸಂಗ್ರಹಿಸಿ ಸಂಪಾದಿಸಿರುವ "ಹಿಂದೂಧರ್ಮರಕ್ಷಕ ಟೀಪೂ ಸುಲ್ತಾನ್" ಎಂಬ ಒಂದು ಕಿರುಹೊತ್ತಿಗೆ ಗಮನಾರ್ಹವಾದುದು. ಈ ಪುಸ್ತಕವೇನೋ ಸಣ್ಣದು. ಆದರೆ, ಅದರ ವಿಷಯ ಮತ್ತು ಆ ಕುರಿತ ವಿಶ್ಲೇಷಣೆ ಅತ್ಯಂತ ಗಂಭೀರವಾದುದು. ಹಿಂದೂಧರ್ಮದ ಹೆಸರಿನಲ್ಲಿ ಸುಲ್ತಾನ್ ಟೀಪುವನ್ನು ಟೀಕಿಸುವ ಮಡಿವಂತರ ಧರ್ಮದ ಮೂಲಭೂತವಾದಿ ಮೂರ್ಖರ ಮುಖಕ್ಕೆ ರಾಚುವಷ್ಟು ಅಧಿಕೃತ ಮಾಹಿತಿಗಳೇ ಈ ಕಿರುಪುಸ್ತಕದಲ್ಲಿ ತುಂಬಿವೆ. ಮೂಲತಃ ನ್ಯಾಯಾಧೀಶರಾದ ಕೋ.ಚೆನ್ನಬಸಪ್ಪನವರು, ಹಿಂದೂಧರ್ಮವನ್ನು ಕುರಿತ ಸುಲ್ತಾನ್ ಟೀಪುವಿನ ಧೋರಣೆಯನ್ನು ಕುರಿತಂತೆ ಅವರು ನಡೆಸಿರುವ ಅತಿ ಗಂಭೀರವಾದ ಚರ್ಚೆ ಮತ್ತು ಆ ಬಗೆಗೆ ಅವರು ನೀಡುವ ತೀರ್ಪು, ಪ್ರಾಯಶಃ ಸೃಜನಶೀಲ ಸಾಹಿತ್ಯದ ರಚನಾಸಕ್ತರಿಗೆ ಮೂಲ ಪ್ರೇರಣೆಯೇ ಆಗಲು ಸಾಧ್ಯವಿದೆ. ಅದೇ ರೀತಿಯ ಇನ್ನೊಂದು ಮಹತ್ವದ ಕನ್ನಡ ಗ್ರಂಥವೆಂದರೆ, ಗೌರಿ ಸುಂದರ್‌ರವರು ಸಂಪಾದಿಸಿ ಪ್ರಕಟಿಸಿರುವ "ಟೀಪು ಸುಲ್ತಾನ್ ಕನ್ನಡ ದ್ರೋಹಿಯೇ?" ಎಂಬ ಸುಮಾರು ನಲವತ್ತೈದು ಲೇಖನಗಳ ಸಂಪುಟ. ಈ ನಲವತ್ತಕ್ಕಿಂತಲೂ ಹೆಚ್ಚಿನ ಲೇಖನಗಳ ಲೇಖಕರು

ನಾಡಿನ ಪ್ರಸಿದ್ಧ ಲೇಖಕರೇ ಆಗಿದ್ದಾರೆಂಬುದು ತುಂಬಾ ಮುಖ್ಯ. ಈ ಲೇಖನಗಳ ಸಂಪುಟದಲ್ಲಿ ಅನನ್ಯವೂ ವರ್ಣನಾಮಯವೂ ಆದ ಸುಲ್ತಾನ್ ಟೀಪುವಿನ ವ್ಯಕ್ತಿತ್ವವನ್ನು ಆಧಾರಸಹಿತ ಮಾಹಿತಿಗಳಿಂದಲೂ, ಸಾಕಷ್ಟು ಅರ್ಥಪೂರ್ಣವಾಗಿಯೂ ಬಣ್ಣಿಸಲಾಗಿದೆ. ಟೀಪುವಿನ ಪಾತ್ರವನ್ನು ಕನ್ನಡದಲ್ಲಿ ಅಭೂತಪೂರ್ವವಾಗಿ ಪುನಃಸೃಷ್ಟಿಸಲು ಪ್ರೇರಣಾತ್ಮಕ ಮಾಹಿತಿಗಳೇ ಈ ಸಂಪುಟದಲ್ಲಿವೆ.

೨

ಇನ್ನು ಇಲ್ಲಿಂದ ಮುಂದೆ ಇತಿಹಾಸದ ಕುರಿತ ಸಂಶೋಧನೆಗಳಲ್ಲಿ ಸುಲ್ತಾನ್ ಟೀಪುವಿನ ಪಾತ್ರಚಿತ್ರಣವನ್ನು ಕುರಿತು ಚರ್ಚಿಸಬಹುದಾಗಿದೆ.

ಸುಲ್ತಾನ್ ಟೀಪುವನ್ನು ಕುರಿತು ಸಂಶೋಧನಾತ್ಮಕ ಬರವಣಿಗೆಗಳನ್ನು ಪ್ರಕಟಿಸಿರುವ ವಿದ್ವಾಂಸರಲ್ಲಿ ಎಡ್ವರ್ಡ್ ಥಾಮ್ಸನ್, ಜಿ.ಟಿ. ಗಾರಟ್, ಕಿರ್ಕ್ ಪ್ಯಾಟ್ರಿಕ್, ಬಿಟ್ಸನ್, ಫರ್ನಾಂಡಿಸ್ ಪ್ರ್ಯಾಂಕ್ಸಿ, ವಿ. ಕೆ. ಆರ್. ಮೆನನ್, ಮಿಶೊ, ಕಿರ್ಮಾನಿ, ಮೊಹಿಬುಲ್ ಹಸನ್, ಕಬೀರ್ ಕೌಸರ್, ಸಮರೋಪಾಧ್ಯಾಯ, ಗಿದ್ವಾನಿ, ಡಾ. ಶೇಖ್ ಅಲಿ, ಭಗವಾನ್‌ದಾಸ್, ಮೇಜರ್ ಡಿರೋಮ್, ಸತ್ಯನಾತಿಯರ್ ಮತ್ತು ಬಿ. ಎನ್. ಪಾಂಡೆ, ಇನ್ನೂ ಮುಂತಾದವರು. ಇವರಲ್ಲಿ ಬಹುತೇಕ ವಿದ್ವಾಂಸರು ಸುಲ್ತಾನ್ ಟೀಪುವಿನ ಪರಾಕ್ರಮಿ ಸ್ವಾತಂತ್ರ್ಯ ರಣವೀರತ್ವವನ್ನೂ, ಪರಧರ್ಮ ಸಹಿಷ್ಣುತೆಯನ್ನೂ ಅವನ ಅನುಪಮ ರಾಷ್ಟ್ರಪ್ರೇಮವನ್ನೂ ಅನುಮಾನಿಸಲು ಸಾಧ್ಯವೇ ಆಗಿಲ್ಲದಿರುವುದು ಗಮನಾರ್ಹ.

ಆದರೆ, ಸುಲ್ತಾನ್ ಟೀಪುವನ್ನು ಕೆಲವರು ಪ್ರಶ್ನಿಸುತ್ತಿರುವ ಸದ್ಯದ ಮುಖ್ಯವಾದ ಮೂರು ವಿಷಯಗಳೆಂದರೆ, ಒಂದು, ಅವನ ಕನ್ನಡ ಪ್ರೇಮ; ಎರಡನೆಯದು, ಪರಧರ್ಮ ಸಹಿಷ್ಣುತೆ ಮತ್ತು ಮೂರನೆಯದು, ಬಲಾತ್ಕಾರದ ಮತಾಂತರವೆಂಬುದು.

ಮೊದಲನೆಯದಾಗಿ, ಸಮಕಾಲೀನ ಕನ್ನಡಪರ ನೆಲೆಗಳಲ್ಲಿ ನಿಂತು ಹದಿನೆಂಟನೆ ಶತಮಾನದ ಸುಲ್ತಾನ್ ಟೀಪುವಿನ ಬಗ್ಗೆ ಕನ್ನಡಪರ ಅಥವಾ ವಿರುದ್ಧವೆಂಬ ಮಾತನಾಡುವುದು ವಸ್ತುನಿಷ್ಠ ವಿವೇಚನೆಯೂ ಅಲ್ಲ, ಕಲೋನಿಯಲ್ ಇಂಡಿಯಾದ ದೊರೆಗಳು ಮತ್ತು ನವಾಬರ ಆಡಳಿತ ಭಾಷಾನೀತಿಯ ಚರಿತ್ರೆಗೆ ಅದರಿಂದ ನ್ಯಾಯ ದೊರೆಯುವುದೂ ಇಲ್ಲ. ಏಕೆಂದರೆ, ಪ್ರೀ ಕಲೋನಿಯಲ್ ಯುಗದಲ್ಲಿ ಮಾತ್ರವಲ್ಲದೆ, ಪೋಸ್ಟ್ ಕಲೋನಿಯಲ್ ಇಂಡಿಯಾದ ಬಹುತೇಕ ರಾಜಮಹಾರಾಜರು ಮತ್ತು ನವಾಬರ ಆಡಳಿತ ಭಾಷೆ ಪರ್ಶಿಯನ್ ಆಗಿದ್ದುದರ ಜೊತೆಜೊತೆಗೆ, ಆಯಾ ಪ್ರದೇಶದ ಸ್ಥಳೀಯ ಭಾಷೆಗೂ ಮನ್ನಣೆ ಇತ್ತೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳನ್ನೇ ಈ ವರೆಗಿನ ವಿದ್ವಾಂಸರು ಒದಗಿಸಿದ್ದಾರೆ. ಇಂದಿಗೂ ಸುಧಾರಣವಾದಿ ಹಿಂದೂ ಚಿಂತಕರೆಂತಲೇ ಕರೆಯಲಾಗುವ ರಾಜಾ ರಾಮ್‌ಮೋಹನ್ ರಾಯ್ ಮುನ್ಷಿ ಹುದ್ದೆಗಾಗಿ ಗಳಿಸಿದ ಪ್ರಥಮ ಅರ್ಹತೆಯೇ ಪರ್ಶಿಯನ್ ಭಾಷೆಯಲ್ಲಿ ಅವರು ಪಡೆದ ಪರಿಣತಿ ಎಂಬುದಾಗಿ ವಿದ್ವಾಂಸರೂ ಹೇಳುತ್ತಾರೆ. ಅವರ ಜೀವನಚರಿತ್ರೆಯೂ ಅದನ್ನೇ ಹೇಳುತ್ತದೆ. ಆದರೆ, ಅವರ ಮಾತೃಭಾಷೆ ಮಾತ್ರ ಬಂಗಾಳಿ ಎಂಬುದನ್ನು ನೆನಪಿಡಬೇಕು. ಹಾಗೆಂದ ಮಾತ್ರಕ್ಕೆ ರಾಜಾ ರಾಮ್‌ಮೋಹನ್ ರಾಯ್ ಬಂಗಾಳಿ ಭಾಷಾದ್ರೋಹಿ ಎಂದು ತೀರ್ಮಾನಿಸಬೇಕೆ? ಯಥಾಪ್ರಕಾರ ಸುಲ್ತಾನ್ ಟೀಪುವಿನ ಮಾತೃಭಾಷೆ ಉರ್ದು; ಆದರೆ ಆತನ ಆಡಳಿತಭಾಷೆ ಪರ್ಶಿಯನ್ ಆಗಿತ್ತು ಎಂಬುದಾಗಿ ಆತನ ಆಸ್ಥಾನ ವಿದ್ವಾಂಸನಾಗಿದ್ದ ಕಿರ್ಮಾನಿಯೇ

ಹೇಳುತ್ತಾನೆ. ಅಂದ ಮಾತ್ರಕ್ಕೆ, ಶ್ರೀರಂಗಪಟ್ಟಣದ ಯಾವುದೋ ಒಂದು ಹಳ್ಳಿಯಲ್ಲಿ ಜನಿಸಿದ, ಒಬ್ಬ ಅಪ್ಪಟ ಸ್ಥಳೀಯ ಮುಸಲ್ಮಾನನ ಮಗನಾದ ಟೀಪುವಿಗೆ, ಕನ್ನಡ ಗೊತ್ತೇ ಇರಲಿಲ್ಲವೆಂಬ ತೀರ್ಮಾನಕ್ಕೆ ಬರಬೇಕೆ? ಅಥವಾ ಆ ಕಾರಣಕ್ಕಾಗಿ ಟೀಪು ಕನ್ನಡದ್ರೋಹಿ ಎಂದು ನಿರ್ಧರಿಸಬೇಕೆ? ಇನ್ನು ಉಳಿದಂತೆ, ಶೃಂಗೇರಿ ಮಠದೊಡನೆ ಸುಲ್ತಾನ್ ಟೀಪು ಕನ್ನಡದಲ್ಲಿ ನಡೆಸಿರುವ ಪತ್ರ ವ್ಯವಹಾರಗಳನ್ನು ಅನೇಕ ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ, ಆ ವಿಷಯದ ಪುನರುಕ್ತಿ ಸದ್ಯ ಅಗತ್ಯವಿಲ್ಲ.

ಇನ್ನು ಎರಡನೆಯ ಮುಖ್ಯ ವಿಷಯ, ಸುಲ್ತಾನ್ ಟೀಪು ಬಲಾತ್ಕಾರದ ಮತಾಂತರ ಮಾಡಿದನೆಂಬುದು. ಮನುವಾದಿ ಜಾತೀಯ ವ್ಯವಸ್ಥೆ ಇಂದಿಗೂ ಜಾತೀಯ ಅನ್ಯಾಯಗಳು ಮತ್ತು ಅಸ್ಪೃಶ್ಯತೆಯ ನಿತ್ಯ ಅಪಮಾನಗಳೇ ತುಂಬಿರುವ ಘನಘೋರ ವೈದಿಕ ವ್ಯವಸ್ಥೆಯಲ್ಲಿ, ಮತಾಂತರವನ್ನು ಪ್ರಶ್ನಿಸುವ ಅಥವಾ ಆ ವಿಷಯವನ್ನು ವೈಭವೀಕರಿಸುವ ಯಾವುದೇ ನೈತಿಕ ಯೋಗ್ಯತೆಯೂ ಮನುವಾದಿ ಮಡಿವಂತರಿಗೆ ಇರಲು ಸಾಧ್ಯವಿಲ್ಲ. ಆದರೂ ಸುಲ್ತಾನ್‌ಟೀಪು ಬಲಾತ್ಕಾರದ ಮತಾಂತರಮಾಡಿದನೆಂಬ ವಿಷಯವನ್ನು ಪರೋಕ್ಷವಾಗಿಯೋ ಅಥವಾ ಪ್ರತ್ಯಕ್ಷವಾಗಿಯೋ ಹೇಳಲೇಬೇಕೆಂಬ ಸ್ಥಿತಿಯಾಗಲಿ, ಇಲ್ಲವೆ, ಆ ಕುರಿತ ಟೀಕೆಯ ಪ್ರಮೇಯವೇ ಇಲ್ಲ. ಏಕೆಂದರೆ, ಪ್ರೀ ಕಲೋನಿಯಲ್ ಕಾಲದ ರಾಜಮಹಾರಾಜರು ಮತ್ತು ನವಾಬರ ಕಾಲಗಳಲ್ಲಿ ಎಂತೋ, ಅಂತೆಯೇ, ಕಲೋನಿಯಲ್ ಮತ್ತು ಪೋಸ್ಟ್ ಕಲೋನಿಯಲ್‌ನ ಬ್ರಿಟಿಷರ ಕಾಲದಲ್ಲೂ ಮತಾಂತರವೆಂಬುದು ನಿರಂತರವಾಗಿ ನಡದೇ ಇದೆ. ಆದರೆ ಹಾಗೆಂದು ಸುಲ್ತಾನ್ ಟೀಪು ಬಲಾತ್ಕಾರದ ಮತಾಂತರ ಮಾಡಿದನೆಂಬ ವಿವೇಚನಶೂನ್ಯ ಭೂತಕಾಲದ ಭೂತ ಎಬ್ಬಿಸುವ ಮೂಲಕ, ಸಮಕಾಲೀನ ಇಂಡಿಯಾದ ಅಸ್ಪೃಶ್ಯರೇ ಮೊದಲಾದ ಅವಮಾನಿತ ಜನವರ್ಗದ ಮತಾಂತರದ ವಿರುದ್ಧ ಒಂದು ರೀತಿಯ ಪರೋಕ್ಷ ಎಚ್ಚರಿಕೆ ನೀಡುವ ಯಾವುದೇ ನೈತಿಕ ಯೋಗ್ಯತೆಯಾಗಲಿ, ಮಾನವೀಯ ಅನುಕಂಪವಾಗಲಿ ಡಾ. ಎಸ್. ಎಲ್. ಭೈರಪ್ಪ ಮತ್ತು ಡಾ. ಚಿದಾನಂದಮೂರ್ತಿಯಂತಹ ಮನುವಾದಿಗಳಿಗೆ ಇರಲು ಸಾಧ್ಯವೇ ಇಲ್ಲವೆಂಬುದನ್ನು ನೆನಪಿಡಬೇಕು. ಆದರೂ ಸಹ, ಸುಲ್ತಾನ್ ಟೀಪು ನಡೆಸಿರಬಹುದಾದ ಮತಾಂತರದ ಕಾರಣ ಮತ್ತು ಪರಿಣಾಮಗಳೇನೆಂಬುದನ್ನು ಶೋಧಿಸದೆ ಬಿಡುವುದು ಕೂಡ ವಸ್ತುನಿಷ್ಠ ಶೋಧನೆ ಎನಿಸುವಂತಿಲ್ಲ.

ಅಂಬೇಡ್ಕರರು ಹೇಳುವಂತೆ ಗ್ರೇಡೆಡ್ ಅಸಮಾನತೆಯೇ ಘನಘೋರ ಭೂತಸತ್ಯವೂ ಕಠೋರ ವರ್ತಮಾನ ಸತ್ಯವೂ ಆಗಿರುವ ಮಡಿವಂತ ಮನುವಾದಿ ಧರ್ಮವಿರುವ ಇಂಡಿಯಾದಲ್ಲಿ, ಮತಾಂತರವೆಂಬುದು ಮನುಷ್ಯನ ಮರ್ಯಾದಾ ಬದುಕಿನ ಏಕಮಾತ್ರ ಅವಕಾಶವೆನಿಸಿದೆ. ಆದರೆ, ಸುಲ್ತಾನ್ ಟೀಪು ನಡೆಸಿರಬಹುದಾದ ಮತಾಂತರ ಇದಕ್ಕಿಂತ ಸಂಪೂರ್ಣವಾಗಿ ಭಿನ್ನವಾದುದೆಂಬುದು ಮಾತ್ರ ತುಂಬಾ ಮುಖ್ಯ. ಮತಾಂತರವನ್ನು ನಡೆಸಿದ್ದು ಎರಡು ಮುಖ್ಯ ಪ್ರದೇಶಗಳಲ್ಲಿ ಮತ್ತು ಎರಡು ವಿಭಿನ್ನ ಕಾಲಘಟ್ಟಗಳಲ್ಲಿ. ಅದರಲ್ಲಿ ಮೊದಲನೆಯದು, ೧೭೮೪ ರಲ್ಲಿ ಸುಲ್ತಾನ್ ಟೀಪುನಿಗೂ ಬ್ರಿಟಿಷರಿಗೂ ನಡೆದ ಮಂಗಳೂರು ಯುದ್ಧ ಮತ್ತು ಯುದ್ಧಾನಂತರದ ಪರಿಣಾಮಗಳ ಕಾಲದಲ್ಲಿ. ಹಾಗೆಯೇ, ಎರಡನೆಯ ಕಾಲಘಟ್ಟವೆಂದರೆ, ೧೭೮೬ ರಿಂದ ೧೭೮೭ ರ ವರೆಗೆ ಕೇರಳದ ಮಲಬಾರ್ ಪ್ರದೇಶದಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದ ಅಲ್ಲಿನ ನಾಯರ್ ಜಾತಿಯವರು ಟೀಪು ವಿರುದ್ಧ ನಡೆಸಿದ ಧಾರ್ಮಿಕ ದಂಗೆ. ಮತಾಂತರಕ್ಕೆ ಸಂಬಂಧಿಸಿದ ಈ ಎರಡೂ ಘಟನೆಗಳು ಮೂಲತಃ ಪರಸ್ಪರ ಪೂರಕವಾದುವು ಎಂಬುದನ್ನು ಈವರೆಗೂ ಯಾವ

ಇತಿಹಾಸಗಾರರೂ ಹೇಳಿರುವುದಿಲ್ಲ. ಮಂಗಳೂರು ಯುದ್ಧದಲ್ಲಿ ಬ್ರಿಟಿಷರ ಮೇಲೆ ಅಪ್ರತಿಮ ಜಯ ಗಳಿಸಿದ ಪರಾಕ್ರಮಿ ಯೋಧ ಸುಲ್ತಾನ್ ಟೀಪು ಆನಂತರ ನಡೆಸಿದ ಅತ್ಯಂತ ಕ್ಷಿಪ್ರ ಕಾರ್ಯಾಚರಣೆಯಲ್ಲಿ, ಬ್ರಿಟಿಷರಿಗೆ ನೆರವು ನೀಡಿದ್ದ ಮಂಗಳೂರಿನ ಹಲವಾರು ಕ್ರಿಶ್ಚಿಯನ್ನರನ್ನು ಬಂಧಿಸಿ ಅವರನ್ನೆಲ್ಲಾ ಶ್ರೀರಂಗಪಟ್ಟಣಕ್ಕೆ ಕರೆತಂದು, ಅವರನ್ನು ಸೆರೆಯಲ್ಲಿರಿಸಿದ. ತದನಂತರ ಅವರನ್ನೆಲ್ಲ ದೇಶದ್ರೋಹಿಗಳೆಂದು ತೀರ್ಮಾನಿಸಿದ ಟೀಪು, ಶಿಕ್ಷೆಯ ರೂಪದಲ್ಲಿ ಅವರಿಗೆ ಎರಡು ಆಯ್ಕೆಗಳನ್ನು ನೀಡಿದ; ಒಂದು, ಯುದ್ಧಮರಣ; ಏಕೆಂದರೆ, ಅವರೆಲ್ಲರೂ ಯುದ್ಧಖೈದಿಗಳು; ಎರಡನೆಯದು, ಇಸ್ಲಾಂ ಧರ್ಮಕ್ಕೆ ಮತಾಂತರ. ಆದರೆ, ಅವರನ್ನೆಲ್ಲಾ ಹಾಗೆ ಸಾಮೂಹಿಕವಾಗಿ ಕೊಲ್ಲುವುದಕ್ಕಿಂತ, ಅವರನ್ನೆಲ್ಲಾ ಸಾಮೂಹಿಕವಾಗಿಯೇ ಇಸ್ಲಾಂ ಧರ್ಮಕ್ಕೆ ಮತಾಂತರಿಸಿ, ಅವರನ್ನು ಪರಿವರ್ತಿಸಿ ತನ್ನ ನಾಡಿನ ರಾಜಕೀಯ ಸ್ವಾತಂತ್ರ್ಯವನ್ನು ಬ್ರಿಟಿಷರಿಂದ ಸಂರಕ್ಷಿಸುವುದೇ ಅವನ ಪರಮ ಧ್ಯೇಯವಾಗಿತ್ತು. ತದನಂತರ, ಟೀಪುವಿನ ಈ ಮತಾಂತರದ ವಿರುದ್ಧ ಕೇರಳದ ಮಲಬಾರ್ ಪ್ರದೇಶದಲ್ಲಿ ದಂಗೆಯೆದ್ದವರು, ಕ್ರೈಸ್ತರಾಗಿ ಮತಾಂತರಗೊಂಡು ಬ್ರಿಟಿಷರೊಡನೆ ಎಲ್ಲಾ ರೀತಿಯ ರಾಜಕೀಯ ಸಂಬಂಧಗಳನ್ನೂ ಹೊಂದಿದ್ದ ಅಲ್ಲಿನ ನಾಯರ್ ಜಾತಿಯ ಜನ.

ಯಥಾಪ್ರಕಾರ ಮಲಬಾರ್‌ನ ನಾಯರ್ ದಂಗೆಯನ್ನು ಶಸ್ತ್ರಪ್ರಯೋಗದಿಂದಲೇ ದಮನ ಮಾಡಿದ ಟೀಪು, ಹಾಗೆ ಬ್ರಿಟಿಷರ ಪರವಾಗಿದ್ದ ನೂರಾರು ಮಂದಿ ನಾಯರ್‌ಗಳನ್ನು ಸೆರೆಹಿಡಿದು ತಂದು, ಶ್ರೀರಂಗಪಟ್ಟಣದ ಸೆರೆವಾಸದಲ್ಲಿಟ್ಟು, ಆನಂತರ ಅವರನ್ನೆಲ್ಲಾ ಇಸ್ಲಾಂ ಧರ್ಮಕ್ಕೆ ಮತಾಂತರಿಸಿದ. ಒಂದು ವೇಳೆ ಅವರು ಬ್ರಿಟಿಷರ ಪರವಾಗಿದ್ದರೂ ಅವರನ್ನು ಟೀಪು ಹಾಗೆ ಇಸ್ಲಾಂ ಧರ್ಮಕ್ಕೆ ಮತಾಂತರಿಸಿದ್ದು ಸರಿಯಲ್ಲವೆನ್ನುವುದು ಡಾ. ಭೈರಪ್ಪ ಮತ್ತು ಡಾ. ಚಿದಾನಂದಮೂರ್ತಿಯೇ ಮೊದಲಾದ ಮನುವಾದಿಗಳ ಅಭಿಪ್ರಾಯವಾಗಿದ್ದಲ್ಲಿ, ಅವರಿಗೆ ಇನ್ನಾವ ಶಿಕ್ಷೆ ವಿಧಿಸಬಹುದಾಗಿತ್ತು? ಈ ಪ್ರಶ್ನೆಗೆ ಅವರು ಉತ್ತರ ಹೇಳಲೇ ಬೇಕಾಗುತ್ತದೆ. ಅವರನ್ನೆಲ್ಲಾ ಸಾಮೂಹಿಕವಾಗಿ ಕೊಲ್ಲಬೇಕಿತ್ತೆ? ಅಥವಾ ಅವರನ್ನೆಲ್ಲಾ ಹಿಂದೂಧರ್ಮಕ್ಕೆ ಪುನಃ ಮತಾಂತರಿಸಬೇಕಿತ್ತೆ? ಆದರೆ,ಅನ್ಯಧರ್ಮೀಯರು ಹಿಂದೂಧರ್ಮಕ್ಕೆ ಮತಾಂತರಗೊಳ್ಳುವ ಸ್ವಾತಂತ್ರ್ಯವೇ ಹಿಂದೂಧರ್ಮದಲ್ಲಿ ಇಲ್ಲವಲ್ಲ! ಒಂದು ವೇಳೆ ಟೀಪು ಅವರನ್ನು ಹಿಂದೂ ಧರ್ಮಕ್ಕೇನಾದರೂ ಮತಾಂತರಿಸಿದ್ದಲ್ಲಿ, ಹಿಂದೂಧರ್ಮದ ಯಾವ ಜಾತಿಗೆ ಅವರನ್ನು ಮತಾಂತರಿಸಬೇಕಿತ್ತು? ಬ್ರಾಹ್ಮಣ ಜಾತಿಗೆ? ಆದರೆ ಬ್ರಾಹ್ಮಣ ಧರ್ಮ ಕ್ರೈಸ್ತರನ್ನು ಒಪ್ಪುತ್ತದೆಯೆ? ಕ್ಷತ್ರಿಯ ಜಾತಿಗೆ? ಕ್ಷತ್ರಿಯರು ಅವರನ್ನು ಸಹಿಸುತ್ತಾರೆಯೆ? ಅಥವಾ ವೈಶ್ಯ ಜಾತಿಗೆ? ವೈಶ್ಯರು ಅವರನ್ನು ಬರಮಾಡಿಕೊಳ್ಳಬಹುದೆ? ಅಥವಾ ಶೂದ್ರ ಜಾತಿಗೆ ಅವರನ್ನು ಮತಾಂತರಿಸಬಹುದಿತ್ತೆ? ಆದರೆ ಶೂದ್ರರು ಅವರೊಡನೆ ವೈವಾಹಿಕ ಸಂಬಂಧಗಳನ್ನು ಒಪ್ಪುತ್ತಾರೆಯೇ? ಇವೆಲ್ಲಕ್ಕೂ ಮಿಗಿಲಾಗಿ, ಕ್ರೈಸ್ತರನ್ನು ಹಿಂದೂಧರ್ಮಕ್ಕೆ ಮತಾಂತರಿಸುವ ಅಧಿಕಾರ ಶೃಂಗೇರಿ ಮಠದವರಿಗೇ ಇರಲಿಲ್ಲವೆಂದ ಮೇಲೆ, ಇನ್ನು ಆ ರೀತಿಯ ಧಾರ್ಮಿಕ ಅಧಿಕಾರ ಸುಲ್ತಾನ್ ಟೀಪುವಿಗೆ ಇದ್ದಿರಲು ಸಾಧ್ಯವೆ? ಅಥವಾ ಅದೇ ಕ್ರೈಸ್ತರನ್ನು ಅಸ್ಪೃಶ್ಯರ ಜಾತಿಗೆ ಮತಾಂತರಿಸಬಹುತ್ತೆ? ಆದರೆ, ಅಸ್ಪೃಶ್ಯರದು ಜಾತಿಯೇ ಅಲ್ಲವಲ್ಲ! ಅವರು ಮನುಧರ್ಮದ ಜಾತಿಗಳಿಂದ ಹೊರತಾದವರು. ಅಷ್ಟೇ ಅಲ್ಲದೆ, ಈ ರೀತಿಯ ಮತಾಂತರವನ್ನು ಮಡಿವಂತರ ಮನುಧರ್ಮದಲ್ಲಿ ಎಂದೂ ಒಪ್ಪುವುದೂ ಇಲ್ಲ. ಅದರಲ್ಲೂ ಅಂಬೇಡ್ಕರರ ಸಂಶೋಧನೆಗಳ ಪ್ರಕಾರ, ಹಿಂದೂಧರ್ಮಕ್ಕೆ ಅನ್ಯ ಧರ್ಮೀಯರ ಮತಾಂತರವನ್ನು ಪ್ರೋತ್ಸಾಹಿಸಿದ ಏಕೈಕ ಪ್ರಯತ್ನ, ಅದೂ ಅದೊಂದು

ವಿಫಲ ಪ್ರಯತ್ನವೆಂದರೆ, ದಯಾನಂದ ಸರಸ್ವತಿಯವರ "ಆರ್ಯಸಮಾಜ ಚಳವಳಿ" ಮಾತ್ರ. ಅದು ನಡೆದದ್ದು ಕೂಡ ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ. ಆದರೆ, ಆರ್ಯ ಸಮಾಜದ ಮತಾಂತರದ ಕಾರ್ಯಕ್ರಮಗಳಲ್ಲಿ ಕೂಡ ಅಸಂಖ್ಯಾತ ಗೊಂದಲಗಳೇ ತುಂಬಿವೆ. ಆ ಗೊಂದಲಗಳನ್ನೆಲ್ಲಾ ಅಂಬೇಡ್ಕರರು ಅನನ್ಯವಾಗಿ ಪ್ರಶ್ನಿಸಿದ್ದಾರೆ. ಸದ್ಯಕ್ಕೆ ಆ ವಿಷಯ ಬೇರೆ.

ಸುಲ್ತಾನ್ ಟೀಪು ನಡೆಸಿರಬಹುದಾದ ಮತಾಂತರದ ಬಗೆಗೆ ಮೊಹಿಬುಲ್ ಹಸನ್ "ಹಿಸ್ಟರಿ ಆಫ್ ಟೀಪು ಸುಲ್ತಾನ್" ಎಂಬ ತನ್ನ ಸಂಶೋಧನ ಗ್ರಂಥದ ಪುಟ ೩೬೬ರಲ್ಲಿ ಅತ್ಯಂತ ಅರ್ಥಪೂರ್ಣವಾದ ಒಂದು ವ್ಯಾಖ್ಯಾನವನ್ನು ಹೀಗೆ ಮಾಡುತ್ತಾನೆ: *"ಸುಲ್ತಾನ್ ಟೀಪು ದೇಶದ್ರೋಹಿಗಳಿಗೆ ವಿಧಿಸಿದ ಮತಾಂತರದ ಶಿಕ್ಷೆ, ಕೇವಲ ರಾಜಕೀಯವಾದದ್ದೇ ಹೊರತು, ಅದು ಮತೀಯವಾಗಿಯೂ ಇರಲಿಲ್ಲ, ಅಥವಾ ಮತಾಂಧತೆಯೂ ಆಗಿರಲಿಲ್ಲ"* ಎಂದು ತೀರ್ಮಾನಿಸುತ್ತಾನೆ. ಮೊಹಿಬುಲ್ ತನ್ನ ಈ ವಾದಕ್ಕೆ ಅದೇ ಗ್ರಂಥದ ೩೬೭ನೇ ಪುಟದಲ್ಲಿ ತುಂಬಾ ಬಲವಾದ ಮತ್ತು ಸಮರ್ಥನೀಯವೂ ಆದ ಒಂದು ಧಾರ್ಮಿಕ ಚರ್ಚೆಯನ್ನೇ ಮಂಡಿಸುತ್ತಾನೆ. ಜೊತೆಗೆ ಶೃಂಗೇರಿ ಮಠದಲ್ಲಿ ಇಂದಿಗೂ ಸಂರಕ್ಷಿಸಿ ಇಡಲಾಗಿರುವ ಸುಲ್ತಾನ್ ಟೀಪುವಿನ ಕನ್ನಡ ಕಾಗದಪತ್ರ ಸಮಸ್ತವನ್ನೂ ಅಧ್ಯಯನ ಮಾಡಿರುವ ವೈ. ಉಮಾನಾಥ ಶೆಣೈರವರು, ೧೯೯೮ ರ ಮೇ ತಿಂಗಳ "ತರಂಗ" ವಾರಪತ್ರಿಕೆಯಲ್ಲಿ ಪ್ರಕಟಿಸಿರುವ "ಟೀಪು ಸುಲ್ತಾನನು ಹಿಂದೂ ದ್ವೇಷಿಯೇ?" ಎಂಬ ಲೇಖನದಲ್ಲಿ ಮೊಹಿಬುಲ್ ಹಸನ್ ಮಾಡಿರುವ ವ್ಯಾಖ್ಯಾನವನ್ನು ಸಂಪೂರ್ಣವಾಗಿಯೂ ಸಾಧಾರವಾಗಿಯೂ ಸಮರ್ಥಿಸಿರುವುದನ್ನು ಮರೆಯುವಂತಿಲ್ಲ.

ಟೀಪು ಸುಲ್ತಾನನ ಬಗೆಗೆ ತುಂಬಾ ಮಹತ್ವಾಕಾಂಕ್ಷೆಯ ಸಂಶೋಧನೆ ನಡೆಸಿರುವ ಇನ್ನೊಬ್ಬ ಸಂಶೋಧಕರೆಂದರೆ, ಡಾ. ಬಿ. ಎನ್. ಪಾಂಡೆ. ಅವರ ಅಭಿಪ್ರಾಯವೇನೆಂದರೆ *"ಸುಲ್ತಾನ್ ಟೀಪು ಹಿಂದೂ ವಿರೋಧಿಯಲ್ಲ; ಮೂರ್ತಿಭಂಜಕನೂ ಅಲ್ಲ. ಬದಲಾಗಿ, ಹಿಂದೂ ದೇವಾಲಯಗಳಿಗೂ ಮಠಮಾನ್ಯಗಳಿಗೂ ಬೇಕಾದಷ್ಟು ದಾನದತ್ತಿಗಳನ್ನೇ ನೀಡಿದ್ದಾನೆ; ಹಿಂದೂಗಳ ರೀತಿ ರಿವಾಜುಗಳನ್ನೆಲ್ಲ ತುಂಬಾ ಗೌರವದಿಂದಲೇ ನಡೆಸಿಕೊಂಡಿದ್ದಾನೆ"* ಎಂಬ ಮೌಲಿಕ ಅಭಿಪ್ರಾಯವನ್ನೇ ದಾಖಲಿಸಿದ್ದಾರೆ (ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು: ಕನ್ನಡ ಅನು: ಹಸನ್ ನಯೀಂ ಸುರಕೋಡ). ಅಂದ ಮೇಲೆ ಸುಲ್ತಾನ್ ಟೀಪುವನ್ನು ಮತಾಂಧನೆಂದು ಟೀಕಿಸಲು ಡಾ. ಭೈರಪ್ಪ ಮತ್ತು ಡಾ. ಚಿದಾನಂದಮೂರ್ತಿಯಂಥವರ ಆರೆಸೆಸ್ ಲೇಖಕರಿಗೆ, ಇನ್ನಾವ ಶೈಕ್ಷಣಿಕ ಅರ್ಹತೆಗಳಿವೆ?

ಸುಲ್ತಾನ್ ಟೀಪು ಕಾಲದಲ್ಲಿ ಸಂಭವಿಸಿರಬಹುದಾದ ಮತಾಂತರದ ಇನ್ನೊಂದು ಬಹುಮುಖ್ಯ ಆಯಾಮ, ಆ ಪ್ರದೇಶದ ಜನಪದರಲ್ಲಿ ಇಂದಿಗೂ ಜೀವಂತವಾಗಿದೆ. ಈ ಬಗ್ಗೆ ಯಾವ ವಿದ್ವಾಂಸರೂ ಗಮನ ಹರಿಸಿದಂತಿಲ್ಲ. ಈ ಹಿಂದಿನ ಪುಟದಲ್ಲಿ ಪಟ್ಟಿ ಮಾಡಲಾಗಿರುವ ಸುಲ್ತಾನ್ ಟೀಪುವನ್ನು ಕುರಿತು ಸಂಶೋಧನೆ ನಡೆಸಿರುವ ವಿದ್ವಾಂಸರಲ್ಲಿ, ಎರಡು ರೀತಿಯ ಅತಿರೇಕಗಳು ಕಂಡುಬರುತ್ತವೆ. ಅವರಲ್ಲಿ, ಸುಲ್ತಾನ್ ಟೀಪುವಿನ ಚರಿತ್ರೆಯನ್ನು ಬ್ರಿಟಿಷರು ಒಂದು ರೀತಿಯಲ್ಲಿ ವಿಕಾರಗೊಳಿಸಿದರೆ, ಮನುವಾದಿ ಲೇಖಕರು ಇನ್ನೊಂದು ರೀತಿಯಲ್ಲಿ ವಿಕಾರಗೊಳಿಸಿದ್ದಾರೆ. ಅಂದರೆ, ಇಪ್ಪತ್ತು-ಇಪ್ಪತ್ತೊಂದನೆಯ ಶತಮಾನದ ಆರೆಸೆಸ್‌ನ ಮನುವಾದಿ ಅರುಣ್ ಶೌರಿ, ಅಂಬೇಡ್ಕರ್ ಚರಿತ್ರೆಯನ್ನೇ ಇಷ್ಟರ ಮಟ್ಟಿಗೆ ವಿಕಾರಗೊಳಿಸುವುದಾದರೆ, ಇನ್ನು ಹದಿನೆಂಟನೆ ಶತಮಾನದ ಸುಲ್ತಾನ್

ಟೀಪು ಚರಿತ್ರೆಯನ್ನು, ಆ ಕಾಲದ ಅದೇ ಮನುವಾದಿಗಳು ವಿಕಾರಗೊಳಿಸದೆ ಬಿಟ್ಟಿರಲು ಸಾಧ್ಯವೆ? ಅಷ್ಟೇ ಅಲ್ಲದೆ, ಮೂಲತಃ ಹೀರೋ ಪ್ರಧಾನವಾದ ಜನಪದ ಸಾಹಿತ್ಯದಲ್ಲಿ ಇಂದಿಗೂ ಹೀರೊ ಆಗಿಯೇ ನಡೆದಿರುವ ಟೀಪುವನ್ನು ಕುರಿತಂತೆ ಅದೆಷ್ಟೋ ಜನಪದ ಎಪಿಸೋಡ್‌ಗಳೇ ಇದ್ದರೂ, ಅವುಗಳ ಬಗೆಗೆ ಟೀಪುವನ್ನು ಕುರಿತ ಚರಿತ್ರೆಕಾರರು ಒಂದೇ ಒಂದು ಅಡಿಟಿಪ್ಪಣಿಯನ್ನೂ ತಮ್ಮ ಗ್ರಂಥಗಳಲ್ಲಿ ಸೂಚಿಸುವುದಿಲ್ಲ.

ಸುಲ್ತಾನ್ ಟೀಪು ಕಾಲದ ಮತಾಂತರದ ಆ ಇನ್ನೊಂದು ಆಯಾಮದ ಹೀರೊ ಬೇರಾರೂ ಆಗಿರದೆ, ಸುಲ್ತಾನ್ ಟೀಪುವಿನ ಖಾಸಾ ಭಾವಮೈದುನನೇ ಆಗಿದ್ದ ಬುರ್‌ಹಾನುದ್ದೀನ್ ಎಂಬ ಪ್ರಚಂಡ ಬುದ್ಧಿವಂತಿಕೆಯ ಸೇನಾನಿ. ಊರೂರು ಅಡ್ಡಾಡಿ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸುವುದರ ಜೊತೆಜೊತೆಗೆ, ಅವನು ತೋರಿದ ಸೇನಾ ನೈಪುಣ್ಯವೆಂದರೆ, ಕುದುರೆಯನ್ನೇರಿ, ಶ್ರೀರಂಗಪಟ್ಟಣದ ಸುತ್ತಲಿರುವ ಗ್ರಾಮಗಳು, ಮೈಸೂರು ಮತ್ತು ಚಾಮರಾಜನಗರದ ಸುತ್ತಮುತ್ತಲ ಹಳ್ಳಿಹಳ್ಳಿಯನ್ನೂ ಸುತ್ತಾಡಿದ ಈ ಸೇನಾನಿ, ಗ್ರಾಮಸ್ಥರಲ್ಲಿ, ಅದೂ ನಿರ್ದಿಷ್ಟವಾಗಿ ಅಸ್ಪೃಶ್ಯರಲ್ಲಿ ಸೈನ್ಯಕ್ಕೆ ಯೋಗ್ಯರಾದವರನ್ನೆಲ್ಲಾ ಆಯ್ಕೆ ಮಾಡುತ್ತ ನಡೆದ. ಅವರಿಗೆ ನಿರಂತರ ತರಬೇತಿ ನೀಡಿದ. ತದನಂತರ ಅಸ್ಪೃಶ್ಯರು ಹಾಗೆ ಸುಲ್ತಾನ್ ಟೀಪು ಸೈನ್ಯದಲ್ಲಿ ಸಿಪಾಯಿಗಳಾದ ಬಳಿಕ ಕಾಲಕ್ರಮದಲ್ಲಿ ಅವರು ಮುಸಲ್ಮಾನರಾಗಿ ಮತಾಂತರವೂ ಆಗಿರಬಹುದು. ಅದು ಸುಲ್ತಾನನ ಶಕ್ತಿ ಸೇನಾಬಲದ ಹಿಂದಿನ ನಿಗೂಢ ರಹಸ್ಯವೂ ಆಗಿರಬಹುದು. ಆದರೆ ಆ ರೀತಿಯ ಮತಾಂತರವನ್ನು ಪ್ರಶ್ನಿಸುವ ಅಥವಾ ಅದನ್ನು ಬಲಾತ್ಕಾರದ ಮತಾಂತರವೆಂದು ಅಪಪ್ರಚಾರ ಮಾಡುವ, ಯಾವುದೇ ನೈತಿಕ ಯೋಗ್ಯತೆಯೂ, ಆರೆಸೆಸ್‌ನ ಮನುವಾದಿಗಳಿಗಿರಲು ಸಾಧ್ಯವೇ ಇಲ್ಲವೆಂಬುದು ತುಂಬಾ ಸರಳವೇ ಆದ ತರ್ಕ. ಅದೂ ಅಲ್ಲದೆ, ಇದನ್ನು ಬಲಾತ್ಕಾರದ ಮತಾಂತರವೆನ್ನಲು ತಾನೇ ಹೇಗೆ ಸಾಧ್ಯ? ಒಂದು ವೇಳೆ, ಇದು ಬಲಾತ್ಕಾರದ ಮತಾಂತರವೇ ಆಗಿದ್ದ ಪಕ್ಷದಲ್ಲಿ, ಅದೇ ಆರೆಸೆಸ್‌ನ ಮೂಲಭೂತವಾದಿ ಮನುಧರ್ಮದೊಳಗಿನ ಜಾತೀಯ ಅನ್ಯಾಯಗಳಾಗಲಿ ಅಥವಾ ಅಸ್ಪೃಶ್ಯತೆಯ ಅಮಾನುಷ ಅವಮಾನಗಳಾಗಲಿ, ಮತಾಂತರಕ್ಕಿಂತಲೂ ಸಾವಿರಾರು ಪಟ್ಟು ಘೋರವಾದ ಬಲಾತ್ಕಾರವೇ ಅಲ್ಲದೆ ಮತ್ತೇನು? ಮನುಧರ್ಮದ ಅಸ್ಪೃಶ್ಯತೆಯ ಅವಮಾನಕ್ಕೆ ಹೋಲಿಸಿದರೆ, ಮತಾಂತರ ಸಾವಿರ ಸಾವಿರ ಪಾಲು ಶ್ರೇಷ್ಠವಾದ ದೇಶಪ್ರೇಮವೇ ಆಗಿದೆ.

ಸುಲ್ತಾನ್ ಟೀಪು ಮುಸಲ್ಮಾನನೆಂಬ ಒಂದೇ ಒಂದು ಕಾರಣಕ್ಕಾಗಿ, ಬ್ರಾಹ್ಮಣ ಲೇಖಕರಾದ ಡಾ. ಎಸ್. ಎಲ್. ಭೈರಪ್ಪನವರು, ಅವನ ದೇಶಪ್ರೇಮವನ್ನೂ, ಭಾಷಾ ಪ್ರೇಮವನ್ನೂ ಮತ್ತು ಅವನ ಧಾರ್ಮಿಕ ವಿಚಾರಗಳನ್ನೂ ದೇಶವಿರೋಧಿ ಮತ್ತು ಜನವಿರೋಧಿ ಎಂಬಂತೆ ಬಣ್ಣಿಸುವುದಾದರೆ, ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಇವರ ಬ್ರಾಹ್ಮಣ ಜಾತಿಯ ನಾಯಕರು ಎಸಗಿರುವ ದೇಶದ್ರೋಹವನ್ನು ಭೈರಪ್ಪನವರು ಎಂದಾದರೂ ಹಾಗೆಯೇ ಬಣ್ಣಿಸಿದ್ದಾರೆಯೆ? ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳವಳಿಗೆಂದು ಹೋಗಿ, ಬಂಧಿತರಾಗಿ, ಕೊನೆಗೆ ಬ್ರಿಟಿಷರಿಗೆ ಅಪಾಲಜಿ ಬರೆದುಕೊಟ್ಟು ಜೈಲಿನಿಂದ ಹೊರಬಂದ ಇವರ ಬ್ರಾಹ್ಮಣ ಜಾತಿಯವರೇ ಆದ ವಿ. ಡಿ. ಸಾವರ್ಕರ್‌ರವರನ್ನು ಇವರ ಜಾತಿಯವರೆಲ್ಲರೂ ಸೇರಿ "ಸ್ವಾತಂತ್ರ್ಯ ವೀರ ಸಾವರ್ಕರ್" ಎಂತಲೇ ಬಣ್ಣಿಸಿದರಲ್ಲ, ಅದು ಹೇಗೆ? ಸುಲ್ತಾನ್ ಟೀಪು ಬ್ರಿಟಿಷರಿಗೆ ಅಪಾಲಜಿ ಅಥವಾ ಪ್ರಾಣದಾನಕ್ಕಾಗಿ ಅರ್ಜಿ ಬರೆದು ಕೊಂಡಿದ್ದನೆ? ಅದೇ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳವಳಿಗೆಂದು ಹೋಗಿ, ಬಂಧಿತರಾಗಿ, ಕೊನೆಗೆ

ಬ್ರಿಟಿಷರಿಗೆ ಅಪಾಲಜಿ ಬರೆದುಕೊಟ್ಟು ಹೊರಬಂದು, ಆಮೇಲೆ ದೇಶದ ಪ್ರಧಾನಿಯೇ ಆದ ಆರೆಸೆಸ್‌ನ ಬ್ರಾಹ್ಮಣ ಮನುವಾದಿ ಅಟಲ್‌ಬಿಹಾರೀ ವಾಜಪೇಯಿ ದೇಶದ್ರೋಹಿ ಯಲ್ಲವೆ? ಅಥವಾ ಬ್ರಿಟಿಷರೊಡನೆ ಹೋರಾಡಿ ರಣರಂಗದಲ್ಲೇ ವೀರಮರಣವನ್ನಪ್ಪಿದ ಸುಲ್ತಾನ್ ಟೀಪು ದೇಶದ್ರೋಹಿಯೆ? ಹಾಗಾದರೆ ಇವರಲ್ಲಿ ದೇಶಪ್ರೇಮಿ ಯಾರು? ಮತ್ತು ದೇಶದ್ರೋಹಿ ಯಾರು? ಅಥವಾ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ನಾಯಕರಾದ ಗಾಂಧೀಜಿಯವರಾಗಲಿ, ಅಂಬೇಡ್ಕರರಾಗಲಿ ಅದೇ ಬ್ರಿಟಿಷರಿಗೆ ಅಪಾಲಜಿ ಬರೆದು ಕೊಟ್ಟಿದ್ದರೆ? ಅಂದರೆ, ಸುಲ್ತಾನ್ ಟೀಪುವಿನ ಚರಿತ್ರೆಯನ್ನು ಕುರಿತ ಪೂರ್ವಗ್ರಹರಹಿತ ಅಧ್ಯಯನವಾಗಲಿ, ವಸ್ತುನಿಷ್ಠ ವಿಮರ್ಶೆಯಾಗಲಿ ಡಾ. ಭೈರಪ್ಪ ಮತ್ತು ಡಾ. ಚಿದಾನಂದ ಮೂರ್ತಿಯವರಂಥ ಮನುವಾದಿಗಳಿಂದ ಸಾಧ್ಯವೇ ಇಲ್ಲ. ಕೇವಲ ತಮ್ಮ ಬ್ರಾಹ್ಮಣ ಜಾತಿಯ ಮಡಿವಂತರ ಮಂತ್ರಪಠಣವನ್ನು ಕೆತ್ತುವ ಸಲುವಾಗಿ, ಆಧುನಿಕ ಶಬ್ದಲೋಕದ ಕಾದಂಬರಿಯಂಥ ಒಂದು ಶಕ್ತಿಶಾಲಿ ಸಾಧನವನ್ನು ಯಥೇಷ್ಟವಾಗಿ ದುರುಪಯೋಗಪಡಿಸಿ ಕೊಂಡವರು ಡಾ. ಭೈರಪ್ಪ. ಅಂದಮೇಲೆ, ಮುಸಲ್ಮಾನನಾದ ಸುಲ್ತಾನ್ ಟೀಪು ಬಗ್ಗೆ ಅವರಂಥವರಿಂದ ವಸ್ತುನಿಷ್ಠವೆನಿಸುವ ಇನ್ನೇನನ್ನು ತಾನೇ ನಿರೀಕ್ಷಿಸಲು ಸಾಧ್ಯ?

ಈ ಹಿಂದೆ 'ಪ್ರಜಾವಾಣಿ'(೨೦-೧೧-೨೦೦೬)ಯಲ್ಲಿ ಪ್ರಕಟವಾಗಿರುವ ನನ್ನ ಲೇಖನದ ಸಂಬಂಧವಾಗಿ ಆಧಾರಗಳನ್ನು ಒದಗಿಸುವಂತೆ ಡಾ. ಚಿದಾನಂದಮೂರ್ತಿ ಯವರು ಕೇಳಿದ್ದಾರೆ. ಅದಕ್ಕೆ ನಾನು ತಯಾರಿದ್ದೇನೆ. ಅದರಂತೆಯೇ, ಮೂಲತಃ ಸ್ವಾತಂತ್ರ್ಯ ವೀರನೂ ದೇಶಪ್ರೇಮಿಯೂ ಆದ ಸುಲ್ತಾನ್ ಟೀಪುವಿನ ಬಗೆಗೆ ಬರೆಯುವ ಮೊದಲು, ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಸುದೀರ್ಘ ಇತಿಹಾಸದ ಯಾವ ಕಾಲಘಟ್ಟದ ಸಂಘರ್ಷದ ಚರಿತ್ರೆಯ ಬಗೆಗೆ, ಡಾ. ಚಿದಾನಂದಮೂರ್ತಿಯವರು ಈವರೆಗೆ ಎಷ್ಟು ಸಂಶೋಧನೆ ನಡೆಸಿದ್ದಾರೆ ಮತ್ತು ಏನನ್ನು ಪ್ರಕಟಿಸಿದ್ದಾರೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಥವಾ ಕನ್ನಡದಲ್ಲಿ ಎಂ.ಎ., ಪಿ.ಹೆಚ್‌ಡಿ. ಪಾಸು ಮಾಡಿದವರು, ಕೇವಲ ಕನ್ನಡವನ್ನಷ್ಟೇ ಓದಬೇಕು, ಕನ್ನಡವನ್ನು ಮಾತ್ರ ಬರೆಯಬೇಕು, ಇನ್ನೇನನ್ನೂ ಓದಬಾರದು, ಇನ್ನೇನನ್ನೂ ಬರೆಯಬಾರದೆಂಬುದೇನಾದರೂ ಕನ್ನಡ ಚಾಂಪಿಯನ್ ಚಿದಾನಂದಮೂರ್ತಿಯವರ ಸಿದ್ಧಾಂತವೆ ಎಂಬ ಅನುಮಾನವಿದೆ. ಹಾಗಿಲ್ಲವಾದರೆ, ಸುಲ್ತಾನ್ ಟೀಪುವನ್ನೂ ಮೊದಲುಗೊಂಡು, ಈವರೆಗೆ ಮಾನವಿಕದ ಯಾವ ಯಾವ ವಿಷಯಕ್ಷೇತ್ರಗಳಿಗೆ ಸಂಶೋಧನೆಯಂಥ ಬುದ್ಧಿಶ್ರೇಷ್ಠ ಸಾಧನವನ್ನು ಅವರು ವಿಸ್ತರಿಸಿದ್ದಾರೆ ಎಂಬುದನ್ನು ದಯಮಾಡಿ ತಿಳಿಸಬೇಕು.

೧೮೫೭ ರ ಮೇ ೧೦ ರಂದು ಬ್ರಿಟಿಷ್ ವಸಾಹತುಶಾಹಿ ಸಾಮ್ರಾಜ್ಯದ ವಿರುದ್ಧ ದಂಗೆಯೆದ್ದವರು "ಮಹರ್ ರೆಜಿಮೆಂಟ್"ನ ಪರಾಕ್ರಮಿ ಯೋಧರು. ಆದರೆ, ಅದೇ ಮಹರ್ ರೆಜಿಮೆಂಟ್‌ನ ಸಾವಿರಾರು ಸೈನಿಕರನ್ನು ಕೊಚ್ಚಿ ಕೊಚ್ಚಿ ಕೊಂದುಹಾಕಿದವರು, ಆ ಕಾಲದ ಮನುವಾದಿ ಜಮೀನ್ದಾರರು ಮತ್ತು ವೈದಿಕ ರಾಜಮಹಾರಾಜರ ಸೈನಿಕರು. ಈ ಮಹರ್ ಚಂಡಾಳರು ಇನ್ನೆಂದೂ ತಲೆಎತ್ತದಂತೆ ದಮನ ಮಾಡಬೇಕೆಂದು, ಆ ಕಾಲದ ಬಂಗಾಳದ "ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್" ಎಂಬ ಬ್ರಾಹ್ಮಣರ ವೇದಿಕೆ ಮುಖಾಂತರ, ಸಾವಿರಾರು ಸಹಿ ಸಂಗ್ರಹಿಸಿ, ಬ್ರಿಟಿಷ್ ಮಹಾರಾಣಿಗೆ ಮನವಿ ಸಲ್ಲಿಸಿದವರು ಆ ಕಾಲದ ಬಂಗಾಳದ ಅದೇ ಮಡಿವಂತರು. ಗ್ವಾಲಿಯರ್ ಸಾಮ್ರಾಜ್ಯದ ದೊರೆ ಜಿಯಾಜಿರಾವ್ ಸಿಂಧಿಯಾ ಮತ್ತು ಅದೇ ಸಾಮ್ರಾಜ್ಯದ ಪ್ರಧಾನಮಂತ್ರಿಯಾಗಿದ್ದ

ದಿನಕರ್‌ರಾವ್ ರಾಜ್‌ವಾಡೆ, ಅದೆಷ್ಟೋ ಮಂದಿ ಸ್ವಾತಂತ್ರ್ಯವೀರರನ್ನು ಬ್ರಿಟಿಷರ ಬಂದೂಕಿನ ಗುಂಡಿಗೆ ಸಾಮೂಹಿಕವಾಗಿ ಆಹುತಿ ನೀಡಲು ಮಹಾನ್ ಪಿತೂರಿಯನ್ನೇ ಮಾಡಲಿಲ್ಲವೆ? ಇನ್ನೂ ಹತ್ತಿರದ ನಿದರ್ಶನವೆಂದರೆ, ಬ್ರಿಟಿಷರ ವಿರುದ್ಧ ಹೋರಾಡಲು ಸೇನಾ ನೆರವು ನೀಡುವುದಾಗಿ ಸುಲ್ತಾನ್ ಟೀಪುವಿಗೆ ವಚನ ನೀಡಿದ್ದ ಪುಣೆಯ ಪೇಶ್ವಾ ಬ್ರಾಹ್ಮಣ ದೊರೆ, ಕೊನೆಗೆ ಟೀಪುವಿಗೆ ವಿರುದ್ಧವಾಗಿ ಬ್ರಿಟಿಷರೊಡನೆ ಷಾಮೀಲಾಗಲಿಲ್ಲವೆ? ತದನಂತರ ಅದೇ ಪುಣೆಯ ಬ್ರಾಹ್ಮಣ ದೊರೆ, ೧೮೧೮ ರ ಡಿಸೆಂಬರ್ ೩೧ ರಂದು ಘಟಿಸಿದ "ಗೋರೇಗಾಂವ್ ಯುದ್ಧ"ದಲ್ಲಿ ಪೇಶ್ವೆಯ ಸಾವಿರಾರು ಸೈನಿಕರ ನರಮೇಧವೇ ನಡೆದ ನಂತರ, ಅದೇ ಬ್ರಿಟಿಷರಿಗೆ ಸಾಮ್ರಾಜ್ಯವನ್ನು ಶರಣಾಗತ ಮಾಡಿ, ಕೊನೆಗೆ ಅದೇ ಪೇಶ್ವಾ ಬ್ರಾಹ್ಮಣ ದೊರೆ ಬ್ರಿಟಿಷರಿಂದ ಪಿಂಚಣಿಗೆ ಕೈಯೊಡ್ಡಿದ ಈ ತಿರಬೋಕಿ ಬ್ರಾಹ್ಮಣ ದೊರೆ ಪರಮ ದೇಶದ್ರೋಹಿಯಲ್ಲವೆ? ಆದರೆ, ಅದೇ ಬ್ರಿಟಿಷರಿಗೆ ಯಾವುದೇ ರೀತಿಯಲ್ಲೂ ಶರಣಾಗತನಾಗದೆ, ರಣರಂಗದಲ್ಲಿ ಹೋರಾಡಿ, ತಾನು ಮಾತ್ರವಲ್ಲದೆ, ತನ್ನ ಸಂತಾನಗಳನ್ನು ಕೂಡ ನಾಡಿನ ಸ್ವಾತಂತ್ರ್ಯಕ್ಕೆ ಬಲಿದಾನ ನೀಡಿದ ಸುಲ್ತಾನ್ ಟೀಪು ಅಪ್ರತಿಮ ದೇಶಪ್ರೇಮಿಯಲ್ಲದೆ ಮತ್ತೇನು?

೧. ಲಿಂಗದೇವರು ಹಳೆಮನೆ, ಧೀರ ಟೀಪುವಿನ ಲಾವಣಿಗಳು, ಪು.೧೬-೧೭, ೨೦೦೩
೨. ಅದೇ. ಪು. ೨೫-೨೬   ೩. ಮಹಾತ್ಮಾ ಟೀಪು ಸುಲ್ತಾನ್, ಪು. ೩೫, ೧೯೯೧

✦ **ಡಾ. ಮ. ನ. ಜವರಯ್ಯ**, ಎಂ-೧೩, ೨ನೇ ಮೇನ್, ೨ನೇ ಕ್ರಾಸ್, ೨ನೇ ಸ್ಟೇಜ್, ಇ ಮತ್ತು ಎಫ್ ಬ್ಲಾಕ್, ದಟ್ಟಗಳ್ಳಿ, ರಾಮಕೃಷ್ಣನಗರ, ಮೈಸೂರು-೨೨ ✦

ಸೌಂದರ್ಯ

ರಾಧಿಕಾ ಕಾಖಂಡಿಕಿ

ಗಾ... ಗೂ...   ಹೊ... ಅಂಗಾ...   ಅಯಾ... ಯ್ಯಾ...
ಇದೆಂತಹ ತೋಂ ನೋಂ
ಯಾವ ಶ್ರುತಿಯೋ ಯಾವ ರಾಗವೋ
ತಿಳಿದಿಲ್ಲ, ಆದರೂ ಅದು ನನ್ನ
ಸೆಳೆದಿತ್ತು ಕೋಗಿಲೆಯ ಸ್ವರದಂತೆ.

ಪುಟ್ಟ ಪಾದಗಳೆರಡು ತಾಳ ಹಿಡಿದಿರುವಂತೆ
ಹಾಕದಿದ್ದರೂ ಹೆಜ್ಜೆ ಉಲಿದಿತ್ತು ಗೆಜ್ಜೆ
ಗತಿಯಿಲ್ಲ ಲಯವಿಲ್ಲ
ಸಾಧನೆಯ ಸೊತ್ತಿಲ್ಲ
ಕೇಳುತಲೇ ಧ್ವನಿ ಬೆರೆಸಿ ಮನವೆದ್ದು ಕುಣಿದಿತ್ತು.

ಕಪ್ಪು ಕಣ್ಣುಗಳೆರಡು
ಮುಗ್ಧತೆಯ ಕಿರಣಗಳು
ಅದಕಿಲ್ಲ ಒಳಿತು ಕೆಡಕು
ಗುರುತಿಸುವ ಛಲವು
ಮುದ್ದು ಮಾತಿಗೆ ಹೂ ನಗೆಯೆ ಉತ್ತರ

ಆ ತಿಳಿವ ನಗೆಯೆದುರು ಬಣ್ಣ, ರೂಪಕೆ ಬೆಲೆಯೆ?
ಅಪರೂಪ ಪ್ರೇಮ ಸೆಲೆ ಉಕ್ಕಿ ಹರಿಯೆ...

ತಿದ್ದಿ ತೀಡಿದ ಮುಖ
ಬಣ್ಣ ನಿಂಬೆಹಣ್ಣು
ಸಣ್ಣನ್ನ ಕೆಂಪು ತುಟಿ
ನಕ್ಕಾಗ ದಂತ ಛವಿ
ಇದುವೆ ಸೌಂದರ್ಯವೇ?

ಮಗುವಿನಂತಹ ಮನಸು
ತಿಳಿಗೊಳದ ಹೃದಯ
ಪ್ರೀತಿಯಿಂದಲಿ ಬೆರೆವ ನಡೆ ನುಡಿ ಇರೆ
ಇದಕಿಂತ ಸೌಂದರ್ಯ ಉಂಟೆ ಜಗದಲಿ ಬೇರೆ
ಕೃಷ್ಣ ವರ್ಣವೆ ಇರಲಿ ಮೂಗು ಮೊಂಡಾಗಿರಲಿ
ಆ ಪುಟ್ಟ ಮಗು ನಿನ್ನ ನೋಡಿ ನಕ್ಕಾಗ
ಕ್ಷಣವಾದರೂ ಅಹಂ ತೊರೆ
ತೊರೆದು ಮಣಿಯದಿರುವೆಯಾ?
ಆ ಸುಖವ ಮತ್ತೊಮ್ಮೆ
ಬಯಸದಿರುವೆಯಾ?

✦ **ರಾಧಿಕಾ ಕಾಖಂಡಿಕಿ,** 'ವೆಂಕಟಾಚಲ', ಶ್ರೀರಂಗ ಮಾರ್ಗ
ಕೆಲಗೇರಿ ರಸ್ತೆ, ಧಾರವಾಡ-೧ ✦

ನೆನಪ ನೆರಳಲಿ

ರಾಯಚೂರು ಲಕ್ಷ್ಮೀದೇವಿ ಶಾಸ್ತ್ರಿ

೧. ಓ... ಸಾವೇ...
ಸುಮ್ಮನೇಕೆ
ಹೊಂಚು ಹಾಕಿ
ಕಾಯುತ್ತಿರುವಿ?

ನನ್ನ ಕೊಲ್ಲಲು
ನಲ್ಲನ ನೆನಪೊಂದೇ
ಸಾಕಾಗಿದೆ.

೨. ನಿನ್ನಿಂದ
ನಾನೇನನ್ನೂ ಪಡೆಯದಿದ್ದರೂ
ನಿನ್ನ ನೆನಪಿನ ಕೋಳಿ
ಇಂದು ಕವಿತೆಯ
ಹೊನ್ನ ಮೊಟ್ಟೆಯಿಡುತಿದೆ.

೩. ಮರೆಯಲಾಗದೆ
ನಿನ್ನ ನೆನಪನ್ನೇ
ಹಾಸಿ ಹೊದ್ದಿರುವುದ ಕಂಡು
ಮುನಿಸಿಕೊಂಡ ನಿದ್ದೆ
ಸನಿಹ ಸುಳಿಯುತ್ತಿಲ್ಲ
ಇಂದಿಗೂ...

೪. ಭಾಷೆ ಉಳಿಯಿತು
ಕೊನೆಗೂ
ನಲ್ಲನಿಂದಲ್ಲ
ಅವನ ನೆನಪುಗಳಿಂದ.

✦ **ರಾಯಚೂರು ಲಕ್ಷ್ಮೀದೇವಿ ಶಾಸ್ತ್ರಿ,**
C/o ಜಿ. ನಾರಾಯಣರೆಡ್ಡಿ, ೯-೧೮-೩೮,
ಮಡ್ಡಿಪೇಟೆ, ರಾಯಚೂರು-೫೮೪ ೧೦೧ ✦

ರುಬಾಯಿ ಸಾಹಿತ್ಯ

ಜಂಬಣ್ಣ ಅಮರಚಿಂತ

ರುಬಾಯಿಗಳಿವು, ರುಬಾಯಿಗಳಿವು
ಅನುಭವ ಕಮ್ಮಟದ ರುಪಾಯಿಗಳಿವು
ಇಲ್ಲಿಯೂ ಸಲ್ಲುವವು ಅಲ್ಲಿಯೂ ಸಲ್ಲುವವು
ಕಾಯಕ ಪರಿಣಾಮಿ ಕಮಾಯಿಗಳಿವು

ರುಬಾಯಿ ಎನ್ನುವ ಶಬ್ದ ಅರಬೀ ಭಾಷೆಯ ಮೂಲದ 'ರುಬ್' ಎಂಬ ಶಬ್ದದಿಂದ ಹುಟ್ಟಿದೆ. 'ರುಬ್' ಎಂಬ ಶಬ್ದಕ್ಕೆ ರಸ, ಸಾರ, ನಾಲ್ಕು ಎಂಬ ವಿವಿಧಾರ್ಥಗಳಿವೆ. ರುಬಾಯಿ ಎಂದರೆ ಸಾರವತ್ತಾದ, ರಸವತ್ತಾದ, ನಾಲ್ಕು ಸಾಲಿನದು ಎಂದರ್ಥ. ರುಬ್ ಪುಲ್ಲಿಂಗ ಶಬ್ದವಾದರೆ, ರುಬಾಯಿ ಸ್ತ್ರೀಲಿಂಗ ಶಬ್ದ.

ಉರ್ದುವಿನಲ್ಲಿ ಗಜಲ್‌ಗಿರುವ ಸ್ಥಾನ, ಮಾನ ರುಬಾಯಿಗೂ ಇದೆ. ರುಬಾಯಿ ಬರೆಯಲಾರದ ಕವಿ, ಕವಿಯೇ ಅಲ್ಲವೆಂಬ ಮಾತು ಉರ್ದೂ ಸಾಹಿತ್ಯದಲ್ಲಿ ಮನೆಮಾತಾಗಿದೆ.

ರುಬಾಯಿ ಸಾಹಿತ್ಯ ಪ್ರಕಾರವು ಮೊದಲು ಇರಾನಿನಲ್ಲಿ ಹುಟ್ಟಿ ಬೆಳೆಯಿತು. ಇದನ್ನು ಬೆಳೆಸಿದವರು ಫಾರ್‌ಸಿಯ ಮಹಾಕವಿಗಳಾದ ಫಿರ್‌ದೌಸೀ, ಉಮರ್ ಖೈಯಾಮ್ ಮತ್ತು ಹಾಫಿಜ್. ಉರ್ದುವಿನಲ್ಲಿ ಸುಪ್ರಸಿದ್ದ ಕವಿಗಳೆಲ್ಲ ರುಬಾಯಿಗಳನ್ನು ರಚಿಸಿದ್ದಾರೆ. ಆದರೆ ರುಬಾಯಿ ಸಾಹಿತ್ಯ ಪ್ರಕಾರವನ್ನು ಪ್ರಸಿದ್ಧಿಯ ತುಟ್ಟತುದಿಗೆ ಮುಟ್ಟಿಸಿದವರು ಅಮ್‌ಜದ್ ಹೈದರಾಬಾದೀ ಮತ್ತು ರಾಘವೇಂದ್ರ ಜಜ್ಬ್ ಆಲಮ್‌ಪೂರೀ ಎನ್ನುವವರು. ಆಲಮ್‌ಪೂರಿ ಯವರು ಮೂಲತಃ ನಮ್ಮ ಭಾಗದ ಗಂಗಾವತಿ ತಾಲೂಕಿನವರಾಗಿದ್ದು, ದತ್ತುಪುತ್ರರಾಗಿ ಆಲಮ್‌ಪುರಕ್ಕೆ ಹೋದರು. ಇವರು ಅಚ್ಚ ಕನ್ನಡಿಗರು; ಹೈದರಾಬಾದಿನ ಅಮ್‌ಜದ್ ಕವಿಯ ಶಿಷ್ಯರಾಗಿ ರುಬಾಯಿಗಳನ್ನು ರಚಿಸಿ ದಖ್ಖನಿನ ಉಮರ್ ಖೈಯಾಮ್ ಎಂದು ಪ್ರಸಿದ್ಧಿ ಪಡೆದರು.

ರುಬಾಯಿ, ಕನ್ನಡ ಚೌಪದಿ ಮತ್ತು ಕಂದಪದ್ಯ ರೂಪಗಳನ್ನು ಹೋಲುವ ನಾಲ್ಕು ಸಾಲಿನ ಛಂದೋರೂಪ. ಈ ಹಿನ್ನೆಲೆಯಲ್ಲಿ ರುಬಾಯಿ ಎಂದರೆ ಕೆಲವರು ಅಂತ್ಯಪ್ರಾಸವುಳ್ಳ ಚೌಪದಿ ಎಂದೂ ಹೇಳಿರುವುದುಂಟು. ಇದರ ನಾಲ್ಕು ಪಾದಗಳಲ್ಲಿ ಪ್ರಥಮ, ದ್ವಿತೀಯ, ಚತುರ್ಥ ಪಾದಗಳಲ್ಲಿ ಪ್ರಾಸ, ಅನುಪ್ರಾಸಗಳಿರಲೇಬೇಕೆಂಬ ನಿಯಮವಿದೆ. ಮೂರನೇ ಪಾದದಲ್ಲಿ ಅಂತ್ಯಪ್ರಾಸದ ನಿಯಮವಿರುವುದಿಲ್ಲ. ನಾಲ್ಕು ಸಾಲುಗಳಲ್ಲಿ ಮೊದಲಿನ ಎರಡು ಸಾಲುಗಳು ವ್ಯಾಖ್ಯಾನ ನೀಡಿದರೆ ಮೂರು, ಮತ್ತು ನಾಲ್ಕನೇ ಸಾಲುಗಳು ಭಾವನೆಯನ್ನು ಉದ್ದೀಪನಗೊಳಿಸುತ್ತವೆ. ರುಬಾಯಿಯ ಮೊದಲ ಮೂರು ಸಾಲುಗಳು ಅದರ ದೇಹವಾದರೆ, ನಾಲ್ಕನೇ ಸಾಲು ಅದರ ಆತ್ಮವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದುದರಿಂದ ರುಬಾಯಿಗಳನ್ನು ಬರೆಯುವಾಗ ಕವಿಗಳು ಮೂರು ಮತ್ತು ನಾಲ್ಕನೇ ಸಾಲುಗಳಿಗೆ ವಿಶೇಷ ಮಹತ್ವ ನೀಡುವುದುಂಟು.

ಹಿಂದಿಯಲ್ಲಿ ರುಬಾಯಿಗಳನ್ನು ರಚಿಸಿದ ಸುಪ್ರಸಿದ್ಧ ಹಿಂದೀ ಕವಿಗಳು ಬಚ್ಚನ್, ನೀರಜ್ ಮುಂತಾದವರು. ಕವಿ ನೀರಜರು, "ರುಬಾಯಿ ರಚನೆಯಲ್ಲಿ ಅದರ ನಾಲ್ಕನೇ ಸಾಲು ಮೊದಲು ಬರೆಯಲ್ಪಡುತ್ತದೆ. ತದನಂತರ ಮೂರನೇ, ಎರಡನೇ ಸಾಲು, ಕೊನೆಗೆ ಒಂದನೇ ಸಾಲು, ಹೀಗೆ ಇದೊಂದು ರೀತಿಯ 'ಉಲ್ಟೀ ಗಂಗಾ' " ಎಂದು ಹೇಳಿದ್ದಾರೆ.

ರುಬಾಯಿ ಛಂದಸ್ಸನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅದು ಗಜಲ್‌ನ ಒಂದು ಮತ್‌ಲಾ ಮತ್ತು ಒಂದು ಶೇರ್‌ಅನ್ನು ಒಳಗೊಂಡಿರುತ್ತದೆ. ಆದರೆ ವ್ಯಕ್ತಪಡಿಸುವ ವಿಚಾರ ಮಾತ್ರ ಒಂದೇ ಆಗಿರಬೇಕು; ಬೇರೆ ಬೇರೆಯಾಗಿರಬಾರದು. ಮಾತ್ರಾಗಣ ಛಂದಸ್ಸನ್ನು ಉಪಯೋಗಿಸಿಕೊಂಡು ರುಬಾಯಿಗಳನ್ನು ರಚಿಸಿದರೆ ಪದಲಾಲಿತ್ಯದಿಂದ ಕೂಡಿದ ಗೇಯಗುಣ ಪ್ರಾಪ್ತವಾಗುವುದು.

ಈ ಹಿಂದೆ ರುಬಾಯಿಗಳಲ್ಲಿ ನೀತಿ, ಉಪದೇಶ, ಅಧ್ಯಾತ್ಮ, ವೇದಾಂತ ವಿಷಯಗಳಿಗೆ ಹೆಚ್ಚಿನ ಮಹತ್ವ ನೀಡಿದ್ದುಂಟು. ಕಾಲ ಬದಲಾದಂತೆ ಕಾಲಕ್ಕನುಗುಣವಾಗಿ ಜೀವನದ ವಿವಿಧ ಅನುಭವಗಳಿಗೆ; ಪ್ರೀತಿ, ಪ್ರೇಮ, ನೋವು, ನಲಿವು ದೇಶಪ್ರೇಮ, ನಿಸರ್ಗಪ್ರೇಮ, ಪ್ರಗತಿಪರ ವಿಚಾರಗಳಿಗೆ ಆದ್ಯತೆ ನೀಡಲಾಗಿದೆ. ತೆಲುಗಿನ ಮಹಾಕವಿ ಡಾ. ಸಿನಾರೆ ಅವರು ರುಬಾಯಿ ಛಂದಸ್ಸಿನ ಆಧಾರದ ಮೇಲೆ 'ಪ್ರಪಂಚಪದಲು' ಎಂಬ ಕೃತಿಯಲ್ಲಿ 'ಪಂಚಪದಿ' ಎಂಬ ಐದು ಸಾಲಿನ ಹೊಸ ಛಂದಸ್ಸನ್ನು ಹುಟ್ಟುಹಾಕಿದ್ದಾರೆ. ರುಬಾಯಿಯ ನಾಲ್ಕು ಸಾಲುಗಳಿಗೆ ಮತ್ತೊಂದು ಸಾಲು ಜೋಡಿಸಿ ಪಂಚಪದಿಗಳನ್ನು ರಚಿಸಿದ್ದಾರೆ. ಇದು ಉರ್ದುವಿನ 'ಮಖಮ್ಮಸ್' ಎಂಬ ಐದು ಸಾಲಿನ ಛಂದೋರೂಪವನ್ನು ಹೋಲುತ್ತದೆ.

ಕನ್ನಡದಲ್ಲಿ ಉಮರ್ ಖೈಯಾಮ್‌ನ 'ರುಬಾಯಿಯಾತ್-ಎ-ಉಮರ್ ಖೈಯಾಮ್' ಎಂಬ ಫಾರ್‌ಸೀ ಕಾವ್ಯಗ್ರಂಥವನ್ನು ಡಿ.ವಿ.ಜಿ. ಕನ್ನಡಕ್ಕೆ ಅನುವಾದಿಸಿದ್ದಾರೆ. ಉಮರನ ಕಾವ್ಯ ರುಬಾಯಿ ಛಂದಸ್ಸಿನಲ್ಲಿದೆ. ಅದನ್ನು ಫಿಟ್ಸ್‌ಜೆರಾಲ್ಡ್‌ನೆಂಬ ಆಂಗ್ಲ ಕವಿ ರುಬಾಯಿ ಛಂದಸ್ಸಿನಲ್ಲಿ ಆಂಗ್ಲ ಭಾಷೆಗೆ ಸುಂದರವಾಗಿ ತರ್ಜುಮೆಗೊಳಿಸಿದ್ದಾನೆ. ಡಿ.ವಿ.ಜಿ.ಯವರು 'ಉಮರನ ಒಸಗೆ'ಯನ್ನು ರುಬಾಯಿ ಛಂದಸ್ಸಿನಲ್ಲಿ ಕನ್ನಡಕ್ಕೆ ಅನುವಾದಿಸಿಲ್ಲವಾದರೂ ರುಬಾಯಿಗೆ ಹತ್ತಿರವಾದ ಚೌಪದಿ ಛಂದೋರೂಪವನ್ನು ಬಳಸಿಕೊಂಡು ಅತ್ಯಂತ ಸಮರ್ಥವಾಗಿ ಸುಂದರವಾಗಿ ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಛಂದಸ್ಸಿನ ನಿಯಮಗಳನ್ನು ಮೀರಿದ್ದರೂ ಹೊಸ ಛಂದಸ್ಸನ್ನು ಕಟ್ಟಿಕೊಟ್ಟಿದ್ದಾರೆ. ಡಿ.ವಿ.ಜಿ.ಯವರ ಅನುವಾದವನ್ನು ಓದಿದಾಗ ಅವರು ರುಬಾಯಿ ಛಂದಸ್ಸಿನ ನಿಯಮ ಮುರಿದಂತೆ ಅನಿಸುವುದಿಲ್ಲ. ಅಷ್ಟು ಸುಂದರವಾಗಿ, ಸುಲಲಿತವಾಗಿ ಅದನ್ನು ಕನ್ನಡಕ್ಕೆ ತಂದಿದ್ದಾರೆ. ಅದು ಅನುವಾದ ಕೃತಿ ಎನಿಸದೆ ಸ್ವತಂತ್ರ ಕೃತಿ ಎನಿಸುತ್ತದೆ.

ರಾಘವೇಂದ್ರ ರಾವ್ ಜಜ್ಬ್‌ರವರ ಉರ್ದೂ ರುಬಾಯಿಗಳನ್ನು ಡಾ. ಸೂರ್ಯಕಾಂತ ಗುಣಕಿಮಠ ಮತ್ತು ಶರಣಪ್ಪ ಅವರು ಕನ್ನಡ ಜಾಯಮಾನಕ್ಕನುಗುಣವಾಗಿ ಕನ್ನಡಕ್ಕೆ ತಂದಿದ್ದಾರೆ. ಶಾಂತರಸರು ಕನ್ನಡದಲ್ಲಿ ಬಿಡಿ ರುಬಾಯಿಗಳನ್ನು ರಚಿಸಿದ್ದಾರೆ. ಆದರೆ ಅವೆಲ್ಲ ಸೇರಿ ಪುಸ್ತಕ ರೂಪದಲ್ಲಿ ಬರಬೇಕು. ಕೊಪ್ಪಳದ ಕೆ. ಬಿ. ಬ್ಯಾಳಿಯವರು 'ಕನ್ನಡಕ್ಕೆ ರುಬಾಯಿ' ಎಂಬ ಕೃತಿಯಲ್ಲಿ ಹಿಂದೀ ಕವಿ ನೀರಜರ ೮೫ ರುಬಾಯಿಗಳನ್ನು ಕನ್ನಡಕ್ಕೆ ಅನುವಾದಿಸುವುದರ ಜೊತೆಗೆ ಸ್ವತಂತ್ರವಾಗಿ, ಶುದ್ಧಾಂಗವಾಗಿ ತಾವು ಕನ್ನಡದಲ್ಲಿ ರಚಿಸಿದ ೨೫ ರುಬಾಯಿಗಳನ್ನೊಳಗೊಂಡ ಒಂದು ಸಂಕಲನವನ್ನು ಪ್ರಕಟಿಸಿದ್ದಾರೆ. ಇದು ಕನ್ನಡದಲ್ಲಿ ಪ್ರಕಟಗೊಂಡ ಇಂಥ ಮೊದಲ ಸಂಕಲನವೆನ್ನಬಹುದು. ಕೊನೆಯದಾಗಿ ಡಿ.ವಿ.ಜಿ. ಯವರು ರುಬಾಯಿ ಕುರಿತಂತೆ ಹೇಳಿದ ಮಾತುಗಳನ್ನು ಗಮನಿಸೋಣ :

"ರುಬಾಯ್ ಕವನಗಳಲ್ಲಿ ಪ್ರಾಯಶಃ ಪ್ರತಿಯೊಂದು ಪದ್ಯವೂ ಒಂದು ಸ್ವತಂತ್ರ ಕಾವ್ಯದಂತೆ... ಒಂದೊಂದು ಪದ್ಯವೂ ಒಂದೊಂದು ಬಿಡಿ ಅಲೆ. ಒಂದೊಂದು ಸುಂಟರುಗಾಳಿ. ಆದದ್ದರಿಂದ ಈ ಪದ್ಯಗಳನ್ನು ಒಂದು ಸಾಮಾನ್ಯ ಕಥೆಯನ್ನೋದುವಂತೆ.- ಉದ್ದಕ್ಕೆ.

ಅವಸರವಸರವಾಗಿ, ನಡುನಡುವೆ ಮನಸಕ್ಕೆ ಬಿಡುಕೊಡದೆ,– ಓದತಕ್ಕದ್ದಲ್ಲ. ಒಂದೊಂದನ್ನೂ ಬೇರಬೇರೆಯಾಗಿ ಗಮನಿಸಿ ಮನನ ಮಾಡಿಕೊಂಡಲ್ಲದೆ ಪದ್ಯದ ಅಂತರ್ಭಾವ ಸಮಗ್ರವಾಗಿ ಮನಸ್ಸಿಗೆ ದೊರೆಯಲಾದರು... ಒಂದೊಂದು ಪದ್ಯವನ್ನೂ, ಪೆಪ್ಪರ್‌ಮೆಂಟ್‌ನ್ನು ಒಂದು ಸಲಕ್ಕೆ ಒಂದನ್ನೇ ಬಾಯಲ್ಲಿರಿಸಿಕೊಂಡು ಸಾವಕಾಶವಾಗಿ ಚಪ್ಪರಿಸಿ ನೀರೂರಿಸಿಕೊಳ್ಳುವಂತೆ –ಸಾವಧಾನವಾಗಿ ಸವಿದರೆ ಪ್ರಯೋಜನ ಸಂಪೂರ್ಣವಾಗಿ ದೊರತೀತು."

ಡಿ.ವಿ.ಜಿ.ಯವರ ಈ ಮಾತುಗಳನ್ನು ಓದುಗರು ಮನದಲ್ಲಿಟ್ಟುಕೊಂಡು ರುಬಾಯಿಗಳನ್ನು ಓದಿದರೆ ರುಬಾಯಿಯಲ್ಲಿ ಅಡಗಿರುವ ಕಾವ್ಯದ ಸೊಬಗನ್ನು ಮನದುಂಬಿ ಸವಿಯಬಹುದು. ಫಾರ್‌ಸೀ, ಹಿಂದೀ, ಉರ್ದುವಿನಲ್ಲಿ ರಚಿಸಿದ ಕನ್ನಡಕ್ಕೆ ಅನುವಾದಿಸಲ್ಪಟ್ಟ ರುಬಾಯಿಗಳಲ್ಲದೆ, ಸ್ವತಂತ್ರವಾಗಿ ಕನ್ನಡದಲ್ಲಿ ರಚಿಸಿದ ಕೆಲವು ರುಬಾಯಿಗಳನ್ನು ಓದುಗರ ಅವಲೋಕನಕ್ಕಾಗಿ ಇಲ್ಲಿ ನೀಡಲಾಗಿದೆ. ಡಿ.ವಿ.ಜಿ.ಯವರು ಅನುವಾದಿಸಿದ ಉಮರನ ಒಂದೆರಡು ರುಬಾಯಿಗಳನ್ನು ಗಮನಿಸೋಣ. ಇವನ್ನು 'ಉಮರನ ಒಸಗೆ'ಯಿಂದ ಆಯ್ದುಕೊಳ್ಳಲಾಗಿದೆ.

೧. ಅಲ್ಲಿ ಮರದಡಿಯಲ್ಲಿ ನಲ್ಗಾವ್ಯವೊಂದಿರಲು,
ರೊಟ್ಟಿಯೊಂದಿನಿಸೊಂದು ಕುಡಿಕೆಯಲಿ ಮಧುವು,
ಮೇಣ್ ಮುಗುದೆ, ನೀನೆನ್ನ ಬಳಿ ಕುಳಿತು ಪಾಡಲಹ !
ಕಾಡಾದೊಡೇನದುವೆ ಸಗ್ಗಸುಖವೆನಗೆ.

೨. ಓ ದೇವ, ನೀನೆನ್ನ ಮಧುಘಟವನೊಡೆದಿರುವೆ;
ನೀನೆನ್ನ ಸಂತಸದ ಕದವ ಮುಚ್ಚಿರುವೆ.
ಕುಡಿದವನು ನಾನು; ಮತ್ತೇರಿದಂತಿಹೆ ನೀನು;
ನಾಂ ತಪ್ಪೊರೆಯಲೆನ್ನ ಬಾಯ್ಗಿಕ್ಕು ಮಣ್ಣು.

ರಾಘವೇಂದ್ರರಾವ್ ಜಬ್ಜ್‌ರವರ ಉರ್ದೂ ರುಬಾಯಿಯ ಕನ್ನಡ ಅನುವಾದ (ಜಂಬಣ್ಣ ಅಮರಚಿಂತ) ಇಲ್ಲಿದೆ :

ಅಧಿಕಾರದಾಹಿಗಳಿಗೆ ಕೇಳಿದ ಅಧಿಕಾರ ಕೊಡು
ಧನದಾಹಿಗಳಿಗೆ ಸಿರಿ ಭಂಡಾರ ಕೊಡು
ಬೇಡಿದವರಿಗೆ ಬೇಡಿದೆಲ್ಲವನು ಕೊಡು
ದೇವರೇ! ನನಗೆ ಮಾನವನಾಗುವ ವರ ಕೊಡು.

ಕೆ. ಬಿ. ಬ್ಯಾಳಿಯವರು ಹಿಂದೀ ಕವಿ ನೀರಜರ ರುಬಾಯಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಒಂದೆರಡು ರುಬಾಯಿಗಳನ್ನು ನೋಡಿ :

೧. ಜೀವನವು ಗುರಿಯತ್ತ ಸಾಗುವ ದಾರಿಯಾಗಿದೆ.
ಜೀವನವು ಆನಂದದಿಂದ ಹಾಡುವ ಹಾಡಾಗಿದೆ.
ನಾವು ಆರಾಮದಿಂದ ಮಲುಗುವ ಬದನಾಮಿ,
ಜೀವನ ಬಿರುಗಾಳಿಯೊಂದಿಗೆ ಎದುರಾಳಿಯಾಗಿದೆ.

೨. ಪ್ರೀತಿ ಧರ್ಮವೂ ಹೌದು. ಜ್ಞಾನವೂ ಹೌದು
ಪ್ರೀತಿ, ಜ್ಞಾನದ ಅಭಿಮಾನವೂ ಹೌದು,

ಪ್ರೀತಿಯಲ್ಲಿ ಯಾರೂ ಕಪ್ಪಲ್ಲ, ಬಿಳುಪಲ್ಲ
ಪ್ರೀತಿ ಜೀವನವೂ ಹೌದು, ಜೀವಾಳವೂ ಹೌದು.

ನಮ್ಮ ಕವಿಗಳು ರಚಿಸಿದ ಕೆಲವು ಕನ್ನಡ ರುಬಾಯಿಗಳನ್ನು ಅವಲೋಕಿಸಿರಿ:

ನೂರು ಹೆಜ್ಜೆಗಳಿದ್ದರೂ ಯಾಕೆ ಅಳುತಿದೆ ದಾರಿ
ಗಂಧ ಮಾವುಗಳಿದ್ದರೂ ಯಾಕೆ ಅಳುತಿದೆ ದಾರಿ
ಕಂಪು ಸೂಸುವ ಪುಷ್ಪಗಂಧಿ ತಳಿರಡಿಗಳ
ಹೆಜ್ಜೆಯಿಲ್ಲದೆ ಒಡೆದು ಚೂರಾಗಿ ಅಳುತಿದೆ ದಾರಿ. (ಶಾಂತರಸ)

ಇದು ನನ್ನ ಬದುಕು ಇದು ನನ್ನ ಪ್ರೀತಿ ಯಾರದೇನು
ಕೊಡಬಹುದು ಕಷ್ಟ, ತೆಗಿಬಹುದು ಜೀವ, ಇದಕಿಂತ ಹೆಚ್ಚಿಗೇನು
ವಿಧಿ ಮತ್ತು ವೈರಿ ಅಸಿಯಿಂದ ತಿವಿಯುತಿರಲಿ
ಕರಿಯಾಗದೆಂದು ಈ ಪ್ರೀತಿ ಬೆಳೆದು ತಬ್ಬುವುದು ಜಗವನು (ಶಾಂತರಸ)

ಬೆಳೆ ನಾಶವಾಗುವಷ್ಟು ಮಳೆಯಾಗಬಾರದು
ದೇಶ ನಾಶವಾಗುವಷ್ಟು ದ್ವೇಷ ಬೆಳೆಯಬಾರದು
ಮಳೆಯಾಗಿ ಬೆಳೆ ಬರಲಿ, ಬೆಳೆ ಬಂದು ದೇಶ ವೃದ್ಧಿಸಲಿ
ನಾನಿದ್ದರೆ ದೇಶವೆನ್ನುವ ಭಾವ ಬೆಳೆಯಬಾರದು. (ಕೆ.ಬಿ.ಬ್ಯಾಳಿ)

ತೆಗಳಿಕೆ ಮನುಷ್ಯನನ್ನು ಮುನ್ನುಗ್ಗುವಂತೆ ಮಾಡುತ್ತದೆ
ಹೊಗಳಿಕೆ ಹೊನ್ನ ಶೂಲವಾಗಿ ಚುಚ್ಚಿ ಸಾಯಿಸುತ್ತದೆ
ಹೊಗಳಿಕೆ, ತೆಗಳಿಕೆಗಳೆರಡೂ ಮನುಷ್ಯನ ಮಾನದಂಡ
ಹೊಗಳಿಕೆ ತೆಗಳಿಕೆಗೆ ಜಗ್ಗದವನೇ ಜಗವ ಗೆಲ್ಲುತ್ತಾನೆ. (ಕೆ.ಬಿ.ಬ್ಯಾಳಿ)

ಜಗದೆಲ್ಲಾ ಭಾಷೆಗಳನು ಅರಿತಿರುವೆವು
ಪ್ರೇಮದ ಭಾಷೆಯನು ಮರೆತಿರುವೆವು
ಭಾಷೆಗಳಲಿ ಇದು ಹೃದಯದ ಮೂಲ ಭಾಷೆ
ಅರಿಯದೆ ದ್ವೇಷದ ಬೀಜ ಬಿತ್ತುತಿರುವೆವು. (ಜಂಬಣ್ಣ ಅಮರಚಿಂತ)

ಒಂದು ಹೊಟ್ಟೆ ತುಂಬಲು ನೂರಾರು ದಾರಿ ಮೆಟ್ಟಿದೆ
ಒಂದು ಹೃದಯದ ಪ್ರೀತಿಗಾಗಿ ನೂರಾರು ಎದೆಕದ ತಟ್ಟಿದೆ
ಒಂದು ಪಟ್ಟು ಸುಖಕೆ, ಪಟ್ಟ ದುಃಖ ನೂರರಷ್ಟಿದೆ
ಒಂದು ಕವನ ಕಟ್ಟಲು ಅದೆಷ್ಟೋ ಶಬ್ದ ಕುಟ್ಟಿದೆ. (ಜಂ. ಅಮರಚಿಂತ)

ಭೂಮಿತತ್ತ್ವವಿದೆ ನಮ್ಮಲ್ಲಿ ಸಹನಾಶೀಲರಾಗೋಣ
ಆಕಾಶತತ್ತ್ವವಿದೆ ನಮ್ಮಲ್ಲಿ ವಿಕಾಸಶೀಲರಾಗೋಣ
ಪ್ರಕೃತಿತತ್ತ್ವವಿದೆ ನಮ್ಮಲ್ಲಿ ಪ್ರಕೃತಿಕೃತಿಯಾಗೋಣ
ವಿಶ್ವತತ್ತ್ವವಿದೆ ನಮ್ಮಲ್ಲಿ ವಿಶ್ವಶೀಲರಾಗೋಣ. (ಜಂ. ಅಮರಚಿಂತ)

✦ ಜಂಬಣ್ಣ ಅಮರಚಿಂತ, ೮-೧೧-೧೯೮೧-೭೯೬, 'ಅಮರಚಿಂತ ನಿಲಯ'
ವಿದ್ಯಾನಗರ, ರಾಯಚೂರು-೫೮೪ ೧೦೩ ✦

ಭಿನ್ನಹಕೆ... : 'ಅರಮನೆ'ಯ ನಿವೇದನೆ

ಕುಂ. ವೀರಭದ್ರಪ್ಪ

ನನ್ನ ಎಲ್ಲ ಓದುಗರಿಗೂ ಆಗಿರುವಂಥ ಸಂತೋಷ ನನಗೂ ಆಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಆಯಾ ಪ್ರಾದೇಶಿಕ ಭಾಷೆಗಳ ಮಟ್ಟಿಗೆ ನೋಬಲ್ ಆವಾರ್ಡೇ ಆಗಿದೆ. ಪ್ರತಿಯೊಬ್ಬ ಲೇಖಕ ಇಂಥದೊಂದು ಪುರಸ್ಕಾರಕ್ಕೆ ಭಾಜನ ತಾನಾಗಬೇಕೆಂದು ಕನಸು ಕಾಣುತ್ತಾನೆ. ತನ್ನ ಪ್ರತಿ ಕೃತಿ ಪ್ರಕಟವಾದಾಗಲೂಇಂಥದ್ದೊಂದು ನಿರೀಕ್ಷೆ ಇಟ್ಟುಕೊಂಡಿರುತ್ತಾನೆ. ಬಾರದೇ ಇದ್ದಾಗ ಇನ್ನೊಂದು ಶ್ರೇಷ್ಠ ಕೃತಿಯ ನಿರ್ಮಾಣಕ್ಕೆ ಪ್ರಯತ್ನಿಸುತ್ತಾನೆ. ಅವನು ತನ್ನ ಜೀವಿತಾವಧಿಯಲ್ಲಿ ಸೃಷ್ಟಿಶೀಲ ಕ್ರಿಯೆಯಲ್ಲಿ ಸದಾ ನಿರತನಾಗಿರುತ್ತಾನೆ. ಅವನಿಂದ ಪ್ರತಿ ಸಲವು ಉತ್ತಮವೆನ್ನಬಹುದಾದ ಕೃತಿಗಳು ಹೊರಬರುತ್ತಲೇ ಇರುತ್ತವೆ. ಅವನೊಳಗೆ ಒಂದು ಸಮುದಾಯವೇ ಕ್ರಿಯಾಶೀಲವಾಗಿರುತ್ತದೆ. ಅವನು ಆ ಸಮುದಾಯದ ಪ್ರತಿನಿಧಿಯಾಗಿರುತ್ತಾನೆ. ಅವನ ಸೃಜನಶೀಲ ಯಶಸ್ಸು ತನ್ನ ಆ ಒಂದು ಸಮುದಾಯದ ಯಶಸ್ಸೇ ಆಗಿರುತ್ತದೆ. ತನಗೇ ಲಭಿಸಿದ ರೀತಿಯಲ್ಲಿ ಸಮುದಾಯ ಸಂಭ್ರಮಪಡುತ್ತದೆ. ಬೇರೆ ಯಾವುದೇ ಪುರಸ್ಕಾರ ಪಡೆದಾಗ ಇಂಥ ಸಂಭ್ರಮ ಸಾಂಕ್ರಾಮಿಸುವುದಿಲ್ಲ. ಆದರೆ ಅಕಾಡೆಮಿಯ ಗೌರವ ಪ್ರಾಪ್ತವಾದಾಗ ಮಾತ್ರ ಈ ಸಾಮುದಾಯಿಕ ಸಂತೋಷ ಸಾಧ್ಯ. ನನ್ನ ಮಟ್ಟಿಗಂತೂ ಹೀಗೆಯೇ ಆಯಿತು. ಕನ್ನಡದ ಹಿರಿಕಿರಿಯ ಸಹಸ್ರಾರು ಸೃಜನಶೀಲ ಮನಸ್ಸುಗಳು ಒಕ್ಕೊರಲಿನಿಂದ ಸಂಭ್ರಮಿಸಿದವು. ಮುಕ್ತ ಕಂಠದಿಂದ ಅಭಿನಂದಿಸಿದವು.

ಕಳೆದೊಂದು ತಿಂಗಳಲ್ಲಿ ನನ್ನ ಲೇಖಕನ ಸ್ಥಾನಮಾನ ಗಟ್ಟಿಗೊಳ್ಳುತ್ತಲೇ ಹೋಯಿತು. ಮುಖ್ಯವಾಗಿ ಕಥೆ ಕಾದಂಬರಿ ಪ್ರಕಾರಗಳಿಗೆ ಸಂಬಂಧಿಸಿದಂತೆ ಸುಮಾರು ಮೂವತ್ತೈದು ಕೃತಿಗಳನ್ನು ಬರೆದಿದ್ದರೂ ಲೇಖಕ ಎಂಬುದರ ಬಗ್ಗೆ ನನಗೇ ಸಂದೇಹವಿತ್ತು. ಯಾರಾದರೂ ಸಾಹಿತಿ ಎಂದಾಗ ನಾನು ಮುಜುಗರಕ್ಕೊಳಗಾಗುತ್ತಿದ್ದೆ. ಮೊನ್ನೆ ವರೆಗೆ ಅದನ್ನು ನಾನು ಬಯ್ಗಳಿಗೆ ಸಂಬಂಧಿಸಿದ ಒಂದು ಗೌರವಾನ್ವಿತ ಪದವೆಂದೇ ಭಾವಿಸಿದ್ದೆ. ಪ್ರತಿ ಕೃತಿಯ ಮೂಲಕ ಲೇಖಕ ಎಂಬ ಶೂನ್ಯ ಸಿಂಹಾಸನವನ್ನೇರಲು ಅಹರ್ನಿಶಿ ಶ್ರಮಿಸಿ ವಿಫಲನಾಗುತ್ತಿದ್ದೆ. ಶ್ರೇಷ್ಠ ಕೃತಿ ರಚಿಸುವ ಜವಾಬ್ದಾರಿಯನ್ನು ಪುರಸ್ಕಾರಗಳೆಲ್ಲಿ ಕಿತ್ತುಕೊಳ್ಳುವವೋ ಎಂದು ಆತಂಕಗೊಳ್ಳುತ್ತಿದ್ದೆ. ಇಂಥದ್ದೊಂದು ಮುಜುಗರ, ನಾಚಿಕೆಯ ಪಾಠವನ್ನು ನನ್ನಂಥ ಗ್ರಾಮೀಣ ಮೂಲದ ಬರಹಗಾರರಿಗೆ ಕನ್ನಡ ಸಾಹಿತ್ಯ ಪರಂಪರೆ ಹೇಳಿಕೊಟ್ಟಿದೆ ಎನ್ನುವುದು ಹೆಮ್ಮೆಯ ಸಂಗತಿ.

ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿರುವ ಪಂಪ, ರನ್ನ, ಕುಮಾರವ್ಯಾಸ, ಕುವೆಂಪು ಮೊದಲಾದವರು ಒಬ್ಬರನ್ನೊಬ್ಬರು ನೋಡಿ ನಾಚಿಕೊಳ್ಳುತ್ತಿದ್ದರೆನ್ನುವುದು ಕನ್ನಡ ಸಾಹಿತ್ಯದ ವಿಶೇಷ. ಇಂಥ ನಾಚಿಕೆಯ ಕಾರಣದಿಂದಾಗಿಯೇ ನಮ್ಮವರೆಲ್ಲ ಜಾಗತಿಕ ಸಾಹಿತ್ಯಕ್ಕೆ ಮಾದರಿ ಎನ್ನಬಹುದಾದ ಅತ್ಯುತ್ತಮ ಕೃತಿಗಳನ್ನು ಸಾರಸ್ವತ ಲೋಕಕ್ಕೆ ಕೊಡಮಾಡಿದರು. ಇಂಥ ನಾಚಿಕೆಯ ಕಾರಣದಿಂದ ಏಳೆಂಟು ಕೋಟಿ ಕನ್ನಡಿಗರ ಜೀವನಾಡಿಯಾಗಿರುವ ಕನ್ನಡ ಪದೇ ಪದೇ ವಂಚನೆ ಮತ್ತು ತುಳಿತಕ್ಕೊಳಗಾಗುತ್ತಿರುವುದು ವರ್ತಮಾನದ ದುರಂತ. ಅದಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡಲು

ವಯೋವೃದ್ಧ ವಿದ್ವಾಂಸರು ಉಪವಾಸ ಸತ್ಯಾಗ್ರಹ ಮಾಡುವಂಥ ಅನಿವಾರ್ಯ ಪ್ರತಿಭಟನೆಗೆ ತೊಡಗಿರುವುದು ವಿಪರ್ಯಾಸ. ಈ ಕಾರಣಕ್ಕಾಗಿಯೇ ನಮ್ಮ ಜನಪ್ರತಿನಿಧಿಗಳು ಕಿಂಕರ್ತವ್ಯಮೂಢರಾಗಿರುವುದು. ಲಜ್ಜೆ ಎನ್ನುವುದು ದೌರ್ಬಲ್ಯವಲ್ಲ, ಅದೂ ಒಂದು ಪ್ರತಿಭಟನೆಯ ಶಕ್ತಿ ಎನ್ನುವುದನ್ನು ಕನ್ನಡ ಸಾಹಿತ್ಯ ಸಹಸ್ರಾರು ವರ್ಷಗಳಿಂದ ನಿರೂಪಿಸುತ್ತ ಬಂದಿದೆ. 'ಮಾನವಕುಲಂ ತಾನೊಂದೆ ವಲಂ' ಎನ್ನುವುದರ ಮೂಲಕ ದೊಡ್ಡ ಮನುಷ್ಯನಾದ ಪಂಪನೂ, ಶಬ್ದಕ್ಕೆ ಲಜ್ಜೆಯ ಆಭರಣ ತೊಡಿಸಿದ ಬಸವಪ್ರಮಥಾದಿ ಶರಣರೂ, ಅರಸು ಮಂತ್ರಿಗಳು ರಾಕ್ಷಸ ಪರಿವಾರ ಎನ್ನುವುದರ ಮೂಲಕ ಬಡ, ನಿರುಪದ್ರವಿ ಪ್ರಜೆಗಳ ಪರ ವಕಾಲತ್ತು ವಹಿಸಿದ ಕುಮಾರವ್ಯಾಸನೂ ಹೀಗೆ ಹಲವರು ಕನ್ನಡತನಕ್ಕೆ ಆತ್ಮವಿಶ್ವಾಸದ ಪ್ರಭಾವಳಿಯನ್ನು ತೊಡಿಸಿದ್ದಾರೆ. ಇವರೆಲ್ಲ ನನ್ನಂಥ ಲೇಖಕರಿಗೆ ಅಹಂಕಾರ ಸೋಂಕದ ಹಾಗೆ ನೋಡಿಕೊಳ್ಳುತ್ತಿದ್ದಾರೆ. ಸೃಷ್ಟಿಶೀಲ ಮನಸ್ಸುಗಳು ಬಡವಾಗದ ಹಾಗೆ ಎಚ್ಚರ ವಹಿಸುತ್ತಲೇ ಇದ್ದಾರೆ. ಇವರಿಂದಾಗಿಯೇ ಕನ್ನಡ ಲೇಖಕ ಸದಾ ಎಚ್ಚರದಿಂದಿರುವುದು. ಈ ಸದಸದ್ವಿವೇಕವಿರುವುದರಿಂದಾಗಿಯೇ ಕನ್ನಡ ಭಾಷೆಯ ಹುಲ್ಲುಗಾವಲಿನಲ್ಲಿ ನೂರಾರು ಮೇರು ಕೃತಿಗಳು ನಿಶ್ಚಿಂತೆಯಿಂದ ಇರುವುದು.

ಈ ಪರಂಪರೆಯ ಹಿನ್ನೆಲೆಯಿಂದಾಗಿಯೇ ನಾನು ನನ್ನ ಈ ಪುರಸ್ಕೃತ ಮತ್ತು ಆರುನೂರು ಪುಟದ 'ಅರಮನೆ' ಕಾದಂಬರಿಯ ರಚನಾಕಾರ್ಯವನ್ನು ಒಂದೂವರೆ ದಶಕಗಳ ಪರ್ಯಂತ ನಿರ್ವಿರಾಮವಾಗಿ ನಡೆಸಿದ್ದು. ವರ್ತಮಾನದಲ್ಲಿದ್ದು ಇತಿಹಾಸವನ್ನೂ; ಇತಿಹಾಸದಲ್ಲಿದ್ದು ವರ್ತಮಾನವನ್ನೂ ಗ್ರಹಿಸುವ ದೃಷ್ಟಿಯಿಂದ ಅತ್ಯುತ್ತಮ ಪ್ರವಾಸಿಯಾದದ್ದು. ಗ್ರಾಮೀಣ ಬದುಕಿನ ಅನನ್ಯತೆಯ ದ್ಯೋತಕವಾಗಿರುವ ಹತ್ತಾರು ಜಾನಪದ ಮೌಖಿಕ ಕಾವ್ಯಗಳ ಕಥನ ತಂತ್ರವನ್ನು ಕಾದಂಬರಿಯೊಳಗೆ ಸಂವಾಹಕವಾಗಿ ಬಳಸಿಕೊಂಡಿರುವುದು. ಹೇಗೆ ಬರೆಯಬೇಕೆಂಬುದರ, ಲೇಖಕ ಹೇಗಿರಬೇಕೆಂಬುದರ ಕುರಿತಂಥ ಅತ್ಯುಚ್ಚ ಮಟ್ಟದ ಟಾಲ್‌ಸ್ಟಾಯ್ ಎಂಬ ಮಾದರಿ ಇರುವುದರಿಂದಾಗಿಯೇ ನಾನು 'ಅರಮನೆ' ಎಂಬ ಕಾದಂಬರಿಯನ್ನು ಐದಾರು ಸಲ ಪುನರ್‌ನಿರೂಪಿಸಿದ್ದು. ಪುನರ್‌ನಿರೂಪಣೆ ಮತ್ತು ಮರುಲೇಖಿಕಿಸುವುದೆಂಬುದಿದೆಯಲ್ಲ ಅದು ಆದರ್ಶ ದಾಂಪತ್ಯ ಸುಖಕ್ಕೆ ಸರಿ ಸಮಾನವಾದುದು. ಈಗನ್ನಿಸುತ್ತದೆ ಅದೊಂದೇ ಕಾದಂಬರಿಯನ್ನು ಜೀವನ ಪರ್ಯಂತ ರೀ-ರೈಟ್ ಮಾಡುತ್ತಲೇ ಇರಬೇಕಾಗಿತ್ತೂಂತ. ಮಹತ್ವಾಕಾಂಕ್ಷೆಯ ಕಾದಂಬರಿ ಲೇಖಕನ ಅವಸಾನದ ನಂತರ ಪ್ರಕಟವಾದರೆ ಒಳ್ಳೆಯದೆಂಬುದು ನನ್ನ ಭಾವನೆ. ಕೇವಲ ಇಪ್ಪತ್ತುನಾಲ್ಕು ದಿನಗಳಲ್ಲಿ ಆರು ನೂರು ಪುಟ ಗಾತ್ರದ 'ಶಾಮಣ್ಣ' ಕಾದಂಬರಿ ಬರೆದು ಬೆರಗಾಗಿಸಿದ್ದುಂಟು. ಅಪ್ಪಟ ಶೂದ್ರತ್ವದ ನಾನು ವೈದಿಕ ಕುಟುಂಬದ ಬಗೆಗೆ ಬರೆದುದೇ ಆ ಬೆರಗಿಗೆ ಕಾರಣ. ಅಷ್ಟೇ ಗಾತ್ರದ 'ಅರಮನೆ'ಯನ್ನು ಬರೆದು ಮುಗಿಸುವುದಕ್ಕೆ ಸುಮಾರು ಹದಿನೈದು ವರ್ಷ ಹಿಡಿಯಿತು. ಕನ್ನಡದ ಪ್ರಸಿದ್ಧ ಬಹುಶ್ರುತ ವಿದ್ವಾಂಸರಾದ ಡಾ. ಸಿ. ಎನ್. ರಾಮಚಂದ್ರನ್ ಮತ್ತು ಡಾ. ಹೆಚ್. ಎಸ್. ರಾಘವೇಂದ್ರರಾವ್ ಇವರೀರ್ವರನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತಿರುವೆ. ಇವರ ಸಲಹೆ, ಸಹಕಾರ ಮತ್ತು ಮಾರ್ಗದರ್ಶನವಿರದಿದ್ದಲ್ಲಿ ನನ್ನ 'ಅರಮನೆ' ಕಾದಂಬರಿಗೆ ಈ ಅಪರೂಪದ ಗೌರವ ಪ್ರಾಪ್ತವಾಗುತ್ತಿರಲಿಲ್ಲವೇನೋ!

ಈ ಕಾದಂಬರಿಯನ್ನು ನಾನು ಬರೆದೆ ಎನ್ನುವುದಕ್ಕಿಂತ ಇದೇ ನನ್ನಿಂಗ ಬರೆಯಿಸಿ ಕೊಂಡಿತೆನ್ನುವುದೇ ಸೂಕ್ತ. ಈ ಕಾದಂಬರಿಯೊಳಗೆ ವೃದ್ಧಾತಿವೃದ್ಧರ ಪರಿಶೆಯೇ ಇದೆ.

ನನ್ನ ಸೃಷ್ಟಿಶೀಲ ಬದುಕಿನಲ್ಲಿ ಆಡುಂಬೊಲದಲ್ಲಿದ್ದ ಮತ್ತು ನನ್ನನ್ನು ಸೃಜನಶೀಲವಾಗಿ ರೂಪಿಸಿದ ಹಣ್ಣುಹಣ್ಣು ಮುದುಕ, ಮುದುಕಿಯರು ಈ ಕಾದಂಬರಿಯೊಳಗೆ ಭಯ್ರಮಾಂಬೆ, ಎಂಜಲೆಲೆ ಎಲ್ಲಮ್ಮ ತಾಯಿ, ಸಾಂಬವಿ, ಜಗಲೂರವ್ವ ಹೀಗೆ ಬೇರೆ ಬೇರೆ ರೂಪ ಸನ್ನಿವೇಶಗಳಲ್ಲಿ ಬಂದಿದ್ದಾರೆ. ಈ ಎಲ್ಲ ಪಾತ್ರಗಳು ಈಗಲೂ ನನ್ನನ್ನು ಕಾಡುತ್ತಿರುವುದುಂಟು. "ಹೆದರಿಕೊಂಡು ಕಾದಂಬರಿ ಮುಗಿಸಿಬಿಟ್ಟೆ ಏನೋ ಮುಠ್ಠಾಳ..., ನಿನ್ನನ್ನು ಸುಮ್ಮನೆ ಬಿಡುವುದಿಲ್ಲ" ಎಂದು ಕನಸಿನಲ್ಲಿ ಕಾಣಿಸಿಕೊಂಡು ಗದರಿಸುತ್ತಿರುವುದೂ ಉಂಟು. ಕಾದಂಬರಿಯ ಎಲ್ಲಾ ಪಾತ್ರಗಳೂ ನನ್ನ ಕುಟುಂಬದ ಸದಸ್ಯರೇ ಆಗಿದ್ದು ಈಗಲೂ ನನ್ನ ಮನಸ್ಸಿನೊಂದಿಗೆ ಲೇವಾದೇವಿ ಇಟ್ಟುಕೊಂಡಿರುವರೆನ್ನುವುದೇ ವಿಶೇಷ.

ವಸ್ತು, ಗಾತ್ರ, ಭಾಷೆ ಮೊದಲಾದ ಸೃಜನಶೀಲ ಪರಿಕರಗಳಿಗೆ ಸಂಬಂಧಿಸಿದಂತೆ ದೊಡ್ಡ ತಕರಾರೊಂದು ಓದುಗರ ವಲಯದಲ್ಲಿ ಚಾಲ್ತಿಯಲ್ಲಿದೆ. ಬರೆಯುವವರಿಗೆ ಆಗದ ತೊಂದರೆ ಕೆಲ ಓದುಗರಿಗಿದೆ ಎನ್ನುವುದೇ ಆತಂಕದ ಸಂಗತಿ. ಸರಳ ಓದು ಪ್ರಾದೇಶಿಕ ಭಾಷೆಗೆ ಕುಂದು ತರುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಜಾಗತೀಕರಣದ ಪ್ರಭಾವದಿಂದಾಗಿ ವಿನಾಶದ ಹಾದಿಯನ್ನು ಹಿಡಿದಿರುವ ತೃತೀಯ ಜಗತ್ತಿನ ಭಾಷೆಗಳ ಪೈಕಿ ಕನ್ನಡವೂ ಒಂದೆಂಬುದು ಭಾಷಾತಜ್ಞರ ಅಭಿಪ್ರಾಯವಂತೆ. ಕನ್ನಡವೆಂದರೆ ಕೇವಲ ಕನ್ನಡ ಮಾತ್ರವಲ್ಲ. ಕನ್ನಡದೊಳಗೆ ಹತ್ತಾರು ಪ್ರಭೇದಗಳಿವೆ. ನಾನು ನನ್ನ ಸೃಜನಶೀಲ ನೆಲೆಯೊಳಗೆ ಬಳಕೆ ಮಾಡಿರುವ ಭಾಷೆ ಬಳ್ಳಾರಿ ಪ್ರಾಂತದ ಆಂಧ್ರದ ಗಡಿ ಅಂಚಿನಲ್ಲಿರುವಂತಾದ್ದು. ನಾನಿರುವ ಕುಗ್ರಾಮಗಳಲ್ಲಿ ಅನಕ್ಷರಸ್ಥ ಕೃಷಿ ಕಾರ್ಮಿಕರು, ಶೂದ್ರ ದಲಿತರು ತಮ್ಮ ಮಾತುಕತೆಯೊಳಗೆ ಇಂಗ್ಲಿಷ್ ಪದಗಳನ್ನು ಉಚ್ಚರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮಮ್ಮಿ, ಡ್ಯಾಡಿ ಎಂಬ ಪದಗಳನ್ನು ಕೇಳಿ ರೋಮಾಂಚನಗೊಳ್ಳುತ್ತಿದ್ದಾರೆ. ಜಾಗತೀಕರಣದ ಕೈಗೊಂಬೆಗಳಾಗಿರುವ ಇಂಥವರ ಪೂರ್ವಜರ ಕಾಲದಲ್ಲಿದ್ದ ದೇಸೀತನವನ್ನು, ನುಡಿಗಟ್ಟುಗಳನ್ನು ಕಾದಂಬರಿ ಎನ್ನುವ ಕಾಲಕೋಶದಲ್ಲಿ ಹಿಡಿದಿಡುವ ಪ್ರಯತ್ನವನ್ನು 'ಅರಮನೆ'ಯ ಉದ್ದಕ್ಕೂ ಮಾಡಿದ್ದೇನೆ. ಇದು ಗ್ರಾಮೀಣ ಮೂಲದ ನನ್ನಂಥ ಲೇಖಕರ ಕರ್ತವ್ಯವೂ ಆಗಿದೆ ಎನ್ನುವುದು ನನ್ನ ಅಭಿಪ್ರಾಯ. ಪ್ರತಿಯೊಂದು ಪ್ರಾದೇಶಿಕ ಭಾಷೆಯ ಅಂತರಾತ್ಮ ಮತ್ತು ಒಳರಚನೆ ಗ್ರಾಮಸಂವೇದನೆಯೇ ಆಗಿದೆ. ನಾನು ಇಂಥ ಭಾಷೆಯನ್ನು ಬಲವಂತದಿಂದ ತುರುಕಿಲ್ಲ. ಆಯಾ ಕಥೆ, ಕಾದಂಬರಿಗಳೇ ಇಂಥ ಗ್ರಾಮ್ಯ ಭಾಷೆಯನ್ನು ಅಪೇಕ್ಷಿಸುತ್ತಿವೆ ಎನ್ನುವುದು ನನ್ನ ಪ್ರಾಮಾಣಿಕ ಅನ್ನಿಸಿಕೆ. ಗ್ರಾಮೀಣ ಜಾಯಮಾನದ ನಾನು ಮತ್ತು ನನ್ನಂಥ ಲೇಖಕರು ಅನೇಕ ವಿಧದ ಕಾಡುಗಳನ್ನು ಬೆಳೆಯುವ ಹಂಬಲದವರೇ ಹೊರತು, ಉದ್ಯಾನವನಗಳನ್ನಾಗಲೀ ಬೊನ್ಸಾಯ್ ಗಿಡಮರಗಳನ್ನಾಗಲೀ ಬೆಳೆಯುವವರಂತೂ ಖಂಡಿತ ಅಲ್ಲ. ಅದಮ್ಯ ಉತ್ಸಾಹ ನಮ್ಮ ಸೃಜನಶೀಲ ಕ್ರಿಯೆಯೊಳಗೆ ಸದಾ ಜುಳು ಜುಳು ಹರಿಯುತ್ತಿರುವುದಂತೂ ನಿಜ. ನಮ್ಮ ಕಾದಂಬರಿಯ ಓದುಗರಿಗೆ ಚಾರಣಸಹಜ ಸಾಹಸ ಬೇಕು. ಸರಳ ಓದಿಗೆ ಒತ್ತು ಕೊಟ್ಟಿದ್ದಲ್ಲಿ ಪಂಪ, ರನ್ನ, ಕುಮಾರವ್ಯಾಸ, ನನ್ನಯ, ಶ್ರೀನಾಥ ಹೀಗೆ ಯಾರೊಬ್ಬರ ಮೇರು ಕಾವ್ಯಕೃತಿಗಳು ಶತಶತಮಾನಗಳಿಂದ ಜನಮಾನಸದಲ್ಲಿ ಉಳಿದು ಬೆಳೆಯುತ್ತಿರಲಿಲ್ಲ.

ವಿವಿಧ ಗಾತ್ರದ ಕೃತಿಗಳ ರಚನಾಕಾರನಾದ ನನಗೆ ಕಥಾಪ್ರಕಾರವನ್ನು One day match ಗೂ, ಕಾದಂಬರಿ ಪ್ರಕಾರವನ್ನು Test Match ಗೂ ಹೋಲಿಸಲು ಇಷ್ಟಪಡುತ್ತೇನೆ. Twenty 20 Match ಈಗ ಆವಿಷ್ಕಾರಗೊಂಡಿದೆಯಷ್ಟೆ. ಇದನ್ನು ಈಗ ಚಾಲ್ತಿಯಲ್ಲಿರುವ

ಮಿನಿ ಕಥೆಗಳಿಗೆ ಹೋಲಿಸಬಹುದು. ಸೃಜನಶೀಲ ಪ್ರಕ್ರಿಯೆ ಹೇಗೆ ಪ್ರಸ್ಫುಗೊಳ್ಳುತ್ತಿರುವುದು ಮತ್ತು ಜಾಗತೀಕರಣದ ಸಂದರ್ಭ ಹೇಗೆ ಲೇಖಕನ ಸ್ವಾತಂತ್ರ್ಯಹರಣ ಮಾಡುತ್ತಿದೆ ಎನ್ನುವುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಕ್ರಿಕೆಟ್ ಆಟಗಾರ ತನ್ನ ಆಟದ ಶೈಲಿಯನ್ನು ಬದಲಾಯಿಸುವಂತೆಯೇ ಲೇಖಕ ವಿವಿಧ ಪ್ರಕಾರಗಳನ್ನು ಲೀಲಾಜಾಲವಾಗಿ ಪ್ರವೇಶಿಸಿ ಯಶಸ್ವಿಯಾಗಬೇಕೆನ್ನುವುದು ನನ್ನ ಅಭಿಮತ. ನಾನಿದರಲ್ಲಿ ಯಶಸ್ವಿಯಾಗಿರುವೆನೆಂದು ಮನವರಿಕೆಯಾದದ್ದು ನನ್ನ ಬೃಹತ್ ಕಾದಂಬರಿ 'ಅರಮನೆ' ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಪಾತ್ರವಾದ ನಂತರವೇ. ನನ್ನ ಈ ಮಹತ್ವಾಕಾಂಕ್ಷೆಗೆ ಸ್ಫೂರ್ತಿ ನೀಡಿದ ಎರಡು ಅತ್ಯದ್ಭುತ ಸೃಜನಶೀಲ ಶಕ್ತಿಗಳನ್ನು ಇಲ್ಲಿ ಗೌರವಾತಿ ಗೌರವದಿಂದ ನೆನೆಯಬಯಸುತ್ತೇನೆ.

ನಿಮ್ಮಲ್ಲಿ ಕೆಲವರಾದರೂ ನನ್ನ ಸುಂದರ ಕರ್ನಾಟಕದ ಶ್ರವಣಬೆಳ್ಗೊಳ ನೋಡಿರಬಹುದೆಂದು ಭಾವಿಸುತ್ತೇನೆ. ಚಾವುಂಡರಾಯನೆಂಬ ಸೇನಾಪತಿಯ ಕನಸನ್ನು ಅರಿಷ್ಟನೇಮಿ ಎಂಬ ಶಿಲ್ಪಿ ನನಸು ಮಾಡುತ್ತಾನೋ! ಅರಿಷ್ಟನೇಮಿಯ ಕನಸನ್ನು ಚಾವುಂಡರಾಯ ನನಸು ಮಾಡುತ್ತಾನೋ! ಅರಿಷ್ಟನೇಮಿ ಚಂದ್ರಗಿರಿ ಎಂಬ ಬೆಟ್ಟದೊಳಗೆ ಗೊಮ್ಮಟನನ್ನು ಪತ್ತೆ ಹಚ್ಚಿ ಬೆಟ್ಟವನ್ನೇ ಅನಾವರಣಗೊಳಿಸಿ ಐವತ್ತೊಂಬತ್ತು ಅಡಿ ಎತ್ತರದ ಏಕಶಿಲಾ ಸುಂದರ ವಿಗ್ರಹವನ್ನು ಲೌಕಿಕ ಜಗತ್ತಿನೆದುರು ತೆರೆದಿಡುತ್ತಾನೆ. ಅರಿಷ್ಟನೇಮಿ ಎಂಥ ಅದ್ಭುತ ಸೃಜನಶೀಲ ಕಲಾವಿದನೆಂದರೆ ಆತ ಭಾರಿ ಗಾತ್ರದ ಗೊಮ್ಮಟ ಮೂರ್ತಿಯ ತುಟಿ ನಡುವೆ ಒಂದು ಸೊಗಸಾದ ಮಂದಹಾಸವನ್ನು ಮುಡಿಸಿದ್ದಾನೆ. ಆ ಮಂದಹಾಸಕ್ಕೆ ಈಗಾಗಲೇ ಸಹಸ್ರಾರು ವರ್ಷಗಳಷ್ಟು ವಯಸ್ಸಾಗಿದೆ. ಅದು ಮನುಕುಲ ಇರುವ ತನಕ ಮಂದಹಾಸ ಬೀರುತ್ತಲೇ ಇರುತ್ತದೆ. ಆ ಜಗದ್ವಿಖ್ಯಾತ ಶಿಲ್ಪದ ಮೂಲಕ ಮಂದಹಾಸದ ಸೃಷ್ಟಿಕರ್ತ ಅರಿಷ್ಟನೇಮಿ ಚಿರಂಜೀವಿಯಾಗಿದ್ದಾನೆ.

ವೆರಿಯರ್ ಎಲ್ವಿನ್ ಬಗೆಗಂತೂ ತಮ್ಮೆಲ್ಲರಿಗೆ ಗೊತ್ತೇ ಇದೆ. ಆದಿವಾಸಿಗಳ ಬದುಕನ್ನು ಹಸನು ಮಾಡಿದಂಥ ಅಸೀಮ ಸಾಹಸಿ. ಅವನಿಂದ ರೂಪಗೊಂಡಂಥ, ಕೈಹಿಡಿದಂಥ ಆದಿವಾಸಿ ಮಹಿಳೆ (ಕಮಲಾ ಯಾ ನೀಲಾ) ಮುಂದೊಂದು ದಿನ ಅಪೂರ್ವ ಲೇಖಕಿಯಾಗುತ್ತಾಳೆ. ಮತ್ತು ತನ್ನ ಕೃತಿಗೆ ಇದೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಪಡೆಯುತ್ತಾಳೆ. ಗೊಮ್ಮಟ, ಕಮಲಾ ಯಾ ನೀಲಾದಂಥ ಮಹಾಕೃತಿಗಳನ್ನು ರಚಿಸಿದ ಅರಿಷ್ಟನೇಮಿ, ವೆರಿಯರ್ ಎಲ್ವಿನ್ ಇವರೀರ್ವರೂ ನನ್ನ ಪಾಲಿಗಂತೂ ದೊಡ್ಡ ಮಾದರಿಗಳೇ ಮತ್ತು ಆದರ್ಶ ಕೂಡ. ಗೊಮ್ಮಟನ ಮೂಲಕ ಮಾನವೇತಿಹಾಸಕ್ಕೆ ಮಂದಹಾಸದ ಪಾಠ ಹೇಳಿಕೊಡುತ್ತಿರುವಂಥ ಅರಿಷ್ಟನೇಮಿಗಿಂತ ಆದರ್ಶ ಉಪಾಧ್ಯಾಯ ನನಗೆ ಇನ್ನೊಬ್ಬರು ಕಂಡಿಲ್ಲ. ಅರಿಸ್ಟಾಟಲ್‌ನಂಥ ಶಿಕ್ಷಕನ ಶಿಷ್ಯನಾಗಿದ್ದರಿಂದಾಗಿಯೇ ಅಲೆಗ್ಸಾಂಡರ್ ಪ್ರಪಂಚವನ್ನು ಗೆಲ್ಲುವ ಪ್ರಯತ್ನ ಮಾಡಿದನೆಂಬುದು ಇನ್ನೊಂದು ವಿಶೇಷ.

ನಾನು ಪ್ರಾಥಮಿಕ ಶಾಲಾ ಶಿಕ್ಷಕನಾದುದಕ್ಕೆ ಈ ಎಲ್ಲ ಕಾರಣಗಳೊಂದಿಗೆ ಇನ್ನೂ ಒಂದು ಕಾರಣವಿದೆ. ಅದೆಂದರೆ ಬಡತನ, ಹಸಿವೆಯ ವಿರಾಟ್ ಸಂದರ್ಶನ. ಶ್ರೀಕೃಷ್ಣ ಕೌರವನ ಸಭೆಯಲ್ಲಿ ಪ್ರಕಟಿಸಿದುದಕ್ಕಿಂತಲೂ ಭಯಾನಕ. ನೂರಾರು ಜನಪ್ರಿಯ ಕಾದಂಬರಿಗಳ ಓದುವುದರ ಮೂಲಕ ಹಸಿವೆಯನ್ನು ತಣಿಸಿಕೊಳ್ಳುತ್ತಿದ್ದ ಬಾಲ್ಯದ ದಿನಗಳವು. ನಾನು ಹತ್ತನೇ ತರಗತಿ ಮುಗಿಸಿದ್ದೊಂದು ಪವಾಡವೇ ಸರಿ. ಹತ್ತಾರು ಜನಪರ ಚಳವಳಿಗಳೂ ನಾನು ಶಿಕ್ಷಕವೃತ್ತಿಯನ್ನು ಆರಿಸಿಕೊಂಡಿದ್ದಕ್ಕೆ ಕಾರಣವಿರಬಹುದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾನು ಆಂಧ್ರ ಪ್ರದೇಶಕ್ಕೆ ಗಡಿಪಾರಾಗಿದ್ದರಿಂದಾಗಿಯೇ ನಾನು ಪುಂಖಾನು

ಪುಂಖವಾಗಿ ಕಥೆಗಳನ್ನು ಬರೆಯಲು ಸಾಧ್ಯವಾಯಿತು. ಕಥೆ, ಕಾದಂಬರಿಗಳ ಮಾತೃವಾತ್ಸಲ್ಯ ಇರದಿದ್ದಲ್ಲಿ, ಸಾಹಿತ್ಯದ ಸ್ಪರ್ಶವಿರದಿದ್ದಲ್ಲಿ ನಾನೇನಾಗುತ್ತಿದ್ದೆನೆಂಬುದನ್ನು ನೆನಪಿಸಿಕೊಂಡರೆ ಭಯವಾಗುತ್ತದೆ. ಸಮಾಜಕಂಟಕನಾಗದಂತೆ ನೋಡಿಕೊಂಡಿರುವ ಸಾಹಿತ್ಯಕ್ಕೆ, ಸಾಹಿತಿಗಳಿಗೆ ನಾನು ಚಿರಋಣಿಯಾಗಿರುವೆನು. ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿ ಯಾವುದೇ ಸೃಜನಶೀಲ ವ್ಯಕ್ತಿಗೆ ಅದ್ಭುತವಾದ ಕಾರ್ಯಕ್ಷೇತ್ರ. ದೈನ್ಯಾತಿದೈನ್ಯ ಸ್ಥಿತಿಯಲ್ಲಿರುವ ಕುಗ್ರಾಮಗಳು ಸ್ವಾತಂತ್ರ್ಯೋತ್ತರವಾಗಿ ಶಿಲಾಯುಗೀಯ ಸ್ಥಿತಿಯಲ್ಲಿರುವುದು ದುರಂತದ ಸಂಗತಿ. ಅಲ್ಲಿ ನಾನು ಕೇವಲ ಶಿಕ್ಷಕ ಮಾತ್ರ ಅಲ್ಲ. ನಾನು ನನ್ನದೇ ಆದ ರೀತಿಯಲ್ಲಿ ಸಾಮಾಜಿಕ ನ್ಯಾಯದ ಪರವಾಗಿ ಹೋರಾಡಿದ್ದೇನೆ ಮತ್ತು ಹೋರಾಟವನ್ನು ಮುಂದುವರಿಸಿದ್ದೇನೆ. ದಲಿತ ಶೂದ್ರರ ಮಕ್ಕಳಿಗೆ ಅಕ್ಷರದ ಕಂದೀಲುಗಳನ್ನು ವಿತರಿಸಿದ್ದೇನೆ. ಆ ಕಂದೀಲುಗಳು ಈ ಒಂದೊಂದು ಸೂರ್ಯರಾಗಿ ರೂಪಾಂತರಗೊಂಡಿವೆ. ಆದ್ದರಿಂದ ನನ್ನ ಪ್ರಥಮ ಆದ್ಯತೆ ಸ್ವಸ್ಥ ಮತ್ತು ಜಾತಿರಹಿತ, ವರ್ಗರಹಿತ ಸಮಾಜದ ನಿರ್ಮಾಣದ ಕನಸನ್ನು ನನಸು ಮಾಡುವುದು. ನಂತರ ಸಾಹಿತ್ಯ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಕ್ಕ ಮಟ್ಟಿಗೆ ಯಶಸ್ಸು ಸಾಧಿಸಿದ್ದೇನೆ. ಈಗ ನನ್ನ ಪ್ರೀತಿಯ ಕಾದಂಬರಿ 'ಅರಮನೆ'ಗೆ ಪ್ರಶಸ್ತಿ ಕೊಡುವುದರ ಮೂಲಕ ಕೇಂದ್ರ ಸಾಹಿತ್ಯ ಅಕಾಡೆಮಿ ಕೇವಲ ನನ್ನನ್ನಷ್ಟೇ ಗೌರವಿಸಿಲ್ಲ; ಈ ಮೂಲಕ ನಾನು ಬದುಕುತ್ತಿರುವ ಹಳ್ಳಿಗಳನ್ನು; ಪ್ರಾಥಮಿಕ ಶಾಲಾ ಶಿಕ್ಷಕ ಸಮೂಹವನ್ನು ಮತ್ತು ಗ್ರಾಮ್ಯ ಭಾಷೆಯನ್ನೂ ಗೌರವಿಸಿದೆ. ಅಲ್ಲದೆ ನನ್ನಲ್ಲಿ ಸಾಹಿತ್ಯಿಕ ಮತ್ತು ಸಾಮಾಜಿಕ ಜವಾಬ್ದಾರಿಯನ್ನೂ ಹೆಚ್ಚಿಸಿದೆ.

✦ **ಕುಂ. ವೀರಭದ್ರಪ್ಪ, 'ಅನ್ನಪೂರ್ಣ ನಿಲಯ', ಪೊಲೀಸ್ ಠಾಣೆ ಬಳಿ,**
ಕೊಟ್ಟೂರು – ೫೮೩ ೧೩೪ (ಬಳ್ಳಾರಿ) ✦

ಹನಿ ಹನಿ ಹನಿ — ಸಿ. ಪಿ. ಕೆ.

೧. ಕವಿತೆ ನನ್ನ
ಮೊದಲ ಒಲವು;
ಬಹುಶಃ ಕಡೆಯದು ಕೂಡ!
ನಡುವೆ ಮಡದಿಯ
ಆಗಂತುಕ ಆಗಮನ!

೨. ಸೋತೂ ಗೆಲ್ಲುವ
ತಾಣ ಒಂದೇ ಒಂದು :
ಪ್ರೀತಿ;
ಗೆದ್ದೂ ಸೋಲುವ ತಾಣ
ಒಂದೇ ಒಂದು : ದ್ವೇಷ!

೩. ಆನೆಯ ಹಜ್ಜೆ
ಕಂಡವರುಂಟು;
ಮೀನಿನ ಹಜ್ಜೆ
ಕಂಡವರುಂಟೆ?
ಅದು ನೆಲದ ರಾಜ;
ಇದು ಜಲದ ಅಪ್ಸರೆ!

೪. ಮುಪ್ಪಿನಿಂದ
ತಪ್ಪಿಸಿಕೊಳ್ಳಬಹುದು:
ತಾರುಣ್ಯದಲ್ಲೆ ಸತ್ತರಾಯಿತು!
ಸಾವಿನಿಂದ
ತಪ್ಪಿಸಿಕೊಳ್ಳುವುದೆಂತು?

೫. ಬೇಡ ಮರಣಪೂರ್ವ
ಪ್ರಶಸ್ತಿ;
ಬೇಡ ಮರಣೋತ್ತರ
ಪ್ರಶಸ್ತಿ;
ಸಾಕು ನೋವು ನರಳಿಲ್ಲದ
ಮರಣಪ್ರಶಸ್ತಿ!

✦ ಡಾ. ಸಿ. ಪಿ. ಕೃಷ್ಣಕುಮಾರ್
೨೨೬೫/೧೯, 'ಭಾರತಿ', ೬ನೇ ಕ್ರಾಸ್,
ವಿನಾಯಕನಗರ, ಮೈಸೂರು–೧೨ ✦

ಇತ್ತೀಚಿನ ಕನ್ನಡ ಸಾಹಿತ್ಯದ ಸ್ಥಿತಿ-ಗತಿ : ಅಂತರ್‌ಜಾಲದ ಅಪಾರ ಸಾಧ್ಯತೆಗಳು : ಅಸ್ಪಷ್ಟ ಕ್ಷಿತಿಜ

ಸಿ. ಎನ್. ರಾಮಚಂದ್ರನ್

೧೯೯೧ ರಲ್ಲಿ ಅಂದಿನ ವಿತ್ತಮಂತ್ರಿಗಳಾಗಿದ್ದ (ಇಂದು ಪ್ರಧಾನಿಗಳಾಗಿರುವ) ಡಾ. ಮನ್‌ಮೋಹನ್ ಸಿಂಗ್ ಭಾರತದಲ್ಲಿ ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಗೆ ಚಾಲನೆ ಕೊಟ್ಟರು. ಅಂದಿನಿಂದ ಜಾಗತೀಕರಣ ಪ್ರಕ್ರಿಯೆ ಭಾರತದ ಆರ್ಥಿಕ-ಔದ್ಯಮಿಕ ಕ್ಷೇತ್ರಗಳನ್ನಷ್ಟೇ ಅಲ್ಲದೆ ಭಾಷೆ-ಸಾಹಿತ್ಯ-ಕಲೆ ಇತ್ಯಾದಿಗಳನ್ನೂ ವ್ಯಾಪಕವಾಗಿ ಪ್ರಭಾವಿಸಿದೆ, ಎಂದೂ ನಿರೀಕ್ಷಿಸಿರದಿದ್ದ ಬದಲಾವಣೆಗಳನ್ನು ತರುತ್ತಿದೆ. ಈ ಸಂಕೀರ್ಣ ಪ್ರಕ್ರಿಯೆಯ ಪರಿಣಾಮವಾಗಿಯೇ ಸುಮಾರು ೧೯೯೮ರಲ್ಲಿ ಕಂಪ್ಯೂಟರ್ ಯುಗವೂ ಭಾರತವನ್ನು ಪ್ರವೇಶಿಸಿತು. ಕಳೆದೊಂದು ದಶಕದಲ್ಲಿ ಕಂಪ್ಯೂಟರ್ ಮತ್ತು ಅಂತರ್‌ಜಾಲ ವ್ಯವಸ್ಥೆ ಕನ್ನಡವೂ ಸೇರಿದಂತೆ ಭಾರತೀಯ ಭಾಷೆ-ಸಾಹಿತ್ಯಗಳ ಸ್ವರೂಪವನ್ನು ನಿಧಾನವಾಗಿ ಆದರೆ ಸ್ಪಷ್ಟವಾಗಿ ಬದಲಾಯಿಸುತ್ತಿದೆ.

ಈ ಲೇಖನದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ, ಕಳೆದೆರಡು ದಶಕಗಳ ಪಾರಂಪರಿಕ (ಎಂದರೆ ನೇರವಾಗಿ ಅಂತರ್‌ಜಾಲ ವ್ಯವಸ್ಥೆಗೆ ಸಂಬಂಧಿಸದ) ಕನ್ನಡ ಸಾಹಿತ್ಯದ ಸ್ಥೂಲ ಸಮೀಕ್ಷೆಯಿದೆ; ಎರಡನೆಯ ಭಾಗದಲ್ಲಿ ಈ ಹೊಸ ತಂತ್ರಜ್ಞಾನದಿಂದಾಗಿ ಕನ್ನಡ ವಾಙ್ಮಯ ಪಡೆಯುತ್ತಿರುವ ನೂತನ ಆಯಾಮಗಳ ಚರ್ಚೆಯಿದೆ.

೧

'ಸಾಹಿತ್ಯ' ಎಂಬ ವರ್ಗಕ್ಕೆ (ಇತರ ಜ್ಞಾನ ವರ್ಗಗಳಿಗಿರುವಂತೆಯೇ) ಎರಡು ಪರಿಮಾಣಗಳಿವೆ; ಇವನ್ನು 'ಒಳಮೈ' ಹಾಗೂ 'ಹೊರಮೈ' ಎಂದು ಗುರುತಿಸಬಹುದು. ಸಾಹಿತ್ಯದ 'ಒಳಮೈ' ಲೇಖಕನನ್ನು ಮತ್ತು ಅವನು ರಚಿಸಿದ ಕೃತಿಗಳನ್ನು ಒಳಗೊಂಡಿರುತ್ತದಾದರೆ ಅದರ 'ಹೊರಮೈ' ಪ್ರಕಾಶಕ-ಪುಸ್ತಕ ವ್ಯಾಪಾರಿ-ಓದುಗ ಜಾಲವನ್ನೂ ಹಾಗೂ ಇವರೆಲ್ಲರೂ ಬದುಕುತ್ತಿರುವ ಒಂದು ಕಾಲಘಟ್ಟದ ಸಮಾಜವನ್ನೂ ಒಳಗೊಳ್ಳುತ್ತದೆ. ಈ ನೆಲೆಯಲ್ಲಿ, ಕಳೆದೆರಡು ದಶಕಗಳ ಕನ್ನಡದ ಒಳಮೈ ಮತ್ತು ಹೊರಮೈಗಳನ್ನು ಹೀಗೆ ಸ್ಥೂಲವಾಗಿ ಗುರುತಿಸಬಹುದು:

ಒಳಮೈ : ಕಳೆದ ಒಂದು-ಒಂದೂವರೆ ದಶಕಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎದ್ದು ಕಾಣುವಂತಹ ಹಾಗೂ ಪ್ರಭಾವಿಯಾದ ಯಾವ ಚಳುವಳಿಗಳೂ ಕಂಡು ಬರುತ್ತಿಲ್ಲ. ಆದರೆ, ಈ ಕಾರಣದಿಂದಾಗಿ, 'ಇಂದು ಕನ್ನಡ ಸಾಹಿತ್ಯ ಸ್ಥಗಿತವಾಗಿದೆ' ಎಂದೇನೂ ಕೊರಗಬೇಕಾಗಿಲ್ಲ. ಏಕೆಂದರೆ, ಯಾವುದೇ ಒಂದು ಚಳುವಳಿ ಪ್ರಬಲವಾಗಿದ್ದ ಕಾಲದಲ್ಲಿ ಆ ಚಳುವಳಿ ಪುರಸ್ಕರಿಸುವ ಆಶಯ-ಆಕೃತಿಗಳಿಗಿಂತ ಭಿನ್ನವಾದವುಗಳು ಸಾಹಿತ್ಯ ಕ್ಷೇತ್ರದ ಮುನ್ನೆಲೆಯನ್ನು ಪ್ರವೇಶಿಸುವುದು ಕಷ್ಟವಾಗುತ್ತದೆ. ಆದರೆ, ಯಾವ ಚಳುವಳಿಗಳೂ ಪ್ರಭಾವಿಯಾಗಿರದಿರುವ ಕಾಲದಲ್ಲಿ ನೂತನ ಪ್ರಯೋಗಗಳು ಮತ್ತು ಒಂದೇ ಕಾಲದಲ್ಲಿ ಭಿನ್ನ ಪ್ರಕಾರಗಳು ಮೈದಳೆಯುವುದು ಸಾಧ್ಯವಾಗುತ್ತದೆ. ಇದೇ ನೆಲೆಯಲ್ಲಿ ಕಳೆದೆರಡು

ದಶಕಗಳ ಕನ್ನಡ ಸಾಹಿತ್ಯವನ್ನು ನೋಡಿದಾಗ, ಖಚಿತವಾದ ಹೊಸ ದನಿಗಳು ಹಾಗೂ ಹೊಸ ಅನುಭವ ಲೋಕಗಳು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿರುವುದು ನಮಗೆ ಕಾಣಿಸುತ್ತದೆ.

ಮೊದಲನೆಯದಾಗಿ, ಕನ್ನಡ ಕಥನ ಕ್ಷೇತ್ರದಲ್ಲಿ, ಹೊಸ ಬಗೆಯ ಕಥೆ–ಕಾದಂಬರಿಗಳು ಈ ಕಾಲಘಟ್ಟದಲ್ಲಿ ಕಂಡುಬರುತ್ತವೆ. (ಉದಾ.: ವೀರಪ್ಪ ಮೊಯಿಲಿ, **ತೆಂಬರೆ**; ಗೀತಾ ನಾಗಭೂಷಣ, **ಬದುಕು**; ಕುಂವೀ, **ಅರಮನೆ**; ರಾಘವೇಂದ್ರ ಪಾಟೀಲ, **ತೇರು**; ಮೊಗಳ್ಳಿ ಗಣೇಶ್, **ತೊಟ್ಟಿಲು**; ವಿವೇಕ ಶಾನಭಾಗ್, **ಒಂದು ಬದಿ ಕಡಲು**; ಅಶೋಕ ಹೆಗಡೆ, **ಅಶ್ವಮೇಧ**; ಚಂದ್ರಶೇಖರ ಕಂಬಾರ, **ಶಿಖರ ಸೂರ್ಯ**; ಇತ್ಯಾದಿ. ಸರಿ ಸುಮಾರು ಈ ಎಲ್ಲಾ ಲೇಖಕರೂ ಹೊಸ ಬಗೆಯ ಕಥೆಗಳನ್ನೂ ಬರೆದಿದ್ದಾರೆ). ಹಾಗೆಯೇ, ನಾಟಕ ಕ್ಷೇತ್ರವನ್ನು ತೆಗೆದುಕೊಂಡರೆ, ಈ ಕಾಲಘಟ್ಟದಲ್ಲಿ ಎದ್ದು ಕಾಣುವ ಒಂದು ಹೊಸ ಪ್ರಯೋಗವೆಂದರೆ ನಾಟಕೇತರ ವಾಙ್ಮಯವನ್ನು ಆಧರಿಸಿದ ಏಕವ್ಯಕ್ತಿ ಪ್ರದರ್ಶನಗಳು. ಈ ಬಗೆಯ ಪ್ರದರ್ಶನಗಳನ್ನು ಮೊದಲು ಪ್ರಾರಂಭಿಸಿದವರು, ಪ್ರಾಯಃ, ಸಿ. ಆರ್. ಸಿಂಹ; ಅವರ **"ಟಿಪಿಕಲ್ ಟಿ.ಪಿ. ಕೈಲಾಸಂ", "ಕುವೆಂಪು"** ಇತ್ಯಾದಿ ಏಕವ್ಯಕ್ತಿ ಪ್ರದರ್ಶನಗಳು ಕನ್ನಡ ನಾಟಕ ರಂಗಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟುವು. (ಇಂತಹ ಪ್ರಯೋಗಗಳು, ಪ್ರಾಯಃ, ಇತರ ಭಾಷೆಗಳಲ್ಲಿ ಆಗಿಲ್ಲ.) ಇದೇ ಕ್ಷೇತ್ರದ ಮತ್ತೊಂದು ಉಲ್ಲೇಖನೀಯ ಪ್ರಯೋಗವೆಂದರೆ ಅಭಿಜಾತ ಕಾವ್ಯಗಳನ್ನು ನಾಟಕರೂಪಕ್ಕೆ ಅಳವಡಿಸಿಕೊಂಡ ಪ್ರದರ್ಶನಗಳು. (ಈ ವರ್ಗದ ಒಂದು ಸಫಲ ಉದಾಹರಣೆಯೆಂದರೆ ಡಾ. ವೈ. ನಾರಾಯಣ ಸ್ವಾಮಿಯವರು ಅಳವಡಿಸಿದ **ಪಂಪ ಭಾರತ**. ಟಿ. ಸುನಂದಮ್ಮನವರ ಕಥೆಗಳನ್ನಾಧರಿಸಿದ **ಹೀಗಾದರೆ ಹೇಗೆ?** ಪ್ರದರ್ಶನವೂ ಇದೇ ವರ್ಗಕ್ಕೆ ಸೇರುತ್ತದೆ.) ನಾಟಕ ಕ್ಷೇತ್ರದ ಇನ್ನೆರಡು ಗಮನೀಯ ಪ್ರಯೋಗಗಳೆಂದರೆ, ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿದ ಕನ್ನಡ ನಾಟಕಗಳ ಇಂಗ್ಲೀಷ್ ಅನುವಾದಗಳ ಪ್ರದರ್ಶನಗಳು ಮತ್ತು ಕ್ಲಿಷ್ಟ ಟೆಲಿವಿಶನ್ ತಾಂತ್ರಿಕತೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿರುವ ಗಿರೀಶ ಕಾರ್ನಾಡರ **ಒಡಕಲು ಬಿಂಬ** ಮತ್ತು **ಮದುವೆಯ ಆಲ್ಬಮ್**.

ಈ ಎರಡು ಪ್ರಭೇದಗಳ ಹೋಲಿಕೆಯಲ್ಲಿ ಕನ್ನಡ ಕಾವ್ಯ ಸ್ವಲ್ಪ ಬಡವಾಗಿದೆಯೆಂದು ತೋರಿದರೂ, ಅಲ್ಲಿಯೂ ಹೊಸ ದನಿಗಳು – ಹೆಚ್ಚಾಗಿ ಸ್ತ್ರೀವಿಶಿಷ್ಟ/ ಸ್ತ್ರೀಪರ ದನಿಗಳು ಕಂಡು ಬರುತ್ತವೆ. (ಉದಾ.: ವೀರಪ್ಪ ಮೊಯಿಲಿ ಅವರ ಐದು ಸಂಪುಟಗಳ ಬೃಹತ್ ಮಹಾಕಾವ್ಯ, **ಶ್ರೀರಾಮಾಯಣ ಮಹಾನ್ವೇಷಣಂ** ಮತ್ತು ಎಸ್. ಜಿ. ಸಿದ್ಧರಾಮಯ್ಯನವರ **ಕಾಯಮಾಯದ ಹಾಡು**; ಪಿ. ಮಂಜುನಾಥ, ಸುಬ್ಬು ಹೊಲೆಯಾರ್, ಜಿ. ಎನ್. ಮೋಹನ್ ಇತ್ಯಾದಿ ಕವಿಗಳ ಮತ್ತು ಕವಿತಾ ರೈ, ರೂಪಾ ಹಾಸನ, ಮಮತಾ ಜಿ. ಸಾಗರ, ಜ್ಯೋತಿ ಕಾರ್ಕಳ, ತಾರಿಣೀ ಶುಭದಾಯಿನಿ ಇತ್ಯಾದಿ ಕವಯಿತ್ರಿಯರ ಕವನ ಸಂಕಲನಗಳು. ಇವು ಒಂದು ನೆಲೆಯಲ್ಲಿ ನವೋದಯ ಕಾಲದ, ಮತ್ತೊಂದು ನೆಲೆಯಲ್ಲಿ ನವ್ಯೋತ್ತರ ಕಾಲದ ರೂಪಗಳನ್ನು ಹಾಗೂ ಕಾಳಜಿಗಳನ್ನು ದರ್ಶಿಸುತ್ತವೆ.) ವಿಮರ್ಶೆ ಮತ್ತು ಸಾಮಾಜಿಕ ಚಿಂತನೆ (ಎಂ. ಎಂ. ಕಲಬುರ್ಗಿ, **ಮಾರ್ಗ–೧,೨,೩**; ಯು. ಆರ್. ಅನಂತಮೂರ್ತಿ, **ವಾಲ್ಮೀಕಿಯ ನೆವದಲ್ಲಿ, ಋಜುವಾತು** ಇತ್ಯಾದಿ; ರಹಮತ್ ತರೀಕೆರೆ, **ಕತ್ತಿಯಂಚಿನ ದಾರಿ**, ಷ. ಶೆಟ್ಟರ್, **ಶಂಗಂ ತಮಿಳಗಂ**, ಕನ್ನಡ ವಿ. ವಿ. ಯ 'ಸಾಂಸ್ಕೃತಿಕ ಮುಖಾಮುಖಿ'

ಮಾಲಿಕೆ, ಇತ್ಯಾದಿ); ಶ್ರೇಷ್ಠ ಆತ್ಮಕಥೆಗಳು (ಸಿ. ಜಿ. ಕೃಷ್ಣಸ್ವಾಮಿ, **ಕತ್ತಾಲೆ ಬೆಳದಿಂಗಳೊಳಗ**; ಬಿ. ವಿ. ಕಾರಂತ, **ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ**); ಇತ್ಯಾದಿ ಈ ಕಾಲಖಂಡದ ಕನ್ನಡ ವಾಙ್ಮಯವನ್ನು ಶ್ರೀಮಂತಗೊಳಿಸಿವೆ.

ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ಕಳೆದೊಂದು ದಶಕದಿಂದ **ಕನ್ನಡ ಲೇಖಕರ ಭೌಗೋಳಿಕ ವ್ಯಾಪ್ತಿ** ಅಗಾಧವಾಗಿ ವಿಸ್ತರಿಸುತ್ತಿದೆ. ಮುಂಬಯಿಯಲ್ಲಿ ಇಂದು ಇಪ್ಪತ್ತಕ್ಕೂ ಹೆಚ್ಚು ಕನ್ನಡ ಸಂಘಗಳು ಕ್ರಿಯಾಶೀಲವಾಗಿವೆ ಮತ್ತು ಇವೆಲ್ಲವುಗಳನ್ನೂ ಒಂದೆಡೆ ತರುವ ಒಂದು ಕೇಂದ್ರ ಕನ್ನಡ ಸಂಘವಿದೆ (ಮಾತುಂಗಾದಲ್ಲಿರುವ 'ಮುಂಬಯಿ ಕರ್ನಾಟಕ ಸಂಘ'). ಈ ಸಂಘ-ಸಂಸ್ಥೆಗಳ ಮೂಲಕ ಇಡೀ ವರ್ಷ ಅರ್ಥಪೂರ್ಣ ಕನ್ನಡ ಕಾರ್ಯಕ್ರಮಗಳು ನಡೆಯುತ್ತವೆ; ಮತ್ತು ಈ ಸಂಸ್ಥೆಗಳ ಮೂಲಕ ಅನೇಕ ಯುವ ಲೇಖಕರು - ಕವಿಗಳು ಮತ್ತು ಕಥೆಗಾರರು- ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಾರೆ (ಉದಾ. ವೇಣುಗೋಪಾಲ್ ದಂಪತಿಗಳು, ಮಿತ್ರಾ ವೆಂಕಟರಾಜ್, ಇತ್ಯಾದಿ). ಹಾಗೆಯೇ, ಅಮೆರಿಕಾದಲ್ಲಿ ಅನೇಕ ಕನ್ನಡ ಸಂಘಗಳು ಕಾರ್ಯನಿರತವಾಗಿದ್ದು, ಅವೆಲ್ಲವುಗಳೂ ಸೇರಿ 'ಅಕ್ಕ' ಎಂಬ ಕೇಂದ್ರ ಸಂಸ್ಥೆಯನ್ನು ಕಟ್ಟಿಕೊಂಡಿವೆ. 'ಅಕ್ಕ'ದ ಮೂಲಕ ಮೂರು ವರ್ಷಗಳಿಗೊಮ್ಮೆ ನಡೆಯುವ ಕನ್ನಡ ಸಮ್ಮೇಳನಗಳು ಸದಸ್ಯರಿಗೆ ಮಾತೃಭೂಮಿಯ ಸಾಹಿತ್ಯ-ಸಂಸ್ಕೃತಿಗಳೊಡನೆ ಸಂಬಂಧವನ್ನು ಕಲ್ಪಿಸುವುದರಿಂದ ಅನೇಕ ಹೊಸ ಲೇಖಕರು ಹೊರಬರುತ್ತಿದ್ದಾರೆ (ಗುರುಪ್ರಸಾದ್ ಕಾಗಿನೆಲೆಯವರ ಕಾದಂಬರಿ, **ಬಿಳಿಯ ಚಾದರ**, ನಾಗ ಐತಾಳರು ಸಂಪಾದಿಸಿರುವ **ಕಾರಂತ ಚಿಂತನ** ಮತ್ತು **ಕುವೆಂಪು ಸಾಹಿತ್ಯ ಸಮೀಕ್ಷೆ**, ಹುಲಿಕಲ್ ವಿಶ್ವನಾಥ್ ಅವರು ಸಂಪಾದಿಸಿರುವ, ಜಯಂತ ಕಾಯ್ಕಿಣಿಯವರ ಕಥೆಗಳ ಇಂಗ್ಲೀಷ್ ಅನುವಾದ dots and lines, ಇತ್ಯಾದಿ). ಈ ಬಗೆಯ 'ಹೊರನಾಡು /ಹೊರದೇಶಗಳ ಕನ್ನಡಿಗರ' ಕನ್ನಡ ಪ್ರೇಮ ಹಾಗೂ ಕ್ರಿಯಾಶೀಲತೆ ಮುಂಬರುವ ದಿನಗಳಲ್ಲಿ ಅನೇಕ ನೂತನ ಸಾಧ್ಯತೆಗಳನ್ನು ಸೂಚಿಸುತ್ತದೆ.

ಈ ಸಂದರ್ಭದಲ್ಲಿ ನಾವು ಮರೆಯಬಾರದ ಒಂದು ಮುಖ್ಯ ಸಂಗತಿಯೆಂದರೆ ಕನ್ನಡದ ಬಹುಮುಖೀ ಮೌಖಿಕ ಪರಂಪರೆ ಮುನ್ನೆಲೆಗೆ ಬಂದುದು ಈ ಕಾಲಘಟ್ಟದಲ್ಲಿಯೇ. ಮೂರ್ನಾಲ್ಕು ದಶಕಗಳ ಹಿಂದೆಯೇ ಡಾ. ಜೀಶಂಪ, ಡಾ. ಪಿ. ಕೆ. ರಾಜಶೇಖರ ಮುಂತಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರು. ಆದರೆ, ಏಕ ನಿರೂಪಕನಿಂದ ಸಂಪಾದಿಸಿದ ಕನ್ನಡದ ಎಲ್ಲಾ ಪ್ರಮುಖ ಮೌಖಿಕ ಮಹಾಕಾವ್ಯಗಳು ೧೯೯೧ರಲ್ಲಿ ಸ್ಥಾಪಿಸಲ್ಪಟ್ಟ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಈ ಸಂಸ್ಥೆಯಿಂದ ಪ್ರಕಟಗೊಂಡುವು; ಮತ್ತು ಈ ಮಹತ್ಕಾರ್ಯದ ಚಾಲಕ ಶಕ್ತಿಯಾಗಿದ್ದವರು ಆ ವಿ.ವಿ.ಯ ಮೊದಲ ಕುಲಪತಿಗಳಾಗಿದ್ದ ಡಾ. ಚಂದ್ರಶೇಖರ ಕಂಬಾರರು. ಅವರ ಪ್ರೇರಣೆ-ಸಹಕಾರಗಳಿಂದಾಗಿ ಕನ್ನಡದ ಸುಮಾರು **ಹತ್ತು** ಪ್ರಮುಖ ಮೌಖಿಕ ಮಹಾಕಾವ್ಯಗಳು ಸುವ್ಯವಸ್ಥಿತವಾಗಿ ಸಂಪಾದಿಸಲ್ಪಟ್ಟು ಪ್ರಕಟಗೊಂಡಿವೆ. ಮತ್ತೊಂದು ಮೌಖಿಕ ಮಹಾಕಾವ್ಯ, ಡಾ. ವೀರಣ್ಣ ದಂಡೆಯವರು ಸಂಪಾದಿಸಿದ **ಜಾನಪದ ಹಾಲುಮತ ಮಹಾಕಾವ್ಯ**, ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಯಿತು. ಕೃತಿ-ಪ್ರಕಟಣೆಯೇ ಅಲ್ಲದೆ, ಮೌಖಿಕ ಪರಂಪರೆಯ ವಾಙ್ಮಯವನ್ನು ಕುರಿತು ಗಂಭೀರ ವಿಶ್ಲೇಷಣೆ-ವ್ಯಾಖ್ಯಾನಗಳೂ ಈ ಅವಧಿಯಲ್ಲಿ

ಹೊರಬಂದುವು (ಡಿ. ಆರ್. ನಾಗರಾಜ್, **ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ**; ಪುರುಷೋತ್ತಮ ಬಿಳಿಮಲೆ, **ಕೂಡುಕಟ್ಟು**; ಎಸ್. ಮೀರಾಸಾಬಿಹಳ್ಳಿ, **ಕಾಡುಗೊಲ್ಲ ಬುಡಕಟ್ಟು ವೀರರು**; ಮುದೇನೂರು ನಿಂಗಪ್ಪ, **ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು**; ಇತ್ಯಾದಿ). ಹಾಗೆಯೇ, **ಮಲೆ ಮಾದೇಶ್ವರ** ಮತ್ತು ಕನ್ನಡದ ಎಲ್ಲಾ ಮೌಖಿಕ ಮಹಾಕಾವ್ಯಗಳ ಆಯ್ದ ಭಾಗಗಳು ಮತ್ತು ೪೦೦ ವಚನಗಳು ವಿಮರ್ಶಾತ್ಮಕ ಮುನ್ನುಡಿಗಳೊಡನೆ ಇಂಗ್ಲೀಷ್ ಭಾಷೆಗೆ ಈ ಕಾಲಘಟ್ಟದಲ್ಲಿ ಅನುವಾದಗೊಂಡು, ಕನ್ನಡೇತರ ಓದುಗರಿಗೂ ಅವು ಲಭ್ಯವಾದುವು (Strings And Cymbals, The Sign).

ಮೇಲ್ಕಾಣಿಸಿದ ಕೃತಿಗಳನ್ನಾಧರಿಸಿ, ಇತ್ತೀಚಿನ ಕನ್ನಡ ಸಾಹಿತ್ಯದ ಒಲವು–ತಿರುವುಗಳನ್ನು ಕುರಿತು, ಪ್ರಾಯಃ, ಈ ಕೆಲವು ಸಾಧಾರಣೀಕೃತ ಹೇಳಿಕೆಗಳನ್ನು ಕೊಡಬಹುದು:

(ಅ) ದೇಸಿ ಸಂಸ್ಕೃತಿಯ ಹಾಗೂ ದೇಸಿ ಕಥನಮಾರ್ಗಗಳ ಶೋಧ : ಈ ಕಾಲಘಟ್ಟದಲ್ಲಿಯೇ ಭಾರತವು ಆರ್ಥಿಕವಾಗಿ ಹೊರ ಪ್ರಪಂಚಕ್ಕೆ ತನ್ನನ್ನು ಸಂಪೂರ್ಣವಾಗಿ ತೆರೆದುಕೊಂಡು, ಜಾಗತೀಕರಣವನ್ನು ಉತ್ಸಾಹದಿಂದ ಸ್ವಾಗತಿಸಿದುದು ಅನೇಕ ಲೇಖಕರನ್ನು ಹಾಗೂ ಚಿಂತಕರನ್ನೂ ಅಧೀರರನ್ನಾಗಿಸಿತು. ಮುಕ್ತ ಮಾರುಕಟ್ಟೆಯ ಪ್ರಭಾವದಿಂದ ದೇಶೀಯ/ಸ್ಥಳೀಯ ಸಾಂಸ್ಕೃತಿಕ ಮಾದರಿಗಳು ಮತ್ತು ಚಿಂತನಾ ಮಾರ್ಗಗಳು ಕಳೆದು ಹೋಗಬಹುದೆಂಬ ಆತಂಕದಿಂದ ಅನೇಕರು ನೇರವಾಗಿ ಹಾಗೂ ಪರೋಕ್ಷವಾಗಿ ಇಡೀ ಜಾಗತೀಕರಣ ಪ್ರಕ್ರಿಯೆಯನ್ನು–ಅದರಲ್ಲಿಯೂ ಪಾಶ್ಚಿಮಾತ್ಯ 'ಅಭಿವೃದ್ಧಿ' ಮಾದರಿಯನ್ನು –ವಿರೋಧಿಸಿದರು. (ಹಾಗೆ ನೋಡಿದರೆ, ಈ ವಿಮರ್ಶೆ–ವಿರೋಧಗಳು ೮೦ರ ದಶಕದಿಂದಲೇ ಪ್ರಾರಂಭವಾಗಿದ್ದ ವಸಾಹತೋತ್ತರ ಚಿಂತನೆಯ ಮುಂದುವರಿದ ಭಾಗವಾಗಿಯೇ ಕಾಣುತ್ತವೆ.) ಪರಿಣಾಮತಃ, ಕನ್ನಡದ ದೇಸಿ ಪ್ರಕಾರಗಳು (ಕಾವ್ಯದಲ್ಲಿ ತ್ರಿಪದಿ–ಚೌಪದಿಗಳ ಉಪಯೋಗ, ಗೇಯ ಕಾವ್ಯಗಳು, ಸ್ಥಳೀಯ ಸಂಸ್ಕೃತಿಯ ಅಧ್ಯಯನಗಳು ಇತ್ಯಾದಿ), ಕಥನಗಳಲ್ಲಿ ಪಾರಂಪರಿಕ ದೇಸಿ ನಿರೂಪಕರ ಉಪಯೋಗ (ಗೊಂದಲಿಗರು, ಹೆಳವರು, ಪಂಬದರು–ಮುಂತಾದವರ ಉಪಯೋಗ); ಅಭಿಜಾತ ಕನ್ನಡ ಕಾವ್ಯಗಳ/ಗ್ರಂಥಗಳ ನೂತನ ರೂಪಾಂತರಗಳು; ಮತ್ತು ದೇಸಿ ಚಿಂತನೆ ಈ ಕಾಲಘಟ್ಟದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಅನೇಕ ಸಾಹಿತ್ಯ ಪ್ರಭೇದಗಳಲ್ಲಿ ಕಂಡುಬರುವ ಕನ್ನಡದ ಸ್ಥಳ–ಜಾತಿ ವಿಶಿಷ್ಟ ಕನ್ನಡ ಭಾಷಾ ಸ್ತರವನ್ನು ಮತ್ತು ಮೌಖಿಕ ಪರಂಪರೆಯನ್ನು ಕುರಿತ ಆಸಕ್ತಿಯನ್ನೂ ಈ ನೆಲೆಯಲ್ಲಿಯೇ ನಾವು ಗ್ರಹಿಸಬಹುದು.

(ಆ) ವಾಸ್ತವತಾವಾದಕ್ಕಿಂತ ಭಿನ್ನ ಮಾರ್ಗಗಳ ಹಾಗೂ ದೃಷ್ಟಿಕೋನಗಳ ಶೋಧ: ಕನ್ನಡ ಸಾಹಿತ್ಯದಲ್ಲಿ ೨೦ನೆಯ ಶತಮಾನದುದ್ದಕ್ಕೂ ನಾವು ಕಾಣುವ ವಾಸ್ತವತಾ ಮಾರ್ಗದ ನಿಲುವು ಮತ್ತು ಗೃಹೀತಗಳು ಈ ಕಾಲಖಂಡದಲ್ಲಿ ಓಸ್ನೆಲೆಗೆ ಸರಿಯುವುದನ್ನು ನಾವು ನೋಡುತ್ತೇವೆ. ಕಾವ್ಯವಾಗಲಿ ಕಥನಗಳಾಗಲಿ, ಅವುಗಳಲ್ಲಿ ಹೆಚ್ಚಿನವು ವಾಸ್ತವತಾ ಮಾರ್ಗವನ್ನು ತಿರಸ್ಕರಿಸಿ, ತಾವು ಗ್ರಹಿಸಿದ ಸಮಾಜದ 'ನಿಜ ವಾಸ್ತವ'ವನ್ನು ರೋಚಕ ಕಥೆಗಳಂತೆ ಅಥವಾ ರೂಪಕ ಕಥೆಗಳಂತೆ, ಅಥವಾ ಅನ್ಯೋಕ್ತಿಗಳಂತೆ ಅಭಿವ್ಯಕ್ತಿಗೊಳಿಸಲು ಪ್ರಯತ್ನಿಸುವುದನ್ನು, ಸಾಮಾಜಿಕ 'ಚರಿತ್ರೆ'ಗಳ ಸ್ಥಾನದಲ್ಲಿ ಆಧುನಿಕ 'ಪುರಾಣ'ಗಳನ್ನು ನಾವು ಕಾಣುತ್ತೇವೆ (ಉದಾ. **ಶಿಖರಸೂರ್ಯ**: ಇದನ್ನು ಒಂದು ನೆಲೆಯಲ್ಲಿ 'ಬೇತಾಳ ಪಂಚವಿಂಶತಿ' ಕಥೆಗಳಂತೆಯೇ ಅಥವಾ ಆಧುನಿಕ ಪುರಾಣದಂತೆ ನಾವು ನೋಡಬಹುದು;

ತೊಟ್ಟಿಲು ಒಂದು ನೆಲೆಯಲ್ಲಿ 'ಫ್ಯಾಂಟಸಿ'ಯಂತೆ ನಮಗೆ ಕಾಣುತ್ತದೆ. ವಾಸ್ತವತೆ ಮತ್ತು ಅತಿ-ವಾಸ್ತವತೆ ಇವುಗಳನ್ನು ಇದೇ ರೀತಿ ಒಂದುಗೂಡಿಸುವ ಇತರ ಕಥನಗಳೆಂದರೆ **ತೇರು, ಅರಮನೆ,** ಇತ್ಯಾದಿ). ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಸಾಹಿತ್ಯದಲ್ಲಿ ವಾಸ್ತವತಾವಾದದ ನಿರಾಕರಣೆಗೆ ಕಾರಣ ಆ ಮಾರ್ಗ ಒಂದು ಸಮಾಜದ/ ವ್ಯಕ್ತಿಯೊಬ್ಬನ ಆಂತರಿಕ ಸತ್ಯವನ್ನು ತಲಪಲಾರದು ಎಂಬ ಗ್ರಹಿಕೆ. ಈ ಬಗೆಯ ಗ್ರಹಿಕೆ ಆಧುನಿಕೋತ್ತರ ಚಿಂತನೆಯ ಒಂದು ಉಪ-ಪ್ರಮೇಯ.

ಒಟ್ಟಿನಲ್ಲಿ, ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಕನ್ನಡ ವಾಙ್ಮಯದ 'ಒಳಮೈ' ಆರೋಗ್ಯಪೂರ್ಣವಾಗಿದೆ; ಮತ್ತು ಆ ಕ್ಷೇತ್ರವನ್ನು ನೂತನ ವೈಚಾರಿಕತೆ ಮತ್ತು ನೂತನ ಆಕೃತಿಗಳು, ಹೊಸ ದನಿಗಳು ಮತ್ತು ಹೊಸ ಅನುಭವಲೋಕಗಳು ಪ್ರವೇಶಿಸಿವೆ ಎಂದು ಖಚಿತವಾಗಿ ಹೇಳಬಹುದು.

●

ಹೊರಮೈ : ಆದರೆ, ಇದೇ ಮಾತನ್ನು ಈ ಕಾಲಘಟ್ಟದ ಕನ್ನಡ ಸಾಹಿತ್ಯದ 'ಹೊರಮೈ' ಬಗ್ಗೆ ಹೇಳುವುದು ಕಷ್ಟ. ದುರದೃಷ್ಟವಶಾತ್, ಹೆಚ್ಚಿನ ಲೇಖಕರು / ವಿಮರ್ಶಕರು ಈ ಬಗ್ಗೆ ಚಿಂತಿಸುವುದು ಕಾಣುವುದಿಲ್ಲ. ಕನ್ನಡ ವಾಙ್ಮಯದ ಹೊರಮೈಯನ್ನು ಈ ಕಾಲಘಟ್ಟದಲ್ಲಿ ಬಾಧಿಸುತ್ತಿರುವ, ಅದನ್ನು ಒಳಗೊಳಗೇ ಕೊರೆಯುತ್ತಿರುವ ಅನಾರೋಗ್ಯಕರ ಅಂಶಗಳನ್ನು, ಸ್ಥೂಲವಾಗಿ, ಹೀಗೆ ಗುರುತಿಸಬಹುದು:

ಅ) ವಿತರಣೆಯ ವ್ಯವಸ್ಥೆ: ಮರು ಮುದ್ರಣಗಳು, ಧಾರ್ಮಿಕ ಗ್ರಂಥಗಳು, ಆರೋಗ್ಯ-ಆರ್ಥಿಕ ಕೈಪಿಡಿಗಳು, ಮತ್ತು ಸಾಹಿತ್ಯ ಕೃತಿಗಳು-ಇವೆಲ್ಲವೂ ಸೇರಿ ಪ್ರತಿ ವರ್ಷವೂ ಕನ್ನಡದಲ್ಲಿ ಸುಮಾರು ೬೦೦೦ ಕೃತಿಗಳು ಪ್ರಕಟವಾಗುತ್ತವೆ; ಇವುಗಳಲ್ಲಿ ಸಾಹಿತ್ಯವೆಂಬ ವರ್ಗಕ್ಕೆ ಸೇರುವ ಕೃತಿಗಳ ಸಂಖ್ಯೆ ಸುಮಾರು ೩೦೦೦. ಇಷ್ಟೂ ಕೃತಿಗಳ ವಿತರಣ ಜಾಲದ ಸ್ವರೂಪವೇನು? ಎಲ್ಲರಿಗೂ ಗೊತ್ತಿರುವ ಉತ್ತರ: ಇವುಗಳಲ್ಲಿ ಬಹು ದೊಡ್ಡ ಪಾಲನ್ನು 'ಸಗಟು ಖರೀದಿ'ಯ ಮೂಲಕ ಕರ್ನಾಟಕ ಸರಕಾರ ಕೊಳ್ಳುತ್ತದೆ.

ಈ ಸಗಟು ಖರೀದಿಯೂ ನಾಲ್ಕು ನೆಲೆಗಳಲ್ಲಿ ಆಗುತ್ತದೆ. ಮೊದಲನೆಯದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನೆಲೆಯಲ್ಲಿ. ಸುಮಾರು ೧೯೬೫ರಿಂದಲೂ ಜಾರಿಯಲ್ಲಿರುವ ಈ ವ್ಯವಸ್ಥೆ ನಗರ-ಪಟ್ಟಣಗಳ 'ಆಸ್ತಿ-ಶುಲ್ಕ'ದ ರೂಪದಲ್ಲಿ ಬರುವ ತೆರಿಗೆಯ ೬% ಭಾಗವನ್ನು ಪುಸ್ತಕ ಖರೀದಿಗೆ ಮೀಸಲಿಡುತ್ತದೆ. ಸರಕಾರವೇ ನೇಮಿಸಿದ ತಜ್ಞರ ಸಮಿತಿಯೊಂದು ಶಿಫಾರಸ್ಸು ಮಾಡಿದ ಎಲ್ಲಾ ಕನ್ನಡ ಗ್ರಂಥಗಳನ್ನೂ ಈ ಇಲಾಖೆ ಕೊಂಡು, ಅವುಗಳನ್ನು ಕರ್ನಾಟಕದ ಎಲ್ಲಾ ಅನುದಾನಿತ/ ಸರಕಾರಿ ಶಾಲೆಗಳಿಗೆ ಮತ್ತು ಸಾರ್ವಜನಿಕ ಗ್ರಂಥಾಲಯಗಳಿಗೆ ಹಂಚುತ್ತದೆ. ಬೆಂಗಳೂರಿನಂತಹ ಮಹಾನಗರ ಒಂದರಲ್ಲಿಯೇ ಬರುವ ಹಣ ೯-೧೦ ಕೋಟಿಗಳಷ್ಟಾಗುತ್ತದೆ; ೨೦೦೫ರಲ್ಲಿ ತಜ್ಞರ ಸಮಿತಿ ಆ ವರ್ಷಕ್ಕೆ ೩೨೦೦ ಕೃತಿಗಳನ್ನು ಆಯ್ಕೆ ಮಾಡಿತು; ಮತ್ತು ಆಯ್ಕೆ ಮಾಡಿದ **ಪ್ರತಿಯೊಂದು ಕೃತಿಯ ೩೦೦ ಪ್ರತಿಗಳನ್ನು** ಈ ಇಲಾಖೆ ಕೊಳ್ಳಬೇಕು ಎಂದು ವಿಧಿಸಿತು -ಈ ವಿವರಗಳನ್ನು ಗಮನಿಸಿದಾಗ ಸರಕಾರ ಈ ಇಲಾಖೆಯ ಮೂಲಕ ಮಾಡುವ ಖರೀದಿಯ ಬೃಹತ್ ಸ್ವರೂಪ ನಮಗೆ ಗೊತ್ತಾಗುತ್ತದೆ. (ಈ ವರ್ಷದಿಂದ ಸಮಿತಿ

ಆಯ್ಕೆ ಮಾಡಿದ ಕೃತಿಗಳ ೫೦೦ ಪ್ರತಿಗಳನ್ನು ಕೊಳ್ಳಲು ಸರಕಾರ ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ.)

ಈ ಸಂದರ್ಭದಲ್ಲಿ ಏಳುವ ಪ್ರಶ್ನೆಗಳೆಂದರೆ ಇವು: ಪ್ರತಿವರ್ಷವೂ ಸರಕಾರ ಖರೀದಿಸುವ ಇಷ್ಟು ಪುಸ್ತಕಗಳು ಸರಕಾರದ ಗೋಡೌನ್‌ಗಳಿಂದ ಎಲ್ಲಾ ಗ್ರಂಥಾಲಯ ಗಳಿಗೆ ಹೋಗುವುದು ಯಾವಾಗ? ಆ ಗ್ರಂಥಾಲಯಗಳಲ್ಲಿ ಈ ಅಗಾಧ ಸಂಖ್ಯೆಯ ಪುಸ್ತಕಗಳನ್ನು ಪ್ರದರ್ಶಿಸಲು ಸ್ಥಳವಿದೆಯೆ? (ಅನೇಕ ಗ್ರಂಥಾಲಯಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡಗಳಲ್ಲಿವೆ; ಬೆಂಗಳೂರಿನ ಒಂದು ಗ್ರಂಥಾಲಯ ಕಟ್ಟಡಕ್ಕೆ ಮಾಸಿಕ ೭೦,೦೦೦/- ಬಾಡಿಗೆ ಕೊಡುತ್ತದೆ.) ಅವುಗಳಿಗೆ ಕ್ರಮ ಸಂಖ್ಯೆ ಕೊಟ್ಟು ಅವುಗಳು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ದೊರಕುವಂತೆ ಮಾಡಲು ಆವಶ್ಯಕವಿರುವ ಸಿಬ್ಬಂದಿ ಎಷ್ಟು ಗ್ರಂಥಾಲಯಗಳಲ್ಲಿದ್ದಾರೆ? ಸಾಧಾರಣವಾಗಿ ಆಗುವುದೇನೆಂದರೆ, ಖರೀದಿಸಿದ ಸುಮಾರು ಆರು ತಿಂಗಳುಗಳಲ್ಲಿ ಸರಕಾರಿ ಗೋಡೌನ್‌ಗಳಿಂದ ಗ್ರಂಥಾಲಯಗಳ ಗೋಡೌನ್‌ಗಳಿಗೆ ಗ್ರಂಥಗಳು ತಲಪುತ್ತವೆ; ಮತ್ತು ಒಂದು ವರ್ಷದ ನಂತರ ಕೆಲವು ಗ್ರಂಥಗಳು ಶೆಲ್ಫ್‌ಗಳಿಗೆ ಬರುತ್ತವೆ, ಉಳಿದ ಹೆಚ್ಚಿನ ಗ್ರಂಥಗಳು ಗೋಡೌನ್‌ಗಳಲ್ಲಿಯೇ ಕೊಳೆಯುತ್ತವೆ.

ಸಗಟು ಖರೀದಿಯ ಎರಡನೆಯ ನೆಲೆಯೆಂದರೆ 'ಸಾರ್ವಜನಿಕ ಶಿಕ್ಷಣ ಇಲಾಖೆ.' ಇದರ ವಾರ್ಷಿಕ ಬಜೆಟ್ ಸುಮಾರು ೩೦-೫೦ ಲಕ್ಷಗಳಷ್ಟಿದ್ದು, ಅದು ಆಯ್ಕೆಯಾದ ಪ್ರತಿಯೊಂದು ಪುಸ್ತಕದ ಹೆಚ್ಚೆಂದರೆ ೩೨೦ ಪ್ರತಿಗಳನ್ನು ಕೊಳ್ಳುತ್ತದೆ; ಮತ್ತು ಇವುಗಳನ್ನು ಸರಕಾರಿ/ಅನುದಾನಿತ ಶಾಲೆಗಳಿಗೆ ಹಂಚುತ್ತದೆ. ಮೂರನೆಯ ನೆಲೆಯೆಂದರೆ ಪುಸ್ತಕ ಪ್ರಾಧಿಕಾರ. ಇದನ್ನು ೧೯೯೨ರಲ್ಲಿ ಮೊಯಿಲಿಯವರು ಕನ್ನಡ ಪುಸ್ತಕಗಳ ವಿತರಣ ಜಾಲವನ್ನು ಹೆಚ್ಚು ಉಪಯುಕ್ತವಾಗುವಂತೆ ಮಾಡಲು ಮತ್ತು ಇತರ ಖಾಸಗಿ ಪ್ರಕಾಶಕರು ಪ್ರಕಟಿಸದಂತಹ ಪ್ರಾಚೀನ / ನವೀನ ಶಾಸ್ತ್ರ ಗ್ರಂಥಗಳು ಮತ್ತು ಆಕರಗಳು ಇವನ್ನು ಪ್ರಕಟಿಸುವುದಕ್ಕಾಗಿ ಸ್ಥಾಪಿಸಿದರು. ಈ ಸಂಸ್ಥೆಯ ಒಟ್ಟು ಆಯ-ವ್ಯಯ ೨೦೦೩-೨೦೦೫ ಈ ಅವಧಿಯಲ್ಲಿ ೯೦ ಲಕ್ಷದಷ್ಟಿತ್ತು; ಮತ್ತು ಈ ಸಂಸ್ಥೆ ಸಾಮಾನ್ಯವಾಗಿ ೫೦-೬೦ ಪ್ರಕಾಶಕರಿಂದ ಪ್ರತಿ ಪುಸ್ತಕದ ೩೦-೪೦ ಪ್ರತಿಗಳನ್ನು ಖರೀದಿಸಿ, ಆ ಪುಸ್ತಕಗಳನ್ನು ಗಡಿ ಭಾಗಗಳ ಶಾಲೆಗಳಿಗೆ ಮತ್ತು ಆಸಕ್ತಿಯಿರುವ ವಿದೇಶಿ ಸಂಸ್ಥೆಗಳಿಗೆ ದಾನವಾಗಿ ನೀಡುತ್ತದೆ.

ಮೂಲ ಉದ್ದೇಶವೇನೇ ಇರಲಿ, ಕಳೆದ ಕೆಲವು ವರ್ಷಗಳಿಂದ ಈ ಸಂಸ್ಥೆ ಪ್ರಕಾಶಕರನ್ನು ಒಂದುಗೂಡಿಸುವ, ಅವರ ಸಮಸ್ಯೆಗಳನ್ನು ಪರಿಹರಿಸುವ, ವಿತರಣ ಜಾಲವನ್ನು ಗಟ್ಟಿಗೊಳಿಸುವ, ವಿಚಾರ ಸಂಕಿರಣಗಳನ್ನು ಏರ್ಪಡಿಸುವ, ಇತ್ಯಾದಿ ಕಾರ್ಯಗಳಿಗಿಂತ ಹೆಚ್ಚಾಗಿ, ತಾನೂ ಒಂದು ಪ್ರಕಾಶನ ಸಂಸ್ಥೆಯಂತೆಯೇ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡಮಿಗಳು, ಪುಸ್ತಕ ಪ್ರಾಧಿಕಾರ, ಕನ್ನಡ ವಿ. ವಿ. ಮತ್ತು ಸ್ವಲ್ಪ ಮಟ್ಟಿಗೆ ಇತರ ಎಲ್ಲಾ ವಿವಿಗಳು – ಈ ಸಂಸ್ಥೆಗಳೆಲ್ಲವೂ ಪ್ರಕಟಣೆಯನ್ನೇ ಮುಖ್ಯವಾಗಿ ಪರಿಗಣಿಸಿದರೆ, ಆ ಪ್ರಕಟಿತ ಪುಸ್ತಕಗಳನ್ನು ಓದುಗರತ್ತ ಒಯ್ಯುವವರು ಯಾರು? ಮತ್ತು ಅವುಗಳನ್ನೆಲ್ಲಾ ಓದುವವರು ಯಾರು?

ಸಗಟು ಖರೀದಿಯ ನಾಲ್ಕನೆಯ ನೆಲೆಯೆಂದರೆ ಡಿಡಿಪಿಐ ಮತ್ತು ಮಂಡಳ್ ಪಂಚಾಯತ್‌ಗಳು ಮಾಡುವ ಸಗಟು ಖರೀದಿ. ಇವುಗಳಿಗೆ ಬರುವ ಅನುದಾನ ವರ್ಷದಿಂದ ವರ್ಷಕ್ಕೆ ಬದಲಾಗುತ್ತದಾದ್ದರಿಂದ ಖಚಿತವಾಗಿ ಒಂದು ವರ್ಷದಲ್ಲಿ ಇವು ಎಷ್ಟು ಪುಸ್ತಕಗಳನ್ನು ಕೊಳ್ಳುತ್ತವೆ ಎಂದು ಹೇಳುವುದು ಕಷ್ಟ

ಇದರರ್ಥ, 'ಉಪಯುಕ್ತ ಸಂಪರ್ಕ'ಗಳನ್ನು ಹೊಂದಿರುವ ಖಾಸಗೀ ಪ್ರಕಾಶನವೊಂದು ತನ್ನ ಹೆಚ್ಚಿನ ಪ್ರಕಟಣೆಗಳ ೬೦೦-೮೦೦ ಪ್ರತಿಗಳನ್ನು ಈ 'ನಾಲ್ಮೊಗ' ಸಗಟು ಖರೀದಿಯಲ್ಲಿಯೇ ಮಾರಬಹುದು: ಇತರ ಪುಸ್ತಕ ವ್ಯಾಪಾರಿಗಳಿಗೆ ಅವುಗಳನ್ನು ತಲಪಿಸುವ ಪ್ರಮೇಯವೇ ಇಲ್ಲ. **ಅರ್ಥಾತ್, ಇಂದು ಪ್ರಕಾಶಕನು ಮೊದಲಿಗೆ ಕೇವಲ ೩೦೦-೫೦೦ ಪ್ರತಿಗಳನ್ನು ಮುದ್ರಿಸಿ, ಅನಂತರ ಸಗಟು ಖರೀದಿಗೆ ತನ್ನ ಎಷ್ಟು ಪ್ರಕಟಣೆಗಳು ಆಯ್ಕೆಯಾಗುತ್ತವೆಂದು ನೋಡಿಕೊಂಡು ಕೇವಲ ಆ ಪುಸ್ತಕಗಳ ಹೆಚ್ಚಿನ ಪ್ರತಿಗಳನ್ನು ಮಾಡಿ (ಇದು ಡಿಟಿಪಿ ತಂತ್ರಜ್ಞಾನದ ಕೊಡುಗೆ) ಸುಮ್ಮನೆ ಕೂರಬಹುದು; ಇವನಿಗೆ ಪುಸ್ತಕಗಳನ್ನು ಕೊಳ್ಳುವ ಬಿಡಿ ಓದುಗರಾಗಲಿ, ಪುಸ್ತಕ ವ್ಯಾಪಾರಿಗಳಾಗಲಿ ಬೇಕೇ ಇಲ್ಲ.** ಎಂದರೆ, ವರ್ಷಕ್ಕೆ ೩೦೦೦ದಷ್ಟು 'ಸಾಹಿತ್ಯಕ' ಪುಸ್ತಕಗಳು ಪ್ರಕಟಗೊಂಡರೂ ಓದುಗನಿಗೆ ಅವುಗಳಲ್ಲಿ ೨೦% (ಕೊಳ್ಳಲು / ಓದಲು) ದೊರಕಿದರೆ ಅದು ಅವನ ಅದೃಷ್ಟ.

ಆ) ಪುಸ್ತಕ ವ್ಯಾಪಾರಿ: ಓದುಗ ಮತ್ತು ಪ್ರಕಾಶಕರ ನಡುವಿನ ಮುಖ್ಯ ಕೊಂಡಿಯೆಂದರೆ ಪುಸ್ತಕ ವ್ಯಾಪಾರಿ; ಸಾಹಿತ್ಯ ಪ್ರಸಾರದಲ್ಲಿ ಇವನ ಪಾತ್ರ ಮಹತ್ವದ್ದು. ಆದರೆ ಇಂದು ಅವನ ಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಒಂದು, ಅವನಿಗೆ ಪ್ರಕಟಣೆಗಳ ಎಲ್ಲಾ ವಿವರಗಳು ಸಿಕ್ಕುವುದೇ ಇಲ್ಲ (ಹೊಸ ಪ್ರಕಟಣೆಗಳ ವಿವರಗಳನ್ನು ಅರಿಯಲು ಇವನು ಪತ್ರಿಕೆಗಳ 'ಸಾದರ ಸ್ವೀಕಾರ' ವಿಭಾಗವನ್ನೇ ಅವಲಂಬಿಸಬೇಕು. ಆದರೆ, ಸಗಟು ಖರೀದಿಯ ಮೋಹದಿಂದಾಗಿ, ಪ್ರಕಾಶಕರು ವಿಮರ್ಶೆಗಾಗಲಿ ಅಥವಾ ಸಾದರ ಸ್ವೀಕಾರಕ್ಕಾಗಲಿ ತಮ್ಮ ಪ್ರಕಟಣೆಗಳನ್ನು ಕಳುಹಿಸಲೇ ಬೇಕೆಂದಿಲ್ಲ. ಆದ್ದರಿಂದ, ಹೆಚ್ಚಿನ ಸಂದರ್ಭಗಳಲ್ಲಿ ಪ್ರಮುಖ ಕೃತಿಗಳ ಬಗ್ಗೆಯೂ ಅವನಿಗೆ ಗೊತ್ತಿರುವುದಿಲ್ಲ). ಅನೇಕ ಪುಸ್ತಕ ವ್ಯಾಪಾರಿಗಳು (ಮೇಲೆ ಹೇಳಿದ ಕಾರಣಗಳಿಗಾಗಿ) ಸರಕಾರದ ಸಗಟು ಖರೀದಿ ಯೋಜನೆಯನ್ನೇ ವಿರೋಧಿಸುತ್ತಾರೆ. ಅವರ ದೃಷ್ಟಿಯಲ್ಲಿ ಇಂದು ಪುಸ್ತಕ ಪ್ರಕಟಣೆ ಮತ್ತು ಮಾರಾಟ ಒಂದು ಉದ್ಯೋಗ, ಮತ್ತು ಉದ್ಯೋಗಗಳಲ್ಲಿ ಸರಕಾರದ ಮಧ್ಯಪ್ರವೇಶ ಸಲ್ಲದು.

ಆದರೆ, ಈ ನಿಲುವನ್ನು ಎಲ್ಲಾ ಪ್ರಕಾಶಕರೂ ಒಪ್ಪುವುದಿಲ್ಲ. ಅವರ ದೃಷ್ಟಿಯಲ್ಲಿ, ಸರಕಾರದ ಸಗಟು ಖರೀದಿಯ ನೀತಿಯಿಂದಾಗಿಯೇ ಅವರು ಸಾಮಾನ್ಯ ಓದುಗರು ಕೊಳ್ಳದ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಅಥವಾ ಹೆಚ್ಚು ಬೆಲೆಯ (ಎಂದರೆ ೫೦೦ನ್ನೂ ಮೀರುವ) ಪುಸ್ತಕಗಳನ್ನು ಪ್ರಕಟಿಸಲು ಸಾಧ್ಯವಾಗುತ್ತದೆ. ಈ ಎರಡೂ ಪಕ್ಷಗಳು, ಪ್ರಾಯಃ, ಅರ್ಧ ಸತ್ಯವನ್ನು ಹೇಳುತ್ತಿವೆ. ಆದರೆ, ಇಷ್ಟಂತೂ ಸತ್ಯ: **ಸಗಟು ಖರೀದಿಯ ನೀತಿಯನ್ನು ಆಮೂಲಾಗ್ರವಾಗಿ ಪುನರ್ವಿಮರ್ಶಿಸುವುದು ಇಂದು ಅತ್ಯಗತ್ಯ.**

ಪಠ್ಯಪುಸ್ತಗಳನ್ನು ಮಾರದ ಇಂದಿನ ಪುಸ್ತಕ ವ್ಯಾಪಾರಿಯನ್ನು ಕಾಡುವ ಮತ್ತೊಂದು ಸಂಗತಿಯೆಂದರೆ, ವಿವಿಗಳು ಮತ್ತು ಅನುದಾನಿತ ಸಂಸ್ಥೆಗಳು ತಮ್ಮ ಪ್ರಕಟಣೆಗಳನ್ನು ಆರು ತಿಂಗಳು-ಒಂದು ವರ್ಷದ ನಂತರ ರಿಯಾಯಿತಿ ಬೆಲೆಗೆ ಮಾರುವುದು. ಇದು ಗೊತ್ತಿರುವ ಹೆಚ್ಚಿನ ಓದುಗರು ಪುಸ್ತಕ ಪ್ರಕಟವಾದ ಕೂಡಲೇ ಅದನ್ನು ಕೊಳ್ಳುವುದೇ ಇಲ್ಲ -ಅದು ರಿಯಾಯಿತಿ ಬೆಲೆಗೆ ಸಿಗುವ ವರೆಗೆ ಕಾಯುತ್ತಾರೆ. ಪ್ರಾಮಾಣಿಕ ಪುಸ್ತಕ ವ್ಯಾಪಾರಿ ಕೇಳುವ ಪ್ರಶ್ನೆಯಿದು: **ರಿಯಾಯಿತಿ ಬೆಲೆಗೆ ಮೊದಲೇ ಪುಸ್ತಕಗಳನ್ನು ಏಕೆ ಮಾರಬಾರದು? ಒಂದು ಪುಸ್ತಕಕ್ಕೆ ಮೊದಲು ೨೦೦ ರೂ. ಬೆಲೆ ಇಟ್ಟು ಆರು ತಿಂಗಳ ನಂತರ ಅದನ್ನು ೧೨೦ಕ್ಕೆ ಇಳಿಸುವ ಕಾರಣವಾದರೂ ಏನು?**

ಇ) **ಅಸಹನೆಯ ವಾತಾವರಣ:** ಲೇಖಕನಿಗೆ ಸಂಪೂರ್ಣ ವೈಚಾರಿಕ ಸ್ವಾತಂತ್ರ್ಯವನ್ನು ಭಾರತದ ಸಂವಿಧಾನವೂ ಸೇರಿದಂತೆ ಯಾವ ಆಧುನಿಕ ರಾಷ್ಟ್ರದ ಸಂವಿಧಾನವೂ ಕೊಟ್ಟಿಲ್ಲ; ಆ ಸ್ವಾತಂತ್ರ್ಯದ ಮೇಲೆ ಅನೇಕ ಮಿತಿಗಳನ್ನು ಹೇರಿವೆ. ಆದರೆ, ಕರ್ನಾಟಕದಲ್ಲಿ (ಪ್ರಾಯಃ ಇಡೀ ಭಾರತದಲ್ಲಿ) ಕಳೆದೆರಡು-ಮೂರು ದಶಕಗಳಲ್ಲಿ ಈ ವೈಚಾರಿಕ ಸ್ವಾತಂತ್ರ್ಯವು ಇನ್ನೂ ಮೊಟಕುಗೊಳ್ಳುತ್ತಿದ್ದು, ಭಿನ್ನಾಭಿಪ್ರಾಯಗಳನ್ನು ಕುರಿತು ಒಂದು ಬಗೆಯ ತೀವ್ರ ಅಸಹನೆಯ ವಾತಾವರಣ ನಿರ್ಮಾಣವಾಗುತ್ತಿದೆಯೆಂದು ತೋರುತ್ತದೆ.

ಈ ಮೇಲಿನ ಹೇಳಿಕೆಯ ಸಮರ್ಥನೆಗಾಗಿ ಕಳೆದೆರಡು ದಶಕಗಳಲ್ಲಾದ ಕೆಲವು ಸಂಗತಿಗಳನ್ನು ಗಮನಿಸಬಹುದು: ಗುಲಬರ್ಗಾ ವಿವಿಯ ಬಿ. ಕಾಮ್. ತರಗತಿಗೆ ಪಠ್ಯಪುಸ್ತಕವಾಗಿ ನಿಯುಕ್ತಗೊಂಡಿದ್ದ **ಶೃಂಗಾರ ತರಂಗಿಣಿ** (೧೯೯೩-೯೪; ಇದು ಕನಕದಾಸರ **ಮೋಹನತರಂಗಿಣಿ**ಯಿಂದ ಆಯ್ದ ಭಾಗಗಳ ಸಂಕಲನ); ಅವಿಭಜಿತ ದ. ಕ. ಜಿಲ್ಲೆಯ ಪ್ರಾಥಮಿಕ ತರಗತಿಗಳಿಗೆ ಪಠ್ಯವಾಗಿ ನಿಯುಕ್ತಗೊಂಡಿದ್ದ ಶಿವರಾಮ ಕಾರಂತರ **ಓದುವ ಆಟ-೧-೭** (೧೯೯೫-೯೬), ಮತ್ತು ಉದ್ಯಾವರ ಮಾಧವಾಚಾರ್ಯರ ಕಥಾಸಂಕಲನ (೧೯೯೬); ಎಚ್. ಎಸ್. ಶಿವಪ್ರಕಾಶರ ನಾಟಕ **ಮಹಾಚೈತ್ರ**; ಕಲಬುರ್ಗಿಯವರ **ಮಾರ್ಗ** ಸಂಪುಟಗಳು; ಪಿ.ವಿ. ನಾರಾಯಣ ಅವರ **ಧರ್ಮಕಾರಣ**; ಬಂಜಗೆರೆಯವರ **ಆನುದೇವಾ ಹೊರಗಿನವನು** – ಇತ್ಯಾದಿ ಕೃತಿಗಳು ಒಂದಲ್ಲಾ ಒಂದು ಪ್ರಬಲ ಸಮುದಾಯದಿಂದ ವಿರೋಧವನ್ನು ೯೦ರ ದಶಕದಲ್ಲಿ ಎದುರಿಸಿವೆ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ಆ ಕೃತಿಗಳು ಸಾರ್ವಜನಿಕ ಪ್ರತಿಭಟನೆಯ ಎದುರು ಸೋತಿವೆ.

ಕಳೆದೆರಡು ದಶಕಗಳಲ್ಲಿ ಜಾತಿ-ಉಪಜಾತಿಗಳ ನೆಲೆಯಲ್ಲಿ ಸಂಘಟಿತವಾಗುತ್ತಾ ಬಂದ ಸಮುದಾಯಗಳು ತಮ್ಮ ಆತ್ಮಪ್ರತ್ಯಯವನ್ನು ಒಂದು ಅತಿಗೆ ಒಯ್ದು, ಇತರ ಎಲ್ಲಾ ಜಾತಿ-ಉಪಜಾತಿಗಳ ಸಮುದಾಯಗಳನ್ನೂ 'ಅನ್ಯ'ರಂತೆ ಕಾಣತೊಡಗಿದುದು ಇಂತಹ ಅಸಹನೆಗೆ ಒಂದು ಮುಖ್ಯ ಕಾರಣವೆಂದು ಹೇಳಬಹುದು. ಇಂತಹ ಸಂಘಟಿತ ಸಮುದಾಯಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ ರಾಜಕೀಯ ಪಕ್ಷಗಳ ಪಾತ್ರವೂ ಕಮ್ಮಿಯೇನಲ್ಲ.

ಈ ಸಂದರ್ಭದಲ್ಲಿ, ಪತ್ರಿಕೆಗಳೂ ತಮ್ಮ ಜವಾಬ್ದಾರಿಯನ್ನು ಹೇಗೆ ಮರೆಯುತ್ತಿವೆ ಎಂಬುದನ್ನು ಗಮನಿಸಬೇಕು. ಭೈರಪ್ಪನವರ **ಆವರಣ** ಕಾದಂಬರಿಗೆ ಕೆಲವು ಪತ್ರಿಕೆಗಳು ಕೊಟ್ಟ ಅಗಾಧ ಪ್ರಚಾರ, ಮತ್ತು ಆ ಕೃತಿಯ / ಕೃತಿಕಾರನ ಬಗ್ಗೆ ಅನಂತಮೂರ್ತಿಯವರು ಒಂದು ಸಭೆಯಲ್ಲಿ ಮಾಡಿದ ಟೀಕೆಯನ್ನು ಆಧರಿಸಿ, ಅದರ ವಿರುದ್ಧ ಒಂದು ಪತ್ರಿಕೆ ವಾಚಕರ ಅಭಿಪ್ರಾಯವನ್ನು ಮೊಬೈಲ್ ಮೂಲಕ ಆಹ್ವಾನಿಸಿ, ಇಡೀ ಒಂದು ಪುಟವನ್ನು ಅನಂತಮೂರ್ತಿಯವರ ತೇಜೋವಧೆಗೆ ಉಪಯೋಗಿಸಿಕೊಂಡುದು – ಇವೆಲ್ಲವನ್ನೂ ನೋಡಿದಾಗ ಭಿನ್ನಾಭಿಪ್ರಾಯಗಳನ್ನು ಕುರಿತ ಅಸಹನೆ ದಿನೇ ದಿನೇ ಎಷ್ಟು ತೀವ್ರವಾಗುತ್ತಿದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಉಸಿರುಗಟ್ಟಿಸುವ ಇಂತಹ ವಾತಾವರಣದಲ್ಲಿ ಯಾವ ಬಗೆಯ ಮೌಲಿಕ ಸಂಶೋಧನೆ-ಚಿಂತನೆ ಸಾಧ್ಯ?

ಈ ಬಗೆಯ 'ಮೊಬೈಲ್ ಸಂಸ್ಕೃತಿ'ಯ ಹಾಗೂ ತೀವ್ರ ಅಸಹನೆಯ ಇನ್ನೂ ಅನೇಕ ನಿದರ್ಶನಗಳನ್ನು ಕೊಡಬಹುದು. ಆದರೆ, ಒಟ್ಟಾರೆಯಾಗಿ ಹೇಳಬೇಕಾದರೆ ಪ್ರಕಾಶಕ-ಪುಸ್ತಕ ವ್ಯಾಪಾರಿ-ಪತ್ರಿಕೆಗಳು-ಓದುಗರು – ಇವರೆಲ್ಲರನ್ನೂ ಒಳಗೊಂಡ ಕನ್ನಡ ಸಾಹಿತ್ಯದ ಹೊರಮೈ ಅಷ್ಟೇನೂ ಆರೋಗ್ಯಕರವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಕನ್ನಡದಲ್ಲಿ ಗಣಕಯಂತ್ರ ಮತ್ತು ಅಂತರ್‌ಜಾಲದ ಉಪಯೋಗ :

ಗಣಕಯಂತ್ರಗಳಲ್ಲಿ ಕನ್ನಡದ ಉಪಯೋಗ ಕಳೆದ ಶತಮಾನದ ೮೦ರ ದಶಕದಲ್ಲೇ ಪ್ರಾರಂಭವಾದರೂ, ಇಂದು ಉಪಯೋಗಿಸಲ್ಪಡುತ್ತಿರುವ ಕನ್ನಡದ ಮುಖ್ಯ ತಂತ್ರಾಂಶಗಳಾದ 'ಬರಹ,' 'ನುಡಿ,' 'ಪ್ರಕಾಶಕ್' ಇತ್ಯಾದಿ ೯೦ರ ದಶಕದಲ್ಲಿ ಸೃಜಿಸಲ್ಪಟ್ಟುವು. (ಒಂದು ತಂತ್ರಾಂಶದಿಂದ ಮತ್ತೊಂದಕ್ಕೆ ಬದಲಾಯಿಸಲು ಸಾಧ್ಯವಾಗುವಂತೆ ಮಾಡುವ 'ಕುವೆಂಪು ತಂತ್ರಾಂಶ' ೨೦೦೬ರಲ್ಲಿ ಕನ್ನಡ ವಿ. ವಿ. ಯಿಂದ ಸೃಜಿಸಲ್ಪಟ್ಟಿತು.) ಕನ್ನಡದಲ್ಲಿ ಅಂತರ್‌ಜಾಲದ ಉಪಯೋಗ ೧೯೯೬ರಲ್ಲಿ, ಡಾ. ಪವನಜ ಪ್ರಾರಂಭಿಸಿದ **ವಿಶ್ವಕನ್ನಡ** ಪತ್ರಿಕೆಯ ಮೂಲಕ, ಎಂದು ಕಾಣುತ್ತದೆ. ಕಳೆದೈದು ವರ್ಷಗಳಿಂದ ಪತ್ರಿಕೋದ್ಯಮ, ಮುದ್ರಣ ಮತ್ತು ಪ್ರಕಾಶನ, ಶಿಕ್ಷಣ, ಮನರಂಜನೆ ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿ ಕನ್ನಡದಲ್ಲಿ ಅಂತರ್‌ಜಾಲದ ಉಪಯೋಗ ಎಷ್ಟು ವ್ಯಾಪಕವಾಗಿ ಆಗುತ್ತಿದೆಯೆಂಬುದನ್ನು ಗ್ರಹಿಸಲು ಈ ಕೆಲವು ಅಂಕಿ-ಅಂಶಗಳನ್ನು ಗಮನಿಸಬಹುದು:

(ಅ) **ಪತ್ರಿಕೋದ್ಯಮ:** 'ಪ್ರಜಾವಾಣಿ,' 'ಉದಯವಾಣಿ,' ಇತ್ಯಾದಿ ಕನ್ನಡದ ಎಲ್ಲಾ ಪ್ರಮುಖ ಪತ್ರಿಕೆಗಳೂ ಸೇರಿದಂತೆ ಒಟ್ಟು **ಒಂಭತ್ತು** ಪತ್ರಿಕೆಗಳ ಮುದ್ರಿತ ಹಾಗೂ ಅಂತರ್‌ಜಾಲ ಆವೃತ್ತಿಗಳು;

ಕೇವಲ ಅಂತರ್‌ಜಾಲದಲ್ಲಿ ಮಾತ್ರ ದೊರಕುವ 'ವಿಶ್ವ ಕನ್ನಡ,' 'ಸಿಫೀ.ಕಾಮ್' ಇತ್ಯಾದಿ 'ಇ-ಪತ್ರಿಕೆ'ಗಳು;

(ಆ) **ನಿಯತಕಾಲಿಕೆಗಳು:** 'ತರಂಗ,' 'ಲಂಕೇಶ ಪತ್ರಿಕೆ,' 'ಮಯೂರ' ಇತ್ಯಾದಿ ಅಂತರ್‌ಜಾಲದಲ್ಲಿ ದೊರಕುವ **ಹದಿನಾರು** ನಿಯತಕಾಲಿಕೆಗಳು;

(ಇ) **ತಾಣಗಳು ('ವೆಬ್‌ಸೈಟ್ಸ್'):** ನಿಖರವಾಗಿ ಹೇಳುವುದು ಅಸಾಧ್ಯವಾದರೂ, ಸುಮಾರು **೪೫** ತಾಣಗಳು ಮತ್ತು **೪೯** 'ಬ್ಲಾಗ್'ಗಳು;

(ಈ) **ಕನ್ನಡ ವಿಶ್ವಕೋಶ ('ವಿಕಿಪಿಡಿಯ'):** ಎಚ್. ಪಿ. ನಾಡಿಗ್ ಮತ್ತು ಅವರ ಗೆಳೆಯರು ಸಂಪಾದಿಸುತ್ತಿರುವ ಅಂತರ್‌ಜಾಲ ವಿಶ್ವಕೋಶ; ಇದುವರೆಗೆ ಇದರಲ್ಲಿ ಸುಮಾರು ೫೦೦೦ ಲೇಖನಗಳಿವೆ;

(ಉ) **ಆಕರ ಗ್ರಂಥಗಳು :** ನಿಘಂಟುಗಳು, ಪದಕೋಶಗಳು ಮತ್ತು ಪಾರಿಭಾಷಿಕ ಪದಗಳು, ಗಾದೆಗಳು, ಒಗಟುಗಳು, ಪಂಚಾಂಗ, ಇತ್ಯಾದಿಗಳಿರುವ **೩೬** ತಾಣಗಳು;

(ಊ) **ಇ-ಪುಸ್ತಕಗಳು:** ಈ ಭಾಗದಲ್ಲಿ ಇಲ್ಲಿಯವರೆಗೆ ಅಷ್ಟೇನೂ ಕೆಲಸವಾಗಿರುವಂತೆ ಕಾಣುವುದಿಲ್ಲ; ಸದ್ಯ ದೊರೆಯುವ ಪುಸ್ತಕಗಳೆಂದರೆ "ಶ್ರೀ ರಾಮಾಯಣ ನಿತ್ಯ ಚಿಂತನ." "ಪ್ರಾಯಶ್ಚಿತ್ತ ವಿಧಿ" ಇತ್ಯಾದಿ ೨೪ ಧಾರ್ಮಿಕ ಉದ್ದೇಶದ ಗ್ರಂಥಗಳು ದೊರೆಯುತ್ತವೆ. (ಕೆಲ ವರ್ಷಗಳ ಹಿಂದೆ, ಭೈರಪ್ಪನವರ ಕಾದಂಬರಿಯೊಂದನ್ನು ಇಡಿಯಾಗಿ ಅಂತರ್‌ಜಾಲಕ್ಕೆ ಅಳವಡಿಸಲಾಗಿದೆಯೆಂದು ಪತ್ರಿಕೆಗಳಲ್ಲಿ ಓದಿದ್ದೆ; ಆದರೆ ಆ ತಾಣವನ್ನು ನಾನು ನೋಡಿಲ್ಲ.)

ಈ ದಿಕ್ಕಿನಲ್ಲಿ, ಸುವರ್ಣ ಕರ್ನಾಟಕ ವರ್ಷದಲ್ಲಿ ಆಗಿರುವ ಒಂದು ಶ್ಲಾಘನೀಯ

ಕಾರ್ಯವೆಂದರೆ "ಅಂತರ್‌ಜಾಲದ ವಿವಿಧ ಕನ್ನಡ ತಾಣಗಳ ಮಾಹಿತಿಯನ್ನು ಒಗ್ಗೂಡಿಸಿ, ವರ್ಗೀಕರಿಸಿ, ಕೊಂಡಿಗಳನ್ನು ಕಲ್ಪಿಸಿ... ಸುಮಾರು ೫೦ ಲಕ್ಷ ಪುಟಗಳಷ್ಟು ಕನ್ನಡ ಮಾಹಿತಿಯು ಒಂದೇ ಕಡೆ ಲಭ್ಯವಾಗುವಂತೆ" 'ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆ' ಸೃಜಿಸಿರುವ "ಸುವರ್ಣ ಕರ್ನಾಟಕ ಕನ್ನಡ ಅಂತರ್‌ಜಾಲ ವಾಹಿನಿ." (www.karnatakapubliclibrary.gov.in — ಈ ತಾಣಕ್ಕೆ ಹೋದರೆ ಈ ವಾಹಿನಿ ಸಿಗುತ್ತದೆ.)

ಒಟ್ಟಾಗಿ ಇವೆಲ್ಲವನ್ನೂ ಪರಿಗಣಿಸಿದರೆ, ಕನ್ನಡದಲ್ಲಿ ಅಂತರ್‌ಜಾಲದ ಉಪಯೋಗ ಸಾಕಷ್ಟು ಆಗುತ್ತಿದೆ ಎಂಬುದು ಸ್ಪಷ್ಟ. ನಿಜ; ಸರಕಾರದ ಗ್ರಂಥಾಲಯ ಇಲಾಖೆ ಕೈಗೆತ್ತಿಕೊಂಡಿರುವ ಒಂದು ಲಕ್ಷ ಕನ್ನಡ ಗ್ರಂಥಗಳನ್ನು ಡಿಜಿಟೈಸ್ ಮಾಡಿ ಅಂತರ್‌ಜಾಲಕ್ಕೆ ಅಳವಡಿಸುವ ಕೆಲಸ ನಿರೀಕ್ಷಿಸಿದಷ್ಟು ವೇಗದಲ್ಲಿ ಆಗುತ್ತಿಲ್ಲ; ಈಗಾಗಲೇ ಡಿಜಿಟೈಸ್ ಮಾಡಿರುವ ಪುಸ್ತಕಗಳನ್ನೂ ಅಂತರ್‌ಜಾಲಕ್ಕೆ ಅಳವಡಿಸಿಲ್ಲ; ಪಂಪನಿಂದ ಇಂದಿನ ವರೆಗಿನ 'ಸಮಗ್ರ ಗ್ರಂಥ ಸೂಚಿ' ಎಲ್ಲಿಯೂ ದೊರಕುವುದಿಲ್ಲ;... ಇಂತಹ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. ಆದರೆ, ಅಂತರ್‌ಜಾಲದ ಸಾಧ್ಯತೆಗಳ ಅರಿವು ಸರಕಾರಕ್ಕೆ ಮತ್ತು ಕನ್ನಡ ಶಿಕ್ಷಿತ ಸಮಾಜಕ್ಕೆ ಇದೆ ಎನ್ನುವುದು ಸಂತೋಷದ ಸಂಗತಿ.

ಈಗ, ಕನ್ನಡ ಅಂತರ್‌ಜಾಲವನ್ನು ವಿಮರ್ಶಾತ್ಮಕವಾಗಿ ನೋಡೋಣ:

ಅ) ಕನ್ನಡ ಅಂತರ್‌ಜಾಲದ ತಾಣಗಳು ಮತ್ತು ಬ್ಲಾಗುಗಳು : ಈ ತಾಣಗಳ ಮತ್ತು ಬ್ಲಾಗುಗಳ ಉದ್ದೇಶಗಳು ಭಿನ್ನ ಭಿನ್ನವಾಗಿವೆ; ಕೆಲವು ಹಾಸ್ಯಕ್ಕೇ ಮೀಸಲಾಗಿದ್ದರೆ ಮತ್ತೆ ಕೆಲವು ಕ್ರೀಡೆಗೆ / ಹೊಸ ಪಾಕಕ್ಕೆ / ಹಾಡುಗಳಿಗೆ ಇತ್ಯಾದಿ ಒಂದು ಕ್ಷೇತ್ರಕ್ಕೆ ಲಕ್ಷ್ಯ ಕೊಡುತ್ತವೆ. ಆದರೆ, ಹೆಚ್ಚಿನ ತಾಣಗಳು / ಬ್ಲಾಗುಗಳು ಭಿನ್ನ ಅಭಿರುಚಿಗಳಿಗೆ ಸ್ಪಂದಿಸಲು ಪ್ರಯತ್ನಿಸುತ್ತವೆ: ಆದುದರಿಂದ ಅವು ಸುದ್ದಿ–ಸಮಾಚಾರ, ಇತಿಹಾಸ, ಕಥೆ–ಕಾವ್ಯ, ವಿಮರ್ಶೆ, ಹರಟೆ, ಇತ್ಯಾದಿ ವಿಷಯ ವೈವಿಧ್ಯತೆಯನ್ನು ದರ್ಶಿಸುತ್ತವೆ.

ತಾತ್ವಿಕ ನೆಲೆಯಲ್ಲಿ, ಅಂತರ್‌ಜಾಲ ತಾಣಗಳು ಹಾಗೂ ಬ್ಲಾಗುಗಳೆಂದರೆ **'ಶ್ರೀ ಸಾಮಾನ್ಯನನ್ನು ಸಬಲೀಕರಿಸುವ'** ಮಾರ್ಗಗಳು; ಅವು ವ್ಯಕ್ತಿಯೊಬ್ಬನಿಗೆ/ಳಿಗೆ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಡುತ್ತವೆ. ಅಲ್ಪ–ಸಂಖ್ಯಾತ ಭಾಷೆಗಳ ಸಮುದಾಯ ಗಳಿಗಂತೂ ಇವೊಂದು ವರದಾನ; ಪ್ರಕಾಶಕರ ಗಮನ ಸೆಳೆಯಲು ವಿಫಲರಾದ ಲೇಖಕರು ತಮ್ಮ ಸೃಜನಶೀಲತೆಯನ್ನು ಅಂತರ್‌ಜಾಲದಲ್ಲಿ ದರ್ಶಿಸಬಹುದು.

ಇತ್ತೀಚೆಗೆ ಕರ್ನಾಟಕದಲ್ಲಿಯೇ ಸಂಭವಿಸಿದ ಘಟನೆಯೊಂದು ಅಂತರ್‌ಜಾಲ ತಾಣಗಳ/ ಬ್ಲಾಗುಗಳ ಅಸಾಧಾರಣ ಶಕ್ತಿಯನ್ನು ದರ್ಶಿಸುತ್ತದೆ. ಅಧಿಕಾರಿಗಳ (ಆರೋಪಿತ) ಸ್ವಾರ್ಥ– ದುರಾಡಳಿತವನ್ನು ಬಯಲಿಗೆಳೆಯಲು ಕಾಲಕಾಲಕ್ಕೆ ವಿಜಯಕುಮಾರ್, ಐ.ಎ.ಎಸ್. ಅವರು ಪ್ರಯತ್ನಿಸಿ ವಿಫಲರಾಗಿದ್ದರು. ಇವರ ಆರೋಪಗಳನ್ನು ಪರಾಮರ್ಶಿ ಸುವ ಗೋಜಿಗೇ ಹೋಗದೆ, ಮೇಲಿನ ಅಧಿಕಾರಿಗಳು ಅವರಿಗೇ ತೊಂದರೆ ಕೊಡುತ್ತಾ ಬಂದರು: ಒಂದು ವರ್ಷ, ಕೇವಲ ಒಂಭತ್ತು ತಿಂಗಳುಗಳ ಅವಧಿಯಲ್ಲಿ ಅವರಿಗೆ ಏಳು ಬಾರಿ ವರ್ಗವಾಯಿತು. ಕೊನೆಗೆ, ರೋಸಿ ಹೋದ ಅವರ ಪತ್ನಿ (ಜಯಶ್ರೀ) ತಮ್ಮದೇ ಒಂದು ತಾಣವನ್ನು (ಇಂಗ್ಲೀಷ್‌ನಲ್ಲಿ) ಸೃಷ್ಟಿಸಿ, ಅದರ ಮೂಲಕ ತಮ್ಮ ಕುಟುಂಬಕ್ಕೆ ಆಗುತ್ತಿದ್ದ ಓಂಸೆಯನ್ನು ಜನರ ಮುಂದಿಟ್ಟರು ಮತ್ತು ಆ ಮೂಲಕ ಅಸಂಖ್ಯಾತ ಓದುಗರ

ಸಹಾನುಭೂತಿಯನ್ನು ಪಡೆದರು. (ಈ ತಾಣದ ವಿರುದ್ಧ ಸರಕಾರ ನ್ಯಾಯಾಲಯಕ್ಕೆ ಹೋದರೂ "ಗಂಡನ ಸಹಾಯವಿಲ್ಲದೆಯೂ ಅವನ ಪತ್ನಿ ಸ್ವತಂತ್ರವಾಗಿ ಒಂದು ತಾಣವನ್ನು ನಡೆಸಬಲ್ಲಳು" ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗ ೧೫/೬/೨೦೦೭ರಂದು ತೀರ್ಪು ಕೊಟ್ಟಿತು.) ಇಂತಹ ನಿದರ್ಶನಗಳು ಇತರ ರಾಜ್ಯಗಳಲ್ಲಿಯೂ ದೊರಕುತ್ತವೆ (ಉದಾ. ಮಧ್ಯಪ್ರದೇಶ ಸರಕಾರದ ಮುಖ್ಯ ಕಾರ್ಯದರ್ಶಿ ಅರೋರಾ ಪ್ರಸಂಗ).

ಆದರೆ, ದುರದೃಷ್ಟವಶಾತ್, ಇಂತಹ ಉಪಯುಕ್ತ ಕಾರ್ಯಗಳೇ ಯಾವಾಗಲೂ ತಾಣಗಳಿಂದ /ಬ್ಲಾಗುಗಳಿಂದ ಆಗುತ್ತದೆಂದಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಇವುಗಳ ದುರುಪಯೋಗವಾಗುವುದೇ ಜಾಸ್ತಿ. ಇಂಗ್ಲೀಷ್ ತಾಣಗಳಿಗೆ ಹೋದರೆ, ಮತೀಯ/ ಜನಾಂಗಿಕ ದ್ವೇಷವನ್ನು ಬೆಳೆಸುವಂತಹ, ಅಥವಾ ಕಾಮೋತ್ತೇಜನಕ್ಕೇ ಮೀಸಲಾಗಿರುವ ನೂರಾರು ತಾಣಗಳು ಸಿಗುತ್ತವೆ. ಕನ್ನಡದಲ್ಲಿ, ಅಶ್ಲೀಲ ತಾಣಗಳು ಅಷ್ಟಾಗಿ ಇಲ್ಲವಾದರೂ ತಮಿಳರನ್ನು / ಮಹಾರಾಷ್ಟ್ರದವರನ್ನು ನಿಕೃಷ್ಟವಾಗಿ ಚಿತ್ರಿಸುವ, ಕರ್ನಾಟಕದ ಎಲ್ಲಾ ಕಷ್ಟಗಳಿಗೂ ಇತರರನ್ನು ಹೊಣೆಯಾಗಿಸುವ ಒಂದೆರಡು ತಾಣಗಳಿವೆ. ಆದರೆ, ಹೆಚ್ಚಿನ ತಾಣಗಳು / ಬ್ಲಾಗುಗಳು ಓದುಗರಿಗೆ ಸಾಹಿತ್ಯಕ-ರಾಜಕೀಯ ಸಮಾಚಾರವನ್ನು ಹಾಗೂ ಬಹುಮುಖೀ ಮನರಂಜನೆಯನ್ನು ಕೊಡಲು ಪ್ರಯತ್ನಿಸುತ್ತವೆ ಎಂಬುದು ಸಮಾಧಾನಕರ ಸಂಗತಿ.

ಅಂತರ್‌ಜಾಲ ತಾಣಗಳ / ಬ್ಲಾಗುಗಳ ಮೂಲಭೂತ ಮಿತಿಗಳೆಂದರೆ ಎರಡು: ಅವುಗಳು ಸಾಧ್ಯವಾಗಿಸುವ **ಕೃತಿಚೌರ್ಯ** ಮತ್ತು ಅವುಗಳ **ಪ್ರಶ್ನಾರ್ಥಕ ವಿಶ್ವಸನೀಯತೆ**. ಯಾವ ಭಾಷೆಯ ತಾಣವೇ ಆಗಲಿ, ಅವುಗಳಲ್ಲಿ ವ್ಯಕ್ತಿಯೊಬ್ಬನು ಯಾವುದೇ ಮಾಹಿತಿ ಯನ್ನು ಕೊಡಬಹುದು; ಆ ಮಾಹಿತಿಯ ಸತ್ಯಾಸತ್ಯತೆಗಳನ್ನು ಮತ್ತು ಸ್ವೋಪಜ್ಞತೆಗಳನ್ನು ಪರೀಕ್ಷಿಸುವ, ಪ್ರಶ್ನಿಸುವ ಮಾರ್ಗವೇ ಇಲ್ಲ.

ಈ ಹೇಳಿಕೆ ಕನ್ನಡದ ತಾಣಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ: ಈ ಲೇಖನದ ಉದ್ದೇಶಕ್ಕಾಗಿ ಕನ್ನಡದ ಅನೇಕ ತಾಣಗಳನ್ನು ಪ್ರವೇಶಿಸಿದಂತೆ 'ಕನ್ನಡ ವಿಶ್ವಕೋಶ' ('ವಿಕಿಪಿಡಿಯ') ತಾಣವನ್ನೂ ತಲಪಿದೆ. ಯಾದೃಚ್ಛಿಕವಾಗಿ ತೆರೆದ ಒಂದು ಪುಟ ಮುದ್ದಣನ ಬಗ್ಗೆ ಇತ್ತು (ಇದೆ) ಮತ್ತು ಅದರಲ್ಲಿರುವ ಈ ವಾಕ್ಯವನ್ನು ನೋಡಿ: "'ಭವತಿ ಭಿಕ್ಷಾಂ ದೇಹಿ' ಎಂಬುದರ ಬಗ್ಗೆ ಪತ್ನಿ ಮನೋರಮೆಯೊಂದಿಗೆ ನಡೆಸಿದ ಸಲ್ಲಾಪದ ಚರ್ಚೆಯನ್ನು 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಕಾವ್ಯವನ್ನಾಗಿ ಮುದ್ದಣ ರಚಿಸಿದ್ದಾನೆ." "ಭವತಿ ಭಿಕ್ಷಾಂ ದೇಹಿ" ಎಂಬ 'ಸಪ್ತಾಕ್ಷರಿ ಮಂತ್ರ'ದ ವ್ಯಾಖ್ಯಾನ-ಅಥವಾ ಪ್ರಸ್ತಾಪ- ಮುದ್ದಣನ **ರಾಮಾಶ್ವಮೇಧ** ಕೃತಿಯ ಒಂದು ಭಾಗವಾಗಿ ಬರುತ್ತದೆ; ಅದೊಂದು ಸ್ವತಂತ್ರ ಕೃತಿಯಲ್ಲ. (ಕನ್ನಡ ವಿಕಿಪಿಡಿಯವನ್ನು ಖಾಸಗಿಯಾಗಿ ಅಪಾರ ಶ್ರಮದಿಂದ ಎಚ್.ಪಿ.ನಾಡಿಗ್ ಮತ್ತು ಗೆಳೆಯರು ಕಟ್ಟುತ್ತಿದ್ದಾರೆ ಮತ್ತು ಅವರ ಕನ್ನಡ ಪ್ರೇಮದ ಬಗ್ಗೆ ನನಗೆ ಅಪಾರ ಗೌರವವಿದೆ.)

ಇಂದಿನ ದಿನಗಳಲ್ಲಿ ಕನ್ನಡ ವಾಙ್ಮಯ ಪಡೆದುಕೊಳ್ಳುತ್ತಿರುವ ಮತ್ತೊಂದು ತಿರುವನ್ನು ಗಮನಿಸಿ ಈ ಲೇಖನವನ್ನು ಮುಗಿಸಬಹುದು. ಆ ತಿರುವೆಂದರೆ 'ಸಿಡಿ'ಗಳ ಉಪಯೋಗ. ಇಲ್ಲಿಯ ವರೆಗೂ ಅಕ್ಷರ ರೂಪದಲ್ಲಿದ್ದ ಕನ್ನಡ ಸಾಹಿತ್ಯ ಇತ್ತೀಚೆಗೆ ಸಿಡಿಗಳ ಮೂಲಕ ಶ್ರವಣ ಮಾಧ್ಯಮವಾಗಿಯೂ ಪರಿವರ್ತನೆಗೊಳ್ಳುತ್ತಿದೆ: ಉದಾ. ಪ್ರಸನ್ನ ಅವರು ತಮ್ಮ ಅನುವಾದವಾದ **ನೂರು ವರ್ಷಗಳ ಏಕಾಂತ** ಕಾದಂಬರಿಯ ಬಿಡುಗಡೆಯ ಕಾಲದಲ್ಲಿ ಪುಸ್ತಕದೊಡನೆ ಅದರ ಸಿಡಿಯನ್ನೂ ಕೊಟ್ಟರು; ಅದೇ ರೀತಿ, ಜಿ. ಎನ್. ಮೋಹನ್

ಅವರು ತಮ್ಮ ಕವನ ಸಂಕಲನ **ಪ್ರಶ್ನೆಯಿರುವುದು ಶೇಕ್ಸ್‌ಪಿಯರನಿಗೆ** ಪುಸ್ತಕದೊಡನೆ, ಅದರ "ಕೇಳು ಪುಸ್ತಕ"ವನ್ನೂ (ಎಂದರೆ ಆ ಕವನವಾಚನಗಳ ಸಿಡಿಯನ್ನು) ಕೊಟ್ಟರು. ಈಗೊಂದೆರಡು ವರ್ಷಗಳ ಕೆಳಗೆ, ಅಮೆರಿಕಾಕ್ಕೆ ಹೋದಾಗ ಲಕ್ಷ್ಮೀನಾರಾಯಣ ಭಟ್ಟರು ಇಡೀ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ತಮ್ಮ ಭಾಷಣದ ಮೂರು ಸಿಡಿಗಳನ್ನು ಮಾಡಿದ್ದರು. ವೆಂಕಟೇಶ ಮೂರ್ತಿಗಳು **ಚಕೋರಿಯಮ್ಮ** ಎಂಬ ಮಕ್ಕಳ ಗೀತೆಗಳ ಸಿಡಿ ಒಂದನ್ನು ಹೊರತಂದಿದ್ದಾರೆ.

ಇದೊಂದು ಬಗೆಯ ಆಧುನಿಕ ಮೌಖಿಕತೆ: ಹಿಂದೆ ಮೌಖಿಕ ಪರಂಪರೆ ಅಕ್ಷರಜ್ಞಾನವಿಲ್ಲದವರದಾಗಿದ್ದರೆ, ಇಂದು ಈ ಬಗೆಯ 'ನವ ಮೌಖಿಕತೆ' ಅತ್ಯುಚ್ಚ ಶಿಕ್ಷಣ ಪಡೆದ ಮತ್ತು (ಮನೆಯಲ್ಲಿ ಅಥವಾ ಕಾರುಗಳಲ್ಲಿ) ಉತ್ತಮ 'ಸೌಂಡ್ ಸಿಸ್ಟಮ್' ಇಟ್ಟುಕೊಂಡಿರುವವರದಾಗುತ್ತಿದೆ. ಮನೆಯಲ್ಲಿ – ಮುಖ್ಯವಾಗಿ ಒಂದೆರಡು ತಾಸು ಕಾರಿನಲ್ಲಿ ಕಾರ್ಯಕ್ಷೇತ್ರಕ್ಕೆ ಹೋಗುತ್ತಿರುವಾಗ, ದಾರಿಯಲ್ಲಿ – ಈ ಸಿಡಿಗಳನ್ನು ಕೇಳುತ್ತಾ ಹೋಗಬಹುದು. ಸಾಹಿತ್ಯದ ಈ ಮೌಖಿಕ ಆಯಾಮ ಮುಂದಿನ ದಿನಗಳಲ್ಲಿ ತುಂಬಾ ಬೆಳೆಯಬಹುದು ಎಂದು ಕಾಣುತ್ತದೆ. (ಅಮೆರಿಕಾದಲ್ಲಿ ಈಗ – ಅಲ್ಲಿಯ ನನ್ನ ಸ್ನೇಹಿತರು ತಿಳಿಸುವಂತೆ– ಕಾರಿನಲ್ಲಿ ಪ್ರವಾಸ ಮಾಡುವಾಗ ಕಥೆ–ಕಾದಂಬರಿಗಳನ್ನು **ಕೇಳುತ್ತಾ** ಹೋಗುವುದು ಅಲ್ಲಿ ಸಾಕಷ್ಟು ಜನಪ್ರಿಯವಾಗುತ್ತಿದೆ.)

ಕೊನೆಯದಾಗಿ. ಅಕ್ಷರ ಜ್ಞಾನವಾಗಲಿ ಗಣಕತಂತ್ರಜ್ಞಾನವಾಗಲಿ, **ಇವುಗಳ ಪ್ರಯೋಜನ ದೊರಕುವುದು ಸಮಾಜದ ಒಂದು ವರ್ಗಕ್ಕೇ ಹೊರತು ಎಲ್ಲಾ ವರ್ಗಗಳಿಗೂ ಅಲ್ಲ.** ಈ ಮೊದಲು ವಿವರಿಸಿದ ಗಣಕಯಂತ್ರದ ಮತ್ತು ಅಂತರ್‌ಜಾಲದ ಲಾಭವೆಲ್ಲವೂ ಗಣಕಯಂತ್ರಗಳನ್ನು ಕೊಳ್ಳುವ ಶಕ್ತಿಯಿರುವವರಿಗೆ ಮಾತ್ರ ಲಭಿಸುತ್ತದೆ; ಮತ್ತು ಇಲ್ಲಿಯೂ ಮೇಲ್ವರ್ಗದ, ನಗರೀಕೃತ ಮತ್ತು ಗ್ರಾಮೀಣ ವಿದ್ಯಾರ್ಥಿಗಳ / ಅಧ್ಯಾಪಕರ / ಸಾಮಾನ್ಯ ಜನರ ನಡುವಿನ ಕಂದರ ದೊಡ್ಡದಾಗುತ್ತಲೇ ಹೋಗುತ್ತದೆ.

ಈ ಕಂದಕವನ್ನು ಸ್ವಲ್ಪವಾದರೂ ಮುಚ್ಚಿ, ಎಲ್ಲರಿಗೂ ಅಂತರ್‌ಜಾಲದ ಸಮಾನ ಪ್ರಯೋಜನವನ್ನು ಕೊಡಲು ಇರುವ ಒಂದು ಮಾರ್ಗವೆಂದರೆ, ಸರಕಾರ ಪುಸ್ತಕಗಳ ಸಗಟು ಖರೀದಿಗೆ ವ್ಯಯಮಾಡುವ ಅಪಾರ ಹಣದ ಸ್ವಲ್ಪ ಭಾಗವನ್ನು 'ಉಚಿತ ಅಂತರ್‌ಜಾಲ ವ್ಯವಸ್ಥೆಯನ್ನು' ಸೃಷ್ಟಿಸಲು ಉಪಯೋಗಿಸುವುದು. ಪ್ರತಿಯೊಂದು ಹಳ್ಳಿಯ ಗ್ರಂಥಾಲಯ / ಪಂಚಾಯಿತಿಗಳಲ್ಲಿ ನಾಲ್ಕೈದು ಗಣಕಯಂತ್ರಗಳನ್ನು ಸ್ಥಾಪಿಸಿ (ಸೈಬರ್ ಕೆಫೆಗಳಂತೆ), ಅವುಗಳಿಗೆ ಅಂತರ್‌ಜಾಲ ಸಂಪರ್ಕವನ್ನು ಕಲ್ಪಿಸಿ, ಅದರ ಉಪಯೋಗವನ್ನು 'ಉಚಿತವಾಗಿ' ಎಲ್ಲರಿಗೂ ನೀಡುವುದು ಸರಕಾರಕ್ಕೆ ಕಷ್ಟವೇನಲ್ಲ. ಇದೇನೂ ಸಾಧ್ಯವಾಗದಂತಹ ಕನಸಲ್ಲ. (ಕೃಪೆ:'ಸುಧಾ' ಯುಗಾದಿ ವಿಶೇಷಾಂಕ, ೨೦೦೮)

✦ **ಡಾ. ಸಿ. ಎನ್. ರಾಮಚಂದ್ರನ್**, # ೧೦೦೨, ಶೋಭಾ ಟ್ಯೂಲಿಪ್,
೨೪ನೇ ಮೇನ್, ಜೆ. ಪಿ. ನಗರ ೬ನೇ ಹಂತ, ಬೆಂಗಳೂರು–೫೬೦ ೦೭೮ ✦

ಎರಡು ಕವಿತೆಗಳು

ನ. ಭ. ನೆಂಪು

೧. ಮಾ-ನಿಷಾದ

ಹಾಡುತಿತ್ತು ಕಾಡಿನೊಳಗೆ ಮತ್ತೆ ಮತ್ತೆ ಕೋಗಿಲೆ
ಕಲೆಗೆ ಜೀವ ಬಂದ ಹಾಗೆ ಅರಳಿತಂದು ಕಣಗಿಲೆ
ಚಿಗುರು ಚಿಮ್ಮಿ ಹೂವು ಮೊಳೆತು ಕಾಯಿ ಫಲಿತು ಬೆಳೆಯಿತು
ಪ್ರಕೃತಿಯಲ್ಲಿ ಕಾವ್ಯಗೋಷ್ಠಿ ನಿತ್ಯ ಹಬ್ಬವಾಯಿತು.
    ಕೊರಡು ಕೊನರುತಿತ್ತು ರಥವನೆಳೆವ ಮಿಳಿಗೆ ನೋವು
    ಹಸುರು ಕಾಡಿನೊಳಗೆಯೆಲ್ಲು ನಿಂತ ನೆಲದಿ ಕಾವು
    ನೆಲದ ತೀಟೆ, ರಸದ ಊಟೆ, ಮೊನಚು ಬಳ್ಳಿ ಚೆಲ್ಲಿ
    ಕೆಂಪು ರಕ್ತದೋಕುಳಿಯೆ ಹರಿಯಿತಂದು ಅಲ್ಲಿ
'ಅಯ್ಯೋ ಬೇಡಾ, ಕೊಲ್ಲಬೇಡ' ಎನುವ ದನಿಗೆ ಹೆದರಿ
ನಿಂತಿತೊಂದು ಮೃಗದ ರೂಪ ಅನಿತು ದೂರ ಚದರಿ
'ಏನಿದೇನು, ಯಾರು, ಯಾಕೆ?' ಎನುವ ಮೊದಲೆ ಸ್ವಸ್ಥ
ಮೌನ ಕಾಡಿನೊಳಗೆ ಅಂದು ಎಲ್ಲ ಅಸ್ತವ್ಯಸ್ತ...
    ನಿತ್ಯ ಮನದ ಸ್ವಾಸ್ಥ್ಯ ಕೆಡಿಸಿ ವಿಕೃತಿ ಮೆರೆಯಬೇಕೆ?
    ಕವಿಯ ಭಾವ, ಮನದ ನೋವ ಹಂಚುತಿರುವೆ ಸಾಕೆ?
    ದ್ವೇಷ-ಕ್ಲೇಷವೆಷ್ಟೆಯಿರಲಿ ಎಲ್ಲ ಮರೆತ ಬದುಕು
    ಐಕ್ಯವೊಂದೆ ಮಂತ್ರವೆಂಬ ಛಲವು ಬರಲಿ ನಿಜಕು.

೨. ಕವಿತೆ

ಎಷ್ಟು ಹೊರಳಾಡಿದರು ಮೂಡಿಬರದಿಹ ಕವಿತೆ
    ಈಗ ತಲೆ ಹಾಯಿಸಿದೆ ಮನಸಿನೊಳಗೆ
ಸ್ರವಿಸುತಿಹವೊಳಸ್ರೋತ ಮಳೆಯಂತೆ ಜಿನುಗುತಿದೆ
    ಶಬ್ದಗಳ ರಸಸ್ಫುರಿತ ಮಿಂಚಿನೊಳಗೆ.
ಬಹುದಿನದ ಮನದಾಸೆ ಫಲಿಸಿದರೆ ದೊರೆವ ಸುಖ
    ತೋಡಿಕೊಳ್ಳದ ಸ್ಥಿತಿಗೆ ತಲುಪುತಿಹುದು
ಭಾವನೆಯ ಗರಿಗೆದರಿ ಗಗನದಲಿ ವಿಹರಿಸಲು
    ಕಾತರದಿ ಎದೆದೆರೆದು ಕಾಯುತಿಹುದು

ಮನಸಿನುದ್ವೇಗವನು ದೂರಗೊಳಿಸುತ ಬಂತು
    ಕವಿತೆ ಮೂಡಿತು ಮನದಿ ಹೂವನಿರಿಸಿ
ಬಾಳಿನಲಿ ಸ್ಥಿರತೆಯನು ಮೂಡಿಸಿತು, ಲಯವರಿತು
    ತಾಳ-ಲಯಗಳ ಹದಕೆ ಪದವ ಬೆರೆಸಿ.
ಕವಿತೆ ಬಾಳಿನ ಹಣತೆ, ಹರಿವ ನೀರಿನವೊರತೆ
    ಸ್ನೇಹ ಬೆಳೆಸುವ ಬೆಸುಗೆ ಭಾವದೊಸಗೆ
ಮುಗ್ಧತೆಯ ಪ್ರತಿರೂಪ, ಚಿಂತನೆಗೆ ಒರೆಗಲ್ಲು
    ಮಾನವತೆಯನು ಮೆರೆವ ನುಡಿಯ ತೊಡುಗೆ.

✦ **ನೆಂಪು ನರಸಿಂಹ ಭಟ್ಟ**
'ಸಂಹಿತಾ', ೩೨೮, ಅಚ್ಯುತನಗರ ೨ನೇಹಂತ, ಹೆರ್ಗ, ಪರ್ಕಳ-೫೭೬ ೧೨೩(ಉಡುಪಿ) ✦

ಬಸವರಾಜ ವಕ್ಕುಂದ

೨೪
ಯೋಗಿಯನು ಪ್ರೀತಿಸಿದರೆ ಪ್ರಣಯದಲಿ ಸುಖವಿಲ್ಲ
ದುಃಖವೇ ಗತಿ, ಯೋಗಿ ಯಾರೊಳಗು ಅನುರಾಗಿಯಲ್ಲ
ಸುಖವಿಲ್ಲ, ವಿಶ್ರಾಂತಿಯಿಲ್ಲ; ಹಗಲಿರುಳು ನಿನ್ನ ಕಾಣುವ ತವಕ
ಜಗವೆಲ್ಲ ಅರಸಿದೆನು ಎಲ್ಲಿಯೂ ಕಾಣಲಿಲ್ಲ ಈ ಇಂಥ ಮುಖ
ಮೀರಾಳ ಪ್ರಭು ಯಾವಾಗ ನಿನ್ನ ಮಿಲನ
ಸುಖದ ಸೆಲೆ ನನಗೆ ಬರಿ ನಿನ್ನ ದರ್ಶನ

೨೫
ಜೋಗಿಯೊಂದಿಗೆ ಪ್ರೀತಿ ದುಃಖಕ್ಕೆ ಮೂಲ
ಚುಚ್ಚುವುದು ಹೃದಯವನು ವಿರಹಶೂಲ
ಕೂಡಿ ಮಾತಾಡಿ ಮರುಳು ಮಾಡಿ
ಕಡೆಗೆ ಎಲ್ಲಾ ಮರೆತು ಹೋಗುವನು ಓಡಿ
ಮಲ್ಲಿಗೆಯ ಕಿತ್ತಂತೆ ಪ್ರೀತಿಯನು ಕಿತ್ತೆ
ಓ ಮೀರಾಳ ಪ್ರಭು ಕಾಣದೆಲ್ಲಿ ಅವಿತೆ

೨೬
ಮರೆಯದಿರು ಪ್ರಿಯ ಇರು ನನ್ನ ಕಣ್ಣೆದುರು
ಕಣ್ಣೆದುರಿಗೇ ಇರು ನೀ ನನ್ನ ಮರೆಯದಿರು
ಮುಳುಗುತಿರುವೆನು ನಾನು ಭವಸಾಗರದಲ್ಲಿ
ರಕ್ಷಿಸೋ ಶ್ಯಾಮ ಮೊರೆಯಿಡುವೆ ನಿನ್ನಲ್ಲಿ
ರಾಣಾ ಕಳಿಸಿದ್ದ ವಿಷದ ಬಟ್ಟಲವ ಅಮೃತ ಮಾಡಿದ್ದಿ ಅಂದು
ಮೀರಾಳ ಪ್ರಭು ಗಿರಿಧರ ನಾಗರ ದೂರ ಸರಿಯದಿರು ಎಂದೆಂದು

೨೭
ನನ್ನ ಮೇಲೇಕಿಷ್ಟು ಸಿಟ್ಟು ಗಿರಿಧರಗೆ
ತಪ್ಪಿದ್ದರೆತ್ತಿ ತೋರಿಸಬಾರದೆ ಹೊರಗೆ
ಸದ್ಗುಣಸಾರನೆ ನನ್ನ ತಪ್ಪು ಗೊತ್ತಾಗಲಿ ನನಗೆ
ಪ್ರಭು ಸಕಲ ಜನ್ಮಗಳ ದಾಸಿ ನಾ ನಿನಗೆ
ಮೀರಾಳ ಪ್ರಭು ಗಿರಿಧರ ನಾಗರ
ನಿನ್ನದೆ ಪೂಜೆ ಜಪಗಳಲಿ ಸದಾ ನಾ ಜಾಗರ

೨೮
ಓ ಹರಿ, ಹರಿದೊಗೆ ನಿನ್ನ ಭಕ್ತರ ದುಃಖ ದುಮ್ಮಾನ
ಸೀರೆಯನು ಬೆಳೆಸಿ ನೀನುಳಿಸಿದಂತೆ ದ್ರೌಪದಿಯ ಮಾನ
ನರಸಿಂಹ ಅವತಾರ ತಾಳಿ ನಂಜಿದ ಭಕ್ತನ ಕಾದಿ

ಮುಳುಗುವ ಗಜರಾಜನ ಉಳಿಸಿ ಕಷ್ಟಗಳ ಕಿತ್ತೆಸೆದಿ
ಯುವರಾಜ ಗಿರಿಧರಗೆ ಹೇಳುವಳು ಮೀರಾ
ನನ್ನ ತೊಂದರೆಗಳನು ನೀಗಿಸೊ ಪೂರಾ

೨೯

ಸಖಿ, ಪ್ರಿಯನ ದಾರಿಯ ನೋಡಿ ಕೆಟ್ಟು ಹೋಯಿತು ನಿದ್ದೆ
ಸರಿದು ಹೋದ ಇಡೀ ರಾತ್ರಿ ಅವಗೆ ಕಾಯುತಲಿದ್ದೆ
ಗೆಳತಿಯರು ರಮಿಸಿ ಬುದ್ಧಿ ಹೇಳಿದರೂ ಒಪ್ಪಲಿಲ್ಲ ಮನಸು
ರಮಿಸಬೇಕಾದವನ ಕಾಣದೆ ವಿಶ್ರಾಂತಿ ನನಗಿಲ್ಲ ಇಲ್ಲ ಮುನಿಸು
ಸೊರಗಿ ವ್ಯಾಕುಲಳಾಗಿ ಕುಳಿತಿರುವೆ ನೊಂದು
ತುಟಿ ತನ್ನಷ್ಟಕ್ಕೆ ಬಡಬಡಿಸುತಿವೆ ಪ್ರಿಯ ಪ್ರಿಯ ಎಂದು
ಹೃದಯ ಕಬಳಿಸುವ ವಿರಹ ವೇದನೆ ಬಲ್ಲವರು ಯಾರು
ಬೇಡುವಂತಿದೆ ಹುಚ್ಚಿ ಮೀರಾ; ಜಾತಕ ಮೇಘ, ಮೀನು ನೀರು

೩೦

ಶ್ಯಾಮ ಮೋಡಗಳ ನೋಡಿ ನಾನತ್ತೆ ಶ್ಯಾಮನಿರುವನೆ ಅಲ್ಲಿ
ಆಕಾಶದಗಲ ಕರಿಹಳದಿ ಮೋಡ ಸುರಿದಾವು ನೀರೆ ನೀರು ಚೆಲ್ಲಿ
ಎತ್ತ ನೋಡಿದರತ್ತ ನೀರು, ನೀರಡಿಸಿದ ನೆಲವೆಲ್ಲ ಹಸಿರು
ನೀರಾಗಿ ತೊಯ್ದಿತೊ ನನ್ನ ದೇಶಾಂತರ ಹೋದ ಪ್ರಿಯಕರನ ಉಸಿರು
ಮೀರಾಳ ಪ್ರಭು ಅವಿನಾಶಿ ಹರಿಯ ರೂಪ ನೆನೆದು
ನಿಂತೆ ನಾನು ನಿಜವಾದ ಪ್ರೀತಿಯ ಸಮಾಗಮದ ನೀರಿನಲ್ಲಿ ನೆನೆದು
ಎದೆಯಲ್ಲಿ ಉಕ್ಕಿದೆ ಓ ಸಖಿ ಶ್ಯಾಮನ ಕೂಡುವ ಬಯಕೆ
ಶಾಂತಿ ಕದಡಿ ಒದ್ದಾಡುತಿರುವೆ ಅಗ್ನಿಯಾಗಿ ಸುಡುತಿದೆ ಅಗಲಿಕೆ
ಹಗಲಿರುಳು ಅವನ ದಾರಿಯನು ದಿಟ್ಟಿಸಿದ ಭಾರವಿದೆ ರೆಪ್ಪೆಯ ಮೇಲೆ
ಪ್ರಿಯತಮಃ ಎಂಬೊರಲು ಮುಚ್ಚಿಹಾಕಿದೆ ಜನರ ನಿಂದೆಯ ಬರದಂತೆ ಮೇಲೆ
ವಿರಹ ಸರ್ಪ ಕಚ್ಚಿ ಹೃದಯವನು ವಿಷವೇರಿದೆ ಅಲೆ ಅಲೆಯಾಗಿ ಮೈಗೆ
ಶ್ಯಾಮ ಮಿಲನದ ಬಯಕೆ ಉರಿಯುತಿದೆ ವಿರಹ ವ್ಯಾಕುಲಿತ ಮೀರಾಳ ಒಳಗೆ

೩೧

ಎದೆಯಲ್ಲಿ ಉಕ್ಕಿದೆ ಓ ಸಖಿ ಶ್ಯಾಮನ ಕೂಡುವ ಬಯಕೆ
ಶಾಂತಿ ಕದಡಿ ಒದ್ದಾಡುತಿರುವೆ ಅಗ್ನಿಯಾಗಿ ಸುಡುತಿದೆ ಅಗಲಿಕೆ
ಹಗಲಿರುಳು ಅವನ ದಾರಿಯನು ದಿಟ್ಟಿಸಿದ ಭಾರವಿದೆ ರೆಪ್ಪೆಯ ಮೇಲೆ
ಪ್ರಿಯತಮ ಎಂಬೊರಲು ಮುಚ್ಚಿ ಹಾಕಿದೆ ಜನರ ನಿಂದೆಯ ಬರದಂತೆ ಮೇಲೆ
ವಿರಹ ಸರ್ಪ ಕಚ್ಚಿ ಹೃದಯವನು ವಿಷವೇರಿದೆ ಅಲೆ ಅಲೆಯಾಗಿ ಮೈಗೆ
ಶ್ಯಾಮಮಿಲನದ ಬಯಕೆ ಉರಿಯುತಿದೆ ವಿರಹವ್ಯಾಕುಲಿತ ಮೀರಾಳ ಒಳಗೆ

೩೨

ನೀನಿಲ್ಲದ ಒಂದೊಂದು ಕ್ಷಣ ಯುಗವಾಗಿದೆ ನಲ್ಲ
ಪ್ರತಿಕ್ಷಣವು ಸುಡುತಿರಲು ವಿರಹಾಗ್ನಿ, ನನಗೆ ನಿದ್ದೆ ಇಲ್ಲ

ಪ್ರಿಯಕರ ನೀನಿರದೆ ಕತ್ತಲೆಯು ಹರಿಯುವುದು ಹೇಗೆ
ಅರಮನೆಯ ದೀಪಗಳು ಬೆಳಕು ನೀಡವು ನನಗೆ
ಹೂವು ಹಾಸಿಗೆ ಮುಳ್ಳಾಗಿ ರಾತ್ರಿಯಿಡೀ ಕಳೆದೆ ನಿದ್ರೆಯಿರದೆ
ಹೇಳುವುದು ಯಾರಿಗೆ? ಕೇಳುವರು ಯಾರು? ಸಂಜಿಕೆ ಯಾರಿಗಿದೆ?
ಪ್ರೇಮ ಸರ್ಪವು ಕಚ್ಚಿ ಸಾಯುತಿರುವೆ ಮೈತುಂಬ ಏರಿ ವಿಷದ ಅಲೆ
ಕಪ್ಪೆ ನವಿಲು ಚಾತಕ ಚೀರುತಿವೆ. ಹಾಡುತಿದೆ ಕೋಗಿಲೆ
ಮೋಡ ಗುಡುಗುಡಿಸಿ ಮಿಂಚು ಸಳ್ಳನೆ ಹರಿದಾಡಿದರೆ ನನಗೆ ನಡುಕ
ಎಲ್ಲಿಹನು ಜಗದಿ ಸುಖ ಕೊಡುವ ಪ್ರಿಯಕರ ಕಳೆದು ಹೃದಯದ ಮಿಡುಕ
ಮೀರಾಳ ಪ್ರಭು ಹರಿ ಅವಿನಾಶಿ
ಅವನ ಕಾಣಲು ಕಾಯುತಿವೆ ಕಣ್ಣು ಕಾತರಿಸಿ

✦ ಬಸವರಾಜ ವಕ್ಕುಂದ : # ೨೬೨, ಇಟಗಿಯವರ ಮನೆ,
೪ ನೆಯ ಕ್ರಾಸ್, ಚನ್ನಬಸವೇಶ್ವರನಗರ, ಧಾರವಾಡ – ೫೮೦ ೦೦೭ ✦

ಪುಸ್ತಕ ಪರಿಶೀಲನೆ

೧. ದೇಸಿ ನಗು : ಎಂ. ಎಸ್. ಮೂರ್ತಿ, ಅಭಿನವ ಪ್ರಕಾಶನ, ೧೭/೧೮-೨, ೧ನೇ ಮೇನ್, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೪೦, ಪ್ರ.ಮು. ೨೦೦೬, ಪು ೧೬೪, ರೂ. ೭೫/-

'ದೇಸಿ ನಗು' ಪ್ರಬಂಧ ಸಂಕಲನದಲ್ಲಿ ಕಾಣಿಸುವ ಮೂವತ್ತೊಂಬತ್ತು ಬರೆಹಗಳು ದೇಸೀ ಒನ್ನೆಲೆಯನ್ನು ಹೊತ್ತ ಅನುಭವದ ಪ್ರತಿಮೆಗಳು. 'ದೇಸಿ' ಎಂದಾಗ ಎಂ.ಎಸ್.ಮೂರ್ತಿಯವರು ಹಳ್ಳಿಯ ಜನಪದರ ಯಾ ಜನಪದದ ಯಾ ಜಾನಪದದ ಕುರಿತಾಗಿಯೇ ಬರೆದಿದ್ದಾರೆಂದರ್ಥವಲ್ಲ. ಜನಪದೀಯವಾದ ಶುದ್ಧ ಆಲೋಚನೆಗಳು, ಕಲ್ಮಶರಹಿತ ಚಿಂತನೆಗಳು, ಮುಗ್ಧತೆ-ಇತ್ಯಾದಿಗಳೆಲ್ಲವೂ 'ದೇಸಿ'ಯೊಳಗಡೆಗೆ ಸಲ್ಲಬಲ್ಲವುಗಳೆ.

ವೀಸೀಯವರಂಥ ಖ್ಯಾತ ಬರಹಗಾರರು, ಮುಗ್ಧರಾದಾಗ ಜೀರಿದ ಒಂದು ನಗೆ,ಆಡಿದ ಒಂದು ಮಾತು ಕೂಡ ದೇಸಿಯೇ ಆಗುವುದೆಂಬ ಹೊಸ ನೋಟ ಸಿಕ್ಕಿದ್ದು 'ದೇಸಿ ನಗು'ವಿನಲ್ಲೆ. 'ನೊಂದು ಬೆಂದವರು' ಎಂಬುದು ಇಬ್ಬರು ಮಲೆಯಾಳಿ ಸೋದರರ ಕುರಿತಾದ ಬರೆಹ. ತಾವು ಬದುಕನ್ನು ಶ್ರಮದ ಮೂಲಕ ತೆರೆದುಕೊಳ್ಳಲೆತ್ನಿಸಿದರೆ ಆ ತೆರೆದ ಬದುಕನ್ನು ಅನ್ಯರು ಕಬಳಿಸಿದ ದುರಂತವನ್ನು ಕುರಿತ ಬರೆಹವಿದು. ಮನುಷ್ಯತ್ವದ ಒನ್ನೆಲೆಯಲ್ಲಿ ಗಮನಿಸಬೇಕಾದ ಪ್ರಬಂಧ 'ಕಸಗುಡಿಸುವ ಸ್ವಾಮೀಜಿ' ಎಂಬ ಪ್ರಬಂಧ. ನಗರದಲ್ಲಿ ನಿಂತು, ಶೋಕಿ ಮರೆತು' ಹಳ್ಳಿಯ ಶುದ್ಧ ರೈತನಂತೆ ಕಸವನ್ನೂ ಗುಡಿಸಿ, ಹೃದಯದ ಕಸವನ್ನೂ ಗುಡಿಸುವಂಥವರ ಅನಿವಾರ್ಯತೆಯನ್ನು ಶಕ್ತ ದನಿಯಲ್ಲಿ ನಿರವಿಸುತ್ತದೆ.

'ಸಿದ್ಧಾರ್ಥನನ್ನು ಬುದ್ಧನನ್ನಾಗಿಸಬೇಕಾದ ಅನಿವಾರ್ಯತೆಯನ್ನುಕಂಡುಕೊಂಡವಳು ಯಶೋಧರೆ'-ಈ ಅನೂಹ್ಯ ಕಲ್ಪನೆಯೊಂದಿಗೆ ಎದ್ದು ನಿಂತ ಪ್ರಬಂಧ 'ಯಶೋಧರೆ

ಮಲಗಿರಲಿಲ್ಲ.' 'ಹಸಿರುಕಂಡ ಯುವಕ' ಎಂಬ ಪ್ರಬಂಧ ಗಾಂಧೀಜಿಯ 'ದೇಶಸೇವೆ ಮಾಡಬೇಕಿದ್ದರೆ ಹಳ್ಳಿಗೆ ಹೋಗಿ' ಎಂಬ ಮಾತಿಗೆ ನೀಡಿದ ಪ್ರತಿಕ್ರಿಯೆಯಂತಿದೆ. ಇಂಜಿನಿಯರಿಂಗ್ ಕಲಿಸಲು ಹೇಗೋ ಕಷ್ಟಪಟ್ಟು ಎರಡು ಲಕ್ಷ ರೂಪಾಯಿ ಸಂಪಾದಿಸಿ ಮಗನಿಗೆ ಕೊಟ್ಟ ಕಿರೇಗೌಡನಿಗೆ ಐದು ವರ್ಷಗಳ ಬಳಿಕ ಬೆಂಗಳೂರು ನಗರದ ಹೊರವಲಯದಲ್ಲಿ ಬೆಳೆದುನಿಂತ ತೋಟ ನೋಡಿ, ಮಗ ಮಾಡಿದ ಕೈಚಳಕಕ್ಕೆ ಅಚ್ಚರಿಯಾಗುತ್ತದೆ. ಈ ಪ್ರಬಂಧದಲ್ಲಿ ಕಾಲ್ಪನಿಕತೆ ಮನೆಮಾಡಿದ್ದರೂ ಅದು ನೀಡುವ ಸಂದೇಶ ಅದ್ಭುತವಾಗಿದೆ. ಬಿಳಿ ಕಾಲರಿನ ಹುದ್ದೆಗೆ ಕಾಯುವವರಿಗೆ ಇದೊಂದು ನೀತಿಪಾಠವೂ ಹೌದು. ಚಿತ್ರಕಾರನೊಬ್ಬ ಕಾವ್ಯಾತ್ಮಕ ಶೈಲಿಯಲ್ಲಿ ಬರೆದಾಗ ಅದು ಕಣ್ಣಿಗೆ ಕಟ್ಟುವ ಚಿತ್ರಣವಾಗಬಲ್ಲುದು ಎಂಬುದಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯುಳ್ಳ ಚಿತ್ರಕಾರ ಎಂ.ಎಸ್.ಮೂರ್ತಿ ಬರೆದ ಇಂತಹ ಪ್ರಬಂಧಗಳು ಸಾಕ್ಷ್ಯ ಒದಗಿಸುತ್ತವೆ.

ಇಲ್ಲಿನ ಪ್ರಬಂಧಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಲೋಪದೋಷಗಳನ್ನು ತಿದ್ದಿ ಹೇಳುತ್ತವೆ. ತಪ್ಪುಗಳನ್ನು ಎತ್ತಿತೋರಿಸಿ ಜಾಲಾಡುತ್ತವೆ. ಕೆಲವೊಮ್ಮೆ ಉಪದೇಶಾತ್ಮಕವೂ ಆಗುತ್ತವೆ. ಪ್ರಬಂಧಗಳ ಕಿರುಗಾತ್ರ, ಅವುಗಳನ್ನು ವಿನ್ಯಾಸಕ್ಕೆ ಅಳವಡಿಸಿದ ಬಗೆ ಆಕರ್ಷಕವಾಗಿದೆ. ಎಲ್ಲಕ್ಕಿಂತ ಮುಖ್ಯ ಇಂದು ಹಳ್ಳಿಗಳಲ್ಲೂ ಮಾಯವಾಗುತ್ತಿರುವ, ನಗರದಲ್ಲಿ ಹುಡುಕಾಡಬೇಕಾಗಿರುವ ಅಪ್ಪಟ 'ದೇಸೀ ನಗು'ಮತ್ತೆ ಹುಟ್ಟಿ ಬರಬೇಕೆಂಬ ಅದಮ್ಯ ಕಳಕಳಿ ಹಾಗೂ ಸದಾಶಯ ಇಲ್ಲಿನ ಪ್ರಬಂಧಗಳಿಗೆ ಬಂಡವಾಳವೊದಗಿಸಿದೆ.

೨. **ಕಲಾಕ್ಷೇತ್ರದ ಮೆಟ್ಟಿಲ ಮಹಿಮೆ : ಸೂತ್ರಧಾರ ರಾಮಯ್ಯ**, ಮಂಗಳ ಪ್ರಕಾಶನ, ೬೦, ಶ್ರೀರಾಮಮಂದಿರ ರಸ್ತೆ, ಬಸವನಗುಡಿ, ಬೆಂಗಳೂರು-೫೬೦ ೦೦೪, ಪ್ರಮು. ೨೦೦೭, ಪು. ೨೫೯, ರೂ. ೧೨೦/-

ರಂಗಭೂಮಿಯ ಚರಿತ್ರೆಯನ್ನು ಹಲವರು ಹಲವು ವಿಧವಾಗಿ ಬರೆದಿದ್ದಾರೆ. ಆದರೆ ಸೂತ್ರಧಾರ ರಾಮಯ್ಯ ಬರೆದ ಹಾಗೆ ಯಾರೂ ಬರೆದಿಲ್ಲ. ಹಿಂದೆ 'ಸೂತ್ರಧಾರ' ಎಂಬ ರಂಗಪತ್ರಿಕೆಯಿದ್ದಾಗ 'ಅದೇ' ಹೆಸರನ್ನು ಜೊತೆಗೆ ಅಂಟಿಸಿಕೊಂಡು ಬಂದಿದ್ದ ರಾಮಯ್ಯ ಮುಂದೆ 'ಈ ಮಾಸ ನಾಟಕ' ಬಂದಾಗಲೂ ಹಿಂಜರಿಯಲಿಲ್ಲ. ಆ ಹೆಸರಿನಲ್ಲೇ ಮುಂದುವರಿದರು. ರಂಗಭೂಮಿಯ ಆಶ್ರಯಸ್ಥಾನವಾದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲ ಮಹಿಮೆಯನ್ನು ರಾಮಯ್ಯನೆಂಬ ಶೇಷಶಾಯೀಶನಿಂದಷ್ಟೆ ಬರೆಯಲು ಸಾಧ್ಯ!

ಮೆಟ್ಟಿಲು ಮಾತಾಡುತ್ತದೆ. ಸೂತ್ರಧಾರನ ಪ್ರಶ್ನೆಗಳಿಗೆ ಉತ್ತರವನ್ನೂ, ಉತ್ತರಗಳಿಗೆ ಪ್ರಶ್ನೆಗಳನ್ನೂ ಉಚಾಯಿಸಬಲ್ಲ ಮೆಟ್ಟಿಲದು. ದೇಶವನ್ನೆಲ್ಲ ಸುತ್ತಿಕೊಂಡು ಕಲಾಕ್ಷೇತ್ರಕ್ಕೆ ಬರುವ 'ಸೂತ್ರಧಾರ' ಮೆಟ್ಟಿಲ ಜೊತೆ ಅದಕ್ಕೆ ಅರ್ಥವಾಗುವ ಶ್ಲೇಷಾತ್ಮಕ ಭಾಷೆಯಲ್ಲಿ ದೇಶದ, ರಂಗಭೂಮಿಯ ಆಗುಹೋಗುಗಳ ಕುರಿತು ಮಾತನಾಡುತ್ತಾನೆ.ಎಷ್ಟೋ ರಂಗಕರ್ಮಿಗಳು ತಮ್ಮನ್ನು ತೆಗಳಿದ್ದಾರೆಂದು ಮುನಿಸಿಕೊಂಡದ್ದೂ ಇದೆ. ಅದು ಹೊಗಳಿದ್ದೆಂದು ತಿಳಿಯಲು ತುಂಬ ತಡವಾಗುತ್ತಿತ್ತು ಪಾಪ! ಎಷ್ಟೋ ಮಾತುಗಳು ಒಂದು ಓದಿಗೆ ಎಟಕದಿರುವುದೂ ಇದೆ. ವಿಷಯದ ಹಿನ್ನೆಲೆ ಕಿಂಚಿತ್ತಾದರೂ ಗೊತ್ತಿರಲೇಬೇಕಾಗುತ್ತದೆ.

ಕೆಳಗಿನ ಒಂದು ಉದಾಹರಣೆಯನ್ನು ಗಮನಿಸುವ: ಪ್ರೊ. ಲಕ್ಷ್ಮೀ ಚಂದ್ರಶೇಖರ್ ಎಂಬ ಕನ್ನಡದ ಖ್ಯಾತ ಕಲಾವಿದೆ 'ಹೆಣ್ಣಲ್ಲವೇ' ಎಂಬ ಏಕವ್ಯಕ್ತಿ ಪ್ರದರ್ಶನವೊಂದನ್ನು

ಸಿದ್ಧಪಡಿಸಿಕೊಂಡು ವಿದೇಶಗಳಲ್ಲಿ ಪ್ರದರ್ಶನ ನೀಡುವ ವಿವರಣೆ ಇದೆ. ಅದನ್ನು ಹೇಳುವ ರೀತಿ ನೋಡಿ:

"ಸೂತ್ರ: 'ಎಷ್ಟೇ ಆಗಲಿ ಹೆಣ್ಣಲ್ಲವೇ ೧೦೮ ಕೋಟಿ [ಬಲವಂತದಿಂದಲೂ] ಹಡೆದವಳು. ಕಷ್ಟಪಟ್ಟು, ಪೊರೆವವಳು. ೧೦೮ ಸಮಸ್ಯೆಗಳು ಭಾರತಾ ಹೊತ್ತು ಮುನ್ನಡೆದವಳು. ಆದ್ರೂ ಅಣ್ಣಾ 'ಈವ್' ಇದ್ದಾಳಲ್ಲಾ? ಈವಳು ಅವಳೇ. ಅದಕ್ಕೇ ಅವಳು ಪಾಸಿಟೀವ್, ಎಷ್ಟೇ ತಪ್ಪು ಎಸಗಿದರೂ ಅಕ್ಕಾ-ಮೊಡೇಟ್ ಮಾಡುವವಳು. ಅಕ್ಕರೆಯಿಂದ ಅಳುವವಳು. ಸದ್ಯಕ್ಕೆ ಏಕವ್ಯಕ್ತಿಯಾಗಿ ದೇಶದ ಒಳ ಹೊರಗೆ ಅನೇಕ ಸೆಂಚುರಿ ಹೊಡೆವವಳು!; ಮೆಟ್ಟಿಲು: ಓಹ್, 'ಹೆಣ್ಣಲ್ಲವೆ!' ಲಕ್ಷ್ಮೀ ಚಂದ್ರಶೇಖರ್ ಅವರಿಗೆ ಕಂಗ್ರಾಟ್ಸ್! [ಮೆ.ಮ. ಪು.೯೦]

ಮೇಲಿನದು ಕೇವಲ ಒಂದು ಸ್ಯಾಂಪಲ್ ಅಷ್ಟೆ! ರಾಮಯ್ಯ ಬರೆಯುವ ಬರವಣಿಗೆ ನೀಡುವ ದಿಢೀರ್ ದಿಢೀರ್ ಶಾಕ್, ವ್ಯಂಗ್ಯ, ವಿಡಂಬನೆ, ಹೊಗಳಿಕೆ, ತೆಗಳಿಕೆ ಹಾಗೂ ಮೊನಚು ಸದ್ಯಕ್ಕಂತೂ ಬೇರೆ ಕಡೆ ದೊರಕದು. ಅದು ದೊರಕಬೇಕಿದ್ದರೆ 'ಮೆಟ್ಟಿಲ ಮಹಿಮೆ'ಯಲ್ಲೇ ದೊರಕಬೇಕು.

–ಡಾ. ನಾ. ದಾಮೋದರ ಶೆಟ್ಟಿ, 'ಪ್ರಸಾಧನ', ಜಿಜ್ಜೈ, ಭಾರತೀನಗರ, ಮಂಗಳೂರು–೪

೩. **ಪ್ರತಿಸ್ಪಂದನ : ಜಗದೀಶ ಮಂಗಳೂರಮಠ,** ಸಿವಿಜಿ ಪಬ್ಲಿಕೇಷನ್ಸ್, ೭೦, ೨ನೇ ಮೇನ್, ಜಬ್ಬಾರ್ ಬ್ಲಾಕ್, ವಯ್ಯಾಲಿಕಾವಲ್, ಬೆಂಗಳೂರು–೫೬೦ ೦೦೩. ಪ್ರಮು. ೨೦೦೪, ಪು. ೧೨೮, ರೂ. ೧೦೦/–

'ಪ್ರತಿಸ್ಪಂದನ'ದಲ್ಲಿ ಜಗದೀಶ ಮಂಗಳೂರಮಠರಿಂದ ಆಗೀಗ ಆಯಾ ಸಂದರ್ಭಗಳಲ್ಲಿ ವ್ಯಕ್ತವಾದ ಕವಿ ಕಾವ್ಯ ವಿಮರ್ಶಾ ಲೇಖನಗಳು ಒಂದು ಭಾಗದಲ್ಲಿವೆ ಹಾಗೂ ಒಂದು ವಾರಪತ್ರಿಕೆಗೆ ಬರೆದ ಅಂಕಣ ಬರಹಗಳು ಎರಡನೆಯ ಭಾಗದಲ್ಲಿವೆ.

ಮಾನವೀಯ ಮೌಲ್ಯಗಳಿಗೆ ಸ್ಪಂದನೆ ಮತ್ತು ಒಂದು ಕೃತಿ ಕಲಾಕೃತಿಯಾಗಿರಲೇಬೇಕೆಂದು ಬಲವಾಗಿ ನಂಬಿದ ಮಂಗಳೂರಮಠರ ಇಲ್ಲಿಯ ಲೇಖನಗಳಲ್ಲಿ ಮಾನವೀಯ ಮೌಲ್ಯಗಳು ಸ್ಥಾಯಿ ಗುಣಗಳಾಗಿವೆ. ಕೃತಿಯ ಭಾಷೆ, ಭಾವ, ಬಂಧ ತನ್ನದೇ ಆದ ಸೊಗಡು ಮತ್ತು ನಿರ್ಣಯಗಳು ಪರಿಣಾಮ ಬೀರುತ್ತವೆ.

ಮೊದಲ ಭಾಗದಲ್ಲಿ ಬರಗೂರು, ಯರ್ಮುಂಜ ರಾಮಚಂದ್ರ, ಎಂ. ಡಿ. ಗೋಗೇರಿ, ಪ್ರಹ್ಲಾದ ಅಗಸನಕಟ್ಟೆ, ಡಿ. ಎಸ್. ಕರ್ಕಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಬಿ. ವಿ. ಕಾರಂತರನ್ನು ಕುರಿತ ೭ ಒಳ್ಳೆಯ ಅಧ್ಯಯನಪೂರ್ಣ ಲೇಖನಗಳಿವೆ.

ಎರಡನೆಯ ಭಾಗದಲ್ಲಿ ಶರಣರ ಕೊಡುಗೆ, ಮೂಢನಂಬಿಕೆಗಳು, ರಾಜ್ಯೋತ್ಸವದ ಸಾಂಕೇತಿಕತೆಯ ಪ್ರಶ್ನೆ, ಕಾವೇರಿ ಸಮಸ್ಯೆ, ಸ್ವಾಮಿನಾರಾಯಣ ಮಂದಿರ ಮೇಲಿನ ಹಲ್ಲೆ, ಪ್ರಜಾಪ್ರಭುತ್ವ, ಭ್ರಷ್ಟಾಚಾರ ಮುಂತಾದ ವಿಷಯಗಳನ್ನು ಪ್ರಾಮಾಣಿಕವಾಗಿ ಚರ್ಚಿಸುವ ೨೦ ಲೇಖನಗಳಿವೆ. ಮಂಗಳೂರಮಠದ ವಿಶ್ಲೇಷಣೆಯ ರೀತಿ ಹಾಗೂ ಅವರದೇ ಆದ ನಿಲುವುಗಳು ಅವರ ವಿಮರ್ಶನ ಶಕ್ತಿಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ.

–ಮಹಾಂತಪ್ಪ ನಂದೂರ, ೧೧, ರಣಕಪುರ ಲೇಔಟ್, ಶಾಂತಿನಗರ, ಹುಬ್ಬಳ್ಳಿ–೨೩.

೧. ಪ್ರಿಯ ಪಟ್ಟಣಶೆಟ್ಟಿ ಅವರಿಗೆ

ನಮಸ್ಕಾರಗಳು. ಎಲ್ಲ ಕ್ಷೇಮ ತಾನೆ?

ಈ ಅಭ್ಯಾಸ ಬಲವೆಂಬುದೊಂದಿದೆಯಲ್ಲ. ಅದು ತುಂಬಾ ಕೆಟ್ಟದ್ದು ಪಟ್ಟಣಶೆಟ್ಟಿಯವರೆ. ಪ್ರತಿ ತಿಂಗಳು, ಎರಡು ತಿಂಗಳಿಗೊಮ್ಮೆ ಒಂದು ರೂಢಿಯಾಗಿ ಹೋದ ಪತ್ರಿಕೆಗಳು ಬಾರದೇ ಹೋದರೆ ಮನಸ್ಸು ಒಂದಿಷ್ಟು ನೆಮ್ಮದಿ ಕಳಕೊಳ್ಳುತ್ತದೆ. ಸಮಯಕ್ಕೆ ಸರಿಯಾಗಿ ಬರುತ್ತಿದ್ದ 'ಸಂಕಲನ'ವು (ಜನವರಿ+ಫೆಬ್ರವರಿ-೦೮) ಬಾರದೇ ಹೋದ ಮೇಲೆ ಹಾಗಾಯಿತು. ಈ ಹಾಳು ಮುಂಬಯಿ ಜೀವನವೊಂದಿದೆಯಲ್ಲ ಪಟ್ಟಣಶೆಟ್ಟಿಯವರೆ, ಕೆಲವೊಮ್ಮೆ ಅತಿ ಮುಖ್ಯವಾದ ಸಂಗತಿಗಳನ್ನೇ ನಾವು ಮರೆತುಬಿಡುತ್ತೇವೆ. ಚಂದಾ ಕಳಿಸದೇ ಇದ್ದುದು ನನ್ನ ತಪ್ಪು. ಒಪ್ಪುತ್ತೇನೆ. ಆದರೆ ಆ ಕಾರಣಕ್ಕಾಗಿ ನೀವು 'ಸಂಕಲನ' ಕಳಿಸುವುದನ್ನು ನಿಲ್ಲಿಸಿಬಿಡಬಾರದಿತ್ತು. ನನಗೆ ಕೊಂಚ ನೋವೂ ಕೊಂಚ ಬೇಸರವೂ ಆಯಿತು. ನಿಮಗೆ ನೆನಪಿರಬೇಕು ಮೂರು ವರ್ಷಗಳ ಹಿಂದೆ ಓದುಗರಿಂದ ಸಹಕಾರ ದೊರೆಯದೇ ಹೋದರೆ 'ಸಂಕಲನ'ವನ್ನು ನಿಲ್ಲಿಸಬೇಕಾದೀತೆಂದು ನೀವು ಬರೆದಾಗ ವಿಳಂಬ ಮಾಡದೇ ಮೂರು ವರ್ಷಗಳ ಚಂದಾ ಹಣ ಕಳಿಸಿದ್ದೆ, ಒಳ್ಳೆಯ ಪತ್ರಿಕೆಯೊಂದು ನಿಂತು ಹೋಗಬಾರದೆನ್ನುವ ಉದ್ದೇಶದಿಂದ. ನಾನೊಬ್ಬ ವ್ಯಾಪಾರಸ್ಥ. ಲೆಕ್ಕಾಚಾರದ ಮನುಷ್ಯ. ಆದರೆ ಸಾಹಿತ್ಯದ ವಿಷಯದಲ್ಲಿ ಲೆಕ್ಕಾಚಾರ ಸಲ್ಲದು ಎಂದು ನಾನು ಕಲಿತದ್ದು ಸಾಹಿತಿ-ಕವಿಗಳಿಂದಲೇ. ಈ ಲೆಕ್ಕಾಚಾರ ಗಿಕ್ಕಾಚಾರವನ್ನು ಸಾಹಿತ್ಯಕ್ಕೆ ಸಂಬಂಧಿಸಿರುವಾಗ ಗಾಳಿಗೆ ತೂರಿಬಿಡುತ್ತೇನೆ. ನನಗೆ ನೋವಾಯಿತು ಎಂದು ಬರೆದಿದ್ದೇನೆ. ಹೌದು. ಖಂಡಿತ. ಇದನ್ನು ನಾನು ನಿಮ್ಮಿಂದ ಬಯಸಿರಲಿಲ್ಲ. ವಾರ್ಷಿಕ ಚಂದಾ ಕಳಿಸುತ್ತಿದ್ದೇನೆ- ನವೀಕರಿಸಲು.

I am sorry for being blunt. If I appear to be blunt I think I am justified. ಪ್ರೀತಿ ಇರಲಿ.

ಇತಿ ನಿಮ್ಮ,

ಶ್ರೀನಿವಾಸ್ ಜಿ. ರಾವ್, ಮಾತುಂಗಾ, ಮುಂಬಯಿ-೧೯

೨. 'ಸಂಕಲನ' ಸಂಚಿಕೆಯಿಂದ ಸಂಚಿಕೆಗೆ ಗುಣ-ಗಾತ್ರ ಎರಡರಲ್ಲೂ ಸಮೃದ್ಧವಾಗಿ ಬರುತ್ತಿದೆ. / 'ನನ್ನ ಅವ್ವ ನನ್ನ ಅಪ್ಪ', 'ನನ್ನ ಶಾಲಾ ಗುರುಗಳು' ಸ್ಥಿರ ಅಂಕಣಗಳ ಜೊತೆಗೆ ಉಳಿದ ಲೇಖನಗಳು ಬುದ್ಧಿ ಹೃದಯಗಳಿಗೆ ಅಪ್ಯಾಯಮಾನವೆನಿಸುತ್ತವೆ.

'ಕಾರಂತರ ಜೀವಂತ ಪಾತ್ರಗಳು'- ಸಿ. ಸೋಮಶೇಖರಯ್ಯನವರ ಲೇಖನ ಒಂದು ಒಳ್ಳೆಯ ಅಧ್ಯಯನ. ಅವರ ಗ್ರಹಿಕೆ- ಪೂರ್ವಗ್ರಹಮುಕ್ತ ಗ್ರಹಿಕೆ- ಮೆಚ್ಚುವಂಥಾದ್ದು.

ಶ್ರೀರಂಗರನ್ನು ಕುರಿತ ಕಳೆದ ಸಂಚಿಕೆಯ ನಿಮ್ಮ ಲೇಖನ ಅಗತ್ಯವಾಗಿದ್ದ ಅರ್ಥಪೂರ್ಣ ವಾದ ಸ್ಮರಣೆ. ಶ್ರೀನಿವಾಸ ಹಾವನೂರರು ಈ ಸಂಚಿಕೆ(೩೭)ಯಲ್ಲಿ ಇನ್ನಷ್ಟು ಬೆಳಕು ಹಾಯಿಸಿದ್ದಾರೆ. / ಬಸವರಾಜ ವಕ್ಕುಂದರ 'ಮೀರಾ ಪ್ರೇಮ ಧಾರಾ' ಅನುವಾದ ಹೃದಯಂಗಮವಾಗಿದೆ. / 'ಒನ್ನೇಪುಟ' ಬಿಡಬೇಡರಿ ಎಂಬ ಅನೇಕರ ದನಿಗಳ ಜೊತೆ ನಾನೂ ದನಿಗೂಡಿಸುತ್ತಿದ್ದೇನೆ.

'ನನ್ನ ಅವ್ವ ನನ್ನ ಅಪ್ಪ' ನಿಮ್ಮ ಮಾಲಿಕೆಯನ್ನು 'ಪ್ರಜಾವಾಣಿ' ಹೈಜಾಕ್ ಮಾಡಿದೆ.

-ಜಿ. ಎನ್. ರಂಗನಾಥ ರಾವ್, ಬೆಂಗಳೂರು.

೩. ತಾವು 'ಸಂಕಲನ-೩೭' ರಲ್ಲಿ 'ಶ್ರೀರಂಗರ ಸಾಮಾಜಿಕ ಕಾರ್ಯಗಳು' ಲೇಖನದಲ್ಲಿ ಶ್ರೀರಂಗರು ಕರ್ನಾಟಕದ ಏಕೀಕರಣಕ್ಕಾಗಿ, ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗಾಗಿ

ಹಗಲಿರುಳು ನಿಃಸ್ವಾರ್ಥರಾಗಿ ದುಡಿದಿದ್ದನ್ನು, ಅವರ ಬದುಕಿನ ಏಳು ಬೀಳುಗಳನ್ನು ಚಿತ್ರಿಸಿದ್ದೀರಿ. ಡಾ. ಶ್ರೀನಿವಾಸ ಹಾವನೂರರು ಶ್ರೀರಂಗರನ್ನು ಹತ್ತಿರದಿಂದ ನೋಡಿದವರಾದ್ದರಿಂದ ಶ್ರೀರಂಗರು ನಾಡುನುಡಿಗಾಗಿ ಪಟ್ಟ ಶ್ರಮ, ಜೀವನದಲ್ಲಿ ಅನುಭವಿಸಿದ ಕಷ್ಟಗಳ ಸರಮಾಲೆ, ಕೊನೆಕೊನೆಗೆ ಜೀವನ ಸಾಗಿಸಲು ಪಟ್ಟ ಪಾಡುಗಳನ್ನು 'ಸಂಕಲನ-೩೮' ರಲ್ಲಿ ಮನ ಕಲಕುವಂತೆ ನೇರವಾಗಿ ಹೇಳಿದ್ದಾರೆ. ನಾಡುನುಡಿಗಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿದ್ದ ಶ್ರೀರಂಗರನ್ನು ನಾಡು ಹೀಗೆ ನೋಯಿಸಿದ್ದು ಅಕ್ಷಮ್ಯ ಅಪರಾಧ. / 'ಸಂಕಲನ'ದಲ್ಲಿ ತಮ್ಮ 'ಒನ್ನೇಪುಟ' ಇಲ್ಲದೇ ಇರುವುದು ಒಂದು ಕೊರತೆ. ದಯವಿಟ್ಟು ಮುಂದುವರಿಸಿರಿ.

–ಜಿ. ಹೆಚ್. ಪ್ರಸಾದ್, ಹಾಸನ

೪. 'ಸಂಕಲನ-೩೮' ರಲ್ಲಿ ನನ್ನ ಲೇಖನ 'ನನ್ನ ಅವ್ವ ನನ್ನ ಅಪ್ಪ' ಪ್ರಕಟಿಸಿರುವುದು ಸಂತೋಷವಾಗಿದೆ. ನಾನು ಈ ಲೇಖನಕ್ಕಾಗಿಯೇ ತುಂಬ ಕಾಲದಿಂದ ಕಾಯುತ್ತಿದ್ದುದು. ನನ್ನ ಬರವಣಿಗೆಯಲ್ಲೇ ಬಹುಶಃ ನನಗೆ ಅತ್ಯಂತ ಪ್ರಿಯವಾದ ಲೇಖನವೆಂದರೆ ಇದೇ. ಅದಕ್ಕೆ ಕಾರಣ ನಾನು ನನ್ನ ತಂದೆ ತಾಯಿಗಳನ್ನು ತುಂಬ ಪ್ರೀತಿಸುತ್ತಿದ್ದುದು. ನನಗೆ ಅವರ ಸ್ಮರಣೆ ಬಂದಾಗಲೆಲ್ಲ ಅವರೆಲ್ಲಿ ನಾವೆಲ್ಲಿ ಅನಿಸಿಬಿಡುತ್ತದೆಯಲ್ಲವೆ, ಪಟ್ಟಣಶೆಟ್ಟಿಯವರೆ? ನೀವು ಈ ಹಿಂದೆ ಸಂಕಲನದಲ್ಲಿ ನಿಮ್ಮ ತಾಯಿಯವರ ಬಗ್ಗೆ ಬರೆದಿದ್ದ ಮಾತುಗಳನ್ನು ಓದಿದಾಗ ನನ್ನ ಕಣ್ಣುಗಳು ತೇವಗೊಂಡಿದ್ದವು. ಅನೇಕ ವಿಷಯದಲ್ಲಿ ನನಗೂ ನಿಮಗೂ ತುಂಬ ಸಾಮ್ಯವಿದೆಯೆಂದು ನನಗೆ ಅನೇಕ ಸಲ ಅನ್ನಿಸಿದ್ದುಂಟು.

–ಪ್ರೊ. ಶ್ರೀನಿವಾಸ್ ಜಿ. ಸುತ್ರಾವೆ, ದಾವಣಗೆರೆ

೫. 'ಸಂಕಲನ' ಬಂದ ಕೂಡಲೇ ಒಮ್ಮೆ ಪರಿವಿಡಿ ನೋಡುವುದು ನನ್ನ ಅಭ್ಯಾಸ. ಹಾಗೆ ಕಣ್ಣಾಡಿಸುತ್ತಿರುವಾಗ 'ನನ್ನ ಶಾಲಾ ಗುರುಗಳು' (ಸಂ-೩೮) ಲೇಖನ ನನಗೆ ಪರಿಚಿತರಾದ ಕುತ್ಪಾಡಿ ಆನಂದ ಗಾಣಿಗರವರದ್ದಾಗಿರುವುದರಿಂದ ಕುತೂಹಲದಿಂದ ಓದಲು ಕೂತೆ. ಆಶ್ಚರ್ಯವೆಂದರೆ ಅವರ ಮೊದಲ ಗುರು ನನ್ನಜ್ಜ ಕುತ್ಪಾಡಿ ತೇಜಪ್ಪ ಶೆಟ್ಟಿ ಅವರು. ನಾನು ಕಣ್ಣಲ್ಲೂ ನೋಡದ ನನ್ನಜ್ಜನ ಬಗ್ಗೆ ಅಲ್ಪಸ್ವಲ್ಪ ಕೇಳಿ ತಿಳಿದದ್ದಿದ್ದರೆ ಅದು ನನ್ನಮ್ಮನಿಂದ ಮಾತ್ರ, ಆಕೆ ಆಗಾಗ ಅವರ ಸಜ್ಜನಿಕೆಯ ಬಗ್ಗೆ ನೆನಪಿಸಿಕೊಳ್ಳುತ್ತಿದ್ದುದುಂಟು. ಅದು ಎಲ್ಲ ಮಗಳಂದಿರ ಮನೋಭಾವವೆಂದು ಸುಮ್ಮನಿದ್ದೆ. ಆದರೆ ಆನಂದ ಗಾಣಿಗರು ಓರ್ವ ಶಿಷ್ಯನಾಗಿ ಅವರ ಬಗ್ಗೆ ಬರೆದುದನ್ನು ನೋಡಿ ಮನಸ್ಸು ತುಂಬಿ ಬಂತು.

ಹೌದು, ಈ ಜಗತ್ತಿನಲ್ಲಿ ಅದೆಷ್ಟೋ ಮಂದಿ ಮೇಷ್ಟುಗಳು ಯಾವ ಸದ್ದುಗದ್ದಲವಿಲ್ಲದೇ ಪ್ರಾಮಾಣಿಕವಾಗಿ ದುಡಿಯುತ್ತಾ, ನಿಸ್ಪೃಹವಾದ ಪ್ರೀತಿಯನ್ನು ತಮ್ಮ ವಿದ್ಯಾರ್ಥಿಗಳಿಗೆ ಉಣಬಡಿಸುತ್ತಾ ಕಾಲನ ಕರೆಗೆ ಓಗೊಟ್ಟವರು. ಅವರೆಂದೂ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದವರಲ್ಲ. ಮಾಧ್ಯಮಗಳಲ್ಲಿ ವಿರಾಜಿಸಿದವರಲ್ಲ. ಅಂತಹ ಬಯಕೆಯೂ ಇದ್ದವರಲ್ಲ. ಅವರ ಬದುಕು ಪ್ರಕೃತಿಯಲ್ಲಿ ಹೂ ಅರಳಿದಂತೆ. ಅಂತಹ ನೂರು ಮೇಷ್ಟ್ರುಗಳು ತಮ್ಮ ಶಿಷ್ಯರುಗಳ ಲೇಖನಿಯಿಂದ ಮರಳಿ ಜೀವ ತಳೆಯುವ ಅವಕಾಶ ದೊರೆತದ್ದು 'ಸಂಕಲನ'ದ ಈ ವಿಶಿಷ್ಟ ಲೇಖನಮಾಲಿಕೆಯಿಂದ. ಹಾಗಾಗಿ ಮೊದಲು ಕೃತಜ್ಞತೆ ಹೇಳಬೇಕಾದದ್ದು ನಿಮಗೆ, ವಿನೂತನ ಮಾದರಿಯಲ್ಲಿ ಬರುತ್ತಿರುವ 'ಸಂಕಲನ' ಪತ್ರಿಕೆಗೆ.

–ರೇಖಾ ವಿ. ಬನ್ನಾಡಿ, ಕುಂದಾಪುರ

೬. ಆರಂಭದಿಂದಲೂ 'ಸಂಕಲನ' ಚೆನ್ನಾಗಿ ಬರುತ್ತಿದೆ. ಮುಂದೆಯೂ ಇದೇ ರೀತಿ ಗುಣಮಟ್ಟವನ್ನು ಕಾಪಾಡಿಕೊಂಡು ಮುಂದುವರಿಯಲಿ. ಇದನ್ನು ಉಳಿಸಿಕೊಳ್ಳಲು ನೀವು ಪಟ್ಟ ಶ್ರಮ ನಿಜವಾಗಿಯೂ ಸಾರ್ಥಕ.

–ಡಿ. ಕೆ. ಸುವರ್ಣ, ಮುಂಬಯಿ-೬೨

ಇಷ್ಟು ಪುಸ್ತಕಗಳನ್ನ ಹೆಂಗ ಸಂಗ್ರಹಿಸಿದಿರಿ? ಯಾರಾದರೂ ಕೊಟ್ಟರೋ ಏನ ನೀವ್‌ಅ ಹೋಗಿ ಇಸಗೊಂಡ ಬಂದಿರೋ?- ಅಂತ ಕೇಳಿದೆ. ಪುಸ್ತಕಗಳ ಬಗ್ಗೆ ಮಾತ್ರ ನನಗ ಮದಲಿಂದ ಅಪಾರ ಮಮತೆ, ಗೌರವ. ನೀವು ಯಾವುದ್‌ಅ ಪುಸ್ತಕ ಓದಿರಿ, ಅಥವಾ ಅದನ್ನ ನಿಮ್ಮ ಹತ್ತರ ಇಟಗೊಂಡಿರ್ರಿ, ಅದರಿಂದ ನಿಮ್ಮ ವ್ಯಕ್ತಿತ್ವಕ್ಕೆ ಏನಾದರೂ ಸ್ವಲ್ಪ ಜೋಡಿಕಿ, ಕೂಡಿಕಿ, ಸೇರಿಕಿ ಅಂತ ಆಗೇ ಆಗತಯ್ತಿ. ಈ ಭಾವನಾ ಇದ್ದಿದ್ದರಿಂದನ್‌ಅ ನಾನು ಪುಸ್ತಕಗಳನ್ನ ಸಂಗ್ರಹಿಸೂ ನಿರ್ಧಾರ ಮಾಡಿದೆ; ಮತ್ತ ನಿಮಗ ಗೊತ್ತು, ಹೊಟ್ಟಿ ಹಸದರ, ಅದು ದಿನಾ ಹಸದ್‌ಅ ಹಸಿತಯ್ತಿ, ಅನಿವಾರ್ಯವಾಗಿ ಬೇಡತೇವಿ. ಅಥವಾ ಆ ಹಸಿವೀ ಹಿಂಗಸಾಕ ಏನಾದರೂ ದಾರಿ ಹುಡುಕಿಕೋತೇವಿ. ಆದರ ಪುಸ್ತಕ ಹಂಗಲ್ಲ, ಅದರ ಹಸಿವೀನ ನಮ್ಮ ತಲ್ಯಾಗ, ನಮ್ಮ ಮನಸನ್ಯಾಗ ನಾವ್‌ಅ ಹುಟ್ಟಿಸಿಕೊಬೇಕಾಕ್ಕತಿ. ಹಿಂಗಾಗಿ ನಾನು ಸಾಧ್ಯ ಇದ್ದಷ್ಟು ಅವುನ್ನ ನಾನ್‌ಅ ಸಂಗ್ರಹಿಸುವ ನಿರ್ಧಾರ ಮಾಡ ಕೋಂಡೇನಿ. ಆಗಾಗ ನಿಮ್ಮಂಥ ತಿಳಿದವರಿಂದ ಕೇಳಿ ಒಳ್ಳೊಳ್ಳೆ ಪುಸ್ತಕಗಳ ಒಂದ ಪಟ್ಟಿ ಮಾಡಕೊಂಡಿರ್ತೇನಿ. ಕೆಲವು ಲೇಖಕರ ಎಲ್ಲಾ ಪುಸ್ತಕ ಸಂಗ್ರಹಿಸಬೇಕಂತನೂ ಇಟಗೊಂಡೇನಿ. ಸಾಹಿತ್ಯ ಸಮ್ಮೇಳನ, ಪುಸ್ತಕ ಮೇಳ ಇತ್ಯಾದಿ ಕಡೆ ಸ್ವತಃ ಹೋಗಿ ಪುಸ್ತಕ ಹುಡಕತೇನಿ, ನನ್ನ ಜೋಳಿಗ್ಯಾಗ ಆ ಕಾಲಕ್ಕ ಇದ್ದಷ್ಟು ಧನ-ಬಲದಿಂದ ಸಾಧ್ಯವಿದ್ದಷ್ಟು ಪುಸ್ತಕ ಖರೀದಿ ಮಾಡತೇನಿ. ಮತ್ತ ಕೆಲವರು ನನ್ನ ಪುಸ್ತಕ ಪ್ರೀತಿ ನೋಡಿ ಇತ್ತೀಚಿಗೆ ತಾವುನೂ ಈ ಮಠಕ್ಕ ಕಳಸಾಕಹತ್ಯಾರ. ಈ ಪುಸ್ತಕ ಪ್ರೀತಿನೂ ನಮ್ಮ ಕನ್ನಡ ಜಗದ್ಗುರು ತೋಂಟದ ಸ್ವಾಮಿಗಳ ಪ್ರಸಾದರೀ ನಮಗ, ಅಂದರು ಪ್ರಭುಗಳು. ಇಂಥ ವಿಶಿಷ್ಟ ಪುಸ್ತಕ ಪ್ರೀತಿಯ ಈ 'ಪ್ರಭು' ಹೆಸರಿನ ನಿರ್ಧನ 'ಸ್ವಾಮಿ' ಕಯ್ಕೊಂಡ ಪುಸ್ತಕ ಕಾಯಕ + ದಾಸೋಹ ಸಯ್ತಿ ಬಹಳ ಅಗತ್ಯದ್ದು ಮತ್ತು ಮಹತ್ವದ್ದು ಅನಿಸ್ತು.

ಬಡ ಮಕ್ಕಳಿಗಾಗಿ ಕಷ್ಟಪಟ್ಟು ಎಷ್ಟೊಂದು ಅನೂಲಿ ಪಟಗೊಂಡು ಇವರು ಅನ್ನದಾನದ ವ್ಯವಸ್ಥಾ ಮಾಡಿದ್ದು ಸಯ್ತ ದೊಡ್ಡ ಸೇವಾ ಅನಿಸ್ತು. ಅನ್ನದಾನ, ಅಕ್ಷರದಾನಗಳ್‌ಅ ನಿಜವಾದ ಜೀವನ ದಾನ. ನಾವು ಸಮಾಜದ ಸಲುವಾಗಿ ಮದಲ ವ್ಯವಸ್ಥಾ ಮಾಡಬೇಕಾಗಿದ್ದು ಹೊಟ್ಟೀ ಒಳಗಿನ ಕಿಚ್ಚನ್ನ ಆರಿಸುವ ಅನ್ನದ ವ್ಯವಸ್ಥಾ. ಅನ್ನದ ಕೂಡ ಅಕ್ಕರೆ, ಪ್ರೀತಿ, ವತ್ಸಲತೆ. ಅದರ ಕೂಡ ಅಕ್ಕರ, ಅಂದರ ಅಕ್ಷರ ಕೊಡಬೇಕು. ಅಕ್ಕರೆಯಿಂದ ನೀಡಿದ ಅಕ್ಕರದೊಳಗ ದನಿ ಇರತಯ್ತಿ. ದನಿ ಧ್ವನಿಪೂರ್ಣ ಆತಂದರ ವಿಚಾರ ಆಕ್ಕತಿ, ತರ್ಕ ಆಕ್ಕತಿ, ಸಂಗೀತ ಆಕ್ಕತಿ, ಸಮಾಧಾನ ಆಕ್ಕತಿ, ನಿಷ್ಠಾ ಆಕ್ಕತಿ, ನೆಮ್ಮದಿ ಆಕ್ಕತಿ. ಆಗ ಅಂಥಾ ಪ್ರತಿಯೊಂದು ಮಾರೀ ಮ್ಯಾಲ ಸಹಜದ ಅರಿವು ತಾನಾಗಿ ಮೂಡತಯ್ತಿ. ಅಂಥಾ ಅರಿವು ಆ ಮಕ್ಕಳ ಮಾರೀ ಮ್ಯಾಲ ನಕ್ಕರ ಸಾಕಲ್ಲರಿ, ನಮಗ ಅದಕ್ಕಿಂತ ಹೆಚ್ಚಿನ ಧನ್ಯತಾ ಇನ್ನೇನ ಅಯ್ತಿ? ಇದನ್ನ್‌ಅ ಅಲ್ಲೇನ್ರಿ ಒಬ್ಬ ಸ್ವಾಮಿ ಆದಾವ್ನ ಸಾಧಿಸಬೇಕಾಗಿದ್ದು? ಇದ್‌ಅ ಅಲ್ಲೇನ್ರಿ ಸಮಾಜದ ರಿಣಾ ತೀರಿಸೂ ರೀತಿ...?

ಪ್ರಭುಸ್ವಾಮಿಗಳ ಮಾತಿನ ಕಾವಿಗೆ ವಿಚಾರದ ರೊಟ್ಟಿ, ಒಲವಿನ ಅನ್ನ ತಾನಾಗಿ ಹಾಳತ ಬೆಂದು ಅಡಿಗಿ ತಯಾರಾಗಿತ್ತು. ಅವರು ಸ್ವತಃ ಎದ್ದು ಸಾವಕಾಶ ನಮ್ಮ ಮುಂದಿನ ಮಂಡ್ಯಾಳ ತೀರಿದ ಹಾಳಿ ಸರಸಿ, ಗಂಗಾಳ ಹಾಕಿದ್ದು, ಬುಟ್ಯಾಗಿನ ಕಟಕ ರೊಟ್ಟಿ, ಚಟ್ನಿ, ಗಟ್ಟಿ ಮಸರು, ಸವತೀಕಾಯಿ ಪಲ್ಲೆ ನೀಡಿದ್ದು ನೋಡಿದೆವು. ರೊಟ್ಟಿಯ ಒಂದೊಂದು ತುಣಕಿನ್ಯಾಗೂ, ಅನ್ನದ ಒಂದೊಂದ ಅಗುಳಿನ್ಯಾಗೂ ಪ್ರಭು-ಸ್ಮಿತಿಯ ಅಕ್ಕರೆ ಹಸನಾಗಿ ಸಿದ್ಧ-ಸ್ಥಿತಿಯಲ್ಲಿಯೊಳಗ ನಗತಿತ್ತು.

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಸಂಕಲನಕ್ಕೆ ಲೇಖನಗಳನ್ನು 'ನುಡಿ' ಅಕ್ಷರಗಳಲ್ಲಿ ಟೈಪ್ ಮಾಡಿ **E-mail : sankalana.sp@gmail.com** ಅಥವಾ **siddhaling.pattanshetti@rediffmail.com** ಅಥವಾ ಕೈಬರೆಹದ / ಟೈಪ್ ಮಾಡಿದ / ಡಿ.ಟಿ.ಪಿ ಮಾಡಿದ ಮೂಲಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಬೇಡ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆ ಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೪. ಈಗಾಗಲೇ 'ಪುಸ್ತಕ ಪರಿಶೀಲನೆ'ಗಾಗಿ
ಬಂದಿರುವ ಬಹಳಷ್ಟು ಪುಸ್ತಕಗಳು
ನಮ್ಮಲ್ಲಿ ಉಳಿದಿವೆ.
ಅನೇಕ ಪುಸ್ತಕಗಳ ರಿವ್ಯೂ
ವಿಮರ್ಶಕರಿಂದ ಬಂದಿಲ್ಲ.
ಹೀಗಾಗಿ
ಮುಂದೆ ನಾವು ತಿಳಿಸುವ ವರೆಗೆ
ದಯವಿಟ್ಟು ಲೇಖಕರು
ತಮ್ಮ ಪುಸ್ತಕಗಳನ್ನು
ಪುಸ್ತಕ ಪರಿಶೀಲನೆಗಾಗಿ
ಸಂಕಲನಕ್ಕೆ ಕಳಿಸಬಾರದಾಗಿ
ವಿನಂತಿ.

SANKALANA : R N I No. KARKAN 14160 /10 / 1 / 2002 - TC

ಸಂಕಲನ-೩೯ : ಮೇ + ಜೂನ್ ೨೦೦೮

ಸಂಪುಟ ೭ : ಸಂಚಿಕೆ ೩

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

ಗಿರಿಜಾ ಶಾಸ್ತ್ರಿ
ಎಂ. ಎಸ್. ರುದ್ರೇಶ್ವರಸ್ವಾಮಿ, ಕು. ಗೋ.
ಕೆ. ವಿ. ಉಭಯಭಾರತಿ
ರಾಮಗಿರಿ ರವೀಂದ್ರ, ಸಿ. ಸೋಮಶೇಖರಯ್ಯ
ಸಿ. ಪಿ. ಕೆ.
ಮ. ನ. ಜವರಯ್ಯ, ರಾಧಿಕಾ ಕಾಖಂಡಿಕಿ
ರಾಯಚೂರು ಲಕ್ಷ್ಮೀದೇವಿ ಶಾಸ್ತ್ರಿ
ಜಂಬಣ್ಣ ಅಮರಚಿಂತ, ಕುಂ. ವೀರಭದ್ರಪ್ಪ
ಸಿ. ಎನ್. ರಾಮಚಂದ್ರನ್
ನ. ಭ. ನೆಂಪು, ಬಸವರಾಜ ವಕ್ಕುಂದ

ನಾ. ದಾಮೋದರ ಶೆಟ್ಟಿ
ಮಹಾಂತಪ್ಪ ನಂದೂರ

ಶ್ರೀನಿವಾಸ್ ಜಿ. ರಾವ್
ಜಿ. ಎನ್. ರಂಗನಾಥ ರಾವ್, ಜಿ. ಹೆಚ್. ಪ್ರಸಾದ್
ಶ್ರೀನಿವಾಸ್ ಜಿ. ಸುತ್ರಾವೆ
ರೇಖಾ ವಿ. ಬನ್ನಾಡಿ, ಡಿ. ಕೆ. ಸುವರ್ಣ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪